# ಬಾಳ್ಕ್ ಬೊಳಿ

## ನೀತಿಸಾರ

( ಚೇಂದ್ರಿಮಾಡ ಜಿ. ಮುತ್ತಪ್ಪ )

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

ಮಡಿಕೇರಿ

BVP-1058, 9/1/17
(5) 1050-86/87.

## ಕರ್ನಾಟಕ ಕೊಡವ ಸಾಹಿತ್ಯ ಅಕಾಡಮಿ ಸದಸ್ಯಂಗ

| | |
|---|---|
| ಶ್ರೀ ಮೇಕೇರಿರ ಕೆ. ಕಾರ್ಯಪ್ಪ | - ಅಧ್ಯಕ್ಷ |
| ಶ್ರೀ ಕೊರವಂಡ ಎ. ಗಣಪತಿ | - ರಿಜಿಸ್ಟ್ರಾರ್ |
| ಶ್ರೀ ಮಾತಂಡ ಸಿ. ಮೊಣ್ಣಪ್ಪ | - ಅಧ್ಯಕ್ಷ<br>ಅಖಿಲ ಕೊಡವ ಸಮಾಜ |
| ಶ್ರೀ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ | - ಸದಸ್ಯ |
| ಶ್ರೀಮತಿ ದೇಯಂಡ ರುಕ್ಮಿಣಿ ಕುಶಾಲಪ್ಪ | - ಸದಸ್ಯೆ |
| ಶ್ರೀಮತಿ ಬಿದ್ದಂಡ ಸರೋಜಿನಿ ಅಚ್ಚಪ್ಪ | - ಸದಸ್ಯೆ |
| ಶ್ರೀ ಕಾಮೆಯಂಡ ಎ. ಮುತ್ತಣ್ಣ | - ಸದಸ್ಯ |
| ಶ್ರೀ ಕಾಕೆರ ಕೆ. ಸುಬ್ರಾಯ | - ಸದಸ್ಯ |
| ಶ್ರೀ ಅಚ್ಚಿಯಂಡ ಎಂ. ಅಯ್ಯಪ್ಪಮ್ಮಯ್ಯ | - ಸದಸ್ಯ |
| ಶ್ರೀ ಪಾಲಂದಿರ ಅಯ್ಯಪ್ಪ | - ಸದಸ್ಯ |
| ಶ್ರೀ ಚಿರಿಯಪಂಡ ಕಾಶಿಯಪ್ಪ | - ಅಧ್ಯಕ್ಷ,<br>ಕೊಡವ ಸಮಾಜ, ಪೊನ್ನಂಪೇಟೆ |
| ಶ್ರೀ ನೆರವಂಡ ಎಂ. ಉಮೇಶ್ | - ಸದಸ್ಯ |
| ಶ್ರೀಮತಿ ಐಮುಡಿಯಂಡ ರಾಣಿ ಮಾಚಯ್ಯ | - ಸದಸ್ಯೆ |

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

ಮಡಿಕೇರಿ

# ಬಾಳ್‌ಕ್ ಬೊಳಿ

## ನೀತಿಸಾರ

( ಚೇಂದ್ರಿಮಾಡ ಜಿ. ಮುತ್ತಪ್ಪ )

**'BALEK BOLI'** - Collection of articles which directs the society towards good path and helps one to go ahead searching goodness in his life is written by Sri Chendrimada G. Muthappa is being published by the Karnataka Kodava Sahithya Academy, Madikeri on the auspecious day of Kodava Thakk Namme on 22-04-2000.

ಕ್ರಯ ಉ. **10**

**ಹಕ್ಕ್ :- ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ**

**ಬೊಳಿಪಡ್ತ್‌ನವು :-**

ರಿಜಿಸ್ಟ್ರಾರ್
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಕಟ್ಟಡ
ಮ್ಯಾನ್ಸ್ ಕಾಂಪೌಂಡ್‌ರ ಪಕ್ಕ
ಮಡಿಕೇರಿ : 571 201 ಫೋನ್ : 29074

**ಅಚ್ಚ್ ಮಾಡ್‌ನವು :-**
ಗುಡ್‌ಟಚ್ ಪ್ರಿಂಟರ್ಸ್
ಜಯಲಕ್ಷ್ಮಿಪುರಂ, ಮೈಸೂರ್.
ಫೋನ್ : 512626, 517919

# ಮುಂಜೊಲ್

ನಾಡ್‌ರ ವಿಶಿಷ್ಟವಾನ ಕೊಡವ ತಕ್ಕ್ - ಸಾಹಿತ್ಯ, ಜಾನಪದ - ಸಂಸ್ಕೃತಿ, ಕಲೆನ ಪ್ರೋತಿ ಬೊಳ್‌ತುವ ಖಿನ ಉದ್ದೇಶತ್ ಕರ್ನಾಟಕ ಸರಕಾರ "ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ"ನ ರಚನೆ ಮಾಡಿತ್. ಇಕ್ಕಾಕಣೆ ಅಕಾಡೆಮಿ ಈ ನ್‌ಟ್ಟ್‌ಲ್ ನಲ್ಲ ಕೆಲಸ ಮಾಡಿಯಂಡ್ ಬಂದಿತ್.

ಕೊಡವ ಸಾಹಿತ್ಯ ಪರಂಪರೆಲ್ ಎಚ್ಚಕೋ ಬಲ್ಯ ಸಾಹಿತಿಯ, ಕಲಾವಿದಂಗ, ಜಾನಪದ ತಜ್ಞಂಗ, ನಾಟಕಕಾರಂಗ ನಯಿಚಿತ್ ಕೊಡವ ಸಾಹಿತ್ಯ ಪರಂಪರೆನ ಬೊಳ್‌ತಿತ್, ಇಂದ್ ಎಚ್ಚಕೊ ಪುದಿಯ ಎಳ್ತ್‌ಕಾರ, ಪುದಿಯ ಪುರ್‌ಡ್‌ಲ್ ಮಿಣ್ಣ್‌ಕ್ ಬಂದದಂಡ್ ಉಂಡ್. ಇಂಥಯಿಂಗಡ ಎಳ್‌ತ್, ಸಾಹಿತ್ಯತ್‌ನ ದಾಖಲೆ ಆಯಿತ್ ಇರಂಡು ಅಲ್ಲತೆ ಸಾಹಿತ್ಯ ಪರಂಪರೆನ ಬೊಳ್‌ತ್‌ವ ದೃಷ್ಟಿಲ್ ಕೊಡವ ಸಾಹಿತ್ಯ ಅಕಾಡೆಮಿ ಪುದಿಯ ಪುಸ್ತಕತ್‌ನ ಪ್ರಕಟ ಪಡ್‌ತಿಯಂಡ್ ಉಂಡ್.

ಕೊಡವ ಸಾಹಿತ್ಯಲೋಕತ್ ಆದ್ಯಾತ್ಮಿಕ ಸಾಹಿತ್ಯಕ್ ಓರ್ ನೆಲೆ ಕೊಡ್‌ಕಂಡಿಯದ್ ಇಂದೇತ ಪರಿಸ್ಥಿತಿಲ್ ಅವಶ್ಯ ಆಯಿತ್ ಕಾಂಬ. ಶ್ರೀ ಚೇಂದ್ರಿಮಾಡ ಜಿ. ಮುತ್ತಪ್ಪ ಅಯಿಂಗ ಈ ನ್‌ಟ್ಟ್‌ಲ್ ಇಂದಿಕ್ಕ ತಂಗಡ ನಿವೃತ್ತ ಬದ್‌ಕ್‌ನ ಕಯಿಚಂಡಿಪ್ಪಕ ಇಯಂಗಡ ಆಂಜ ಎಳ್ತ್, *ಬಾಳ್‌ಕ್ ಬೊಳಿ* ಎಣ್ಣುವ ಪುಸ್ತಕ ಇಡೀ ಜನತೆರ ಬದ್‌ಕ್‌ಕ್ ನಲ್ಲ ಬೊಳಿ ಕಾಟುವದ್ ನೇರ್. ಈ ಪುಸ್ತಕತ್‌ನ ಕೊಂಡಬಪ್ಪಕ್ ಸಹಾಯ ಮಾಡ್‌ನ ಅಕಾಡೆಮಿ ಸದಸ್ಯ ಪಿಣ್ಣ್ ಪೂಮಾಲೆ ಪತ್ರಿಕೆರ ಸಂಪಾದಕ ಶ್ರೀ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ ಇಯಂಗಕ್ ನಾಡ ವಂದನೆ.

ಅಲ್ಲತೆ, ನಂಗಡ ಈ ಎಲ್ಲ ಪುಸ್ತಕತ್‌ನ ಬಾರಿ ಚೆರಿಯ ನೇರತ್ ಪೆರ್ತ್ ಚಾಯೋಡೆ ಅಚ್ಚ್ ಮಾಡಿತಂದ ಗುಡ್‌ಟಚ್ ಪ್ರಿಂಟರ್ಸ್‌ರ ಎಲ್ಲಾ ಸಿಬ್ಬಂದಿ ವರ್ಗಕ್ ನಂಗ ಅಭಾರಿಯಾಯಿತುಂಡ್.

ಕೊಡವ ತಕ್ಕ್‌ಲ್ ಇಣ್ಣ್‌ಚ್ಚಕೂ ಪುಸ್ತಕ ಬೊಳಿ ಕಾಂಗಂಡು. ಎಳ್ತ್‌ಕಾರಕ್ ಇಂಬು ಕ್‌ಟ್ಟೊಂಡು. ಈ ನ್‌ಟ್ಟ್‌ಲ್ ಓದ್‌ಗ ಮಾಜನ, ಪುಸ್ತಕ ಅಭಿಮಾನಿಯ ಪುಸ್ತಕ ಎಡ್‌ತಿತ್ ಓದ್‌ನಕ ನಂಗಡ ಪ್ರಯತ್ನ ಸಾರ್ಥಕ.

ಮೇಕೇರಿರ ಕೆ. ಕಾರ್ಯಪ್ಪ
ಅಧ್ಯಕ್ಷ,
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

15.04.2000
ಮಡಿಕೇರಿ

# ಎಳ್ತ್‌ಕಾರಂಡ ತಕ್ಕ್

ಬಾಳ್‌ಕ್ ಬೊಳಿಲ್ ಉಳ್ಳ ವಿಷಯ ತರಾವರಿ ಪುಸ್ತಕತಿಂಜಿ ಆಂಜದ್. ಸಾಹಿತಿ ಬಿ.ಡಿ. ಗಣಪತಿ ಅಯಿಂಡ 'ಅಮೃತ' ಪುಸ್ತಕತ್‌ನ ಆಧಾರ ಆಯಿತ್ ಬೆಚ್ಚಂಡಿಯೆ.

ಇಂದ್ ನಂಗಡಲ್ಲಿ ದೈವಪ್ರೀತಿ, ಪಾಪಭೀತಿ, ಸಂಘ ನೀತಿ ತಾಂದಂಡುಂಡ್. ಚುಮ್ಮಿಯಕ್ ಬಟ್ಟೆಕಾಟ್‌ವವು ಕಮ್ಮಿ. ಬಟ್ಟೆಗೊತ್ತುಳ್ಳವು ಕಮ್ಮಿ. ನಲ್ಲರಿಕೆರ ಗುಣ, ಸ್ವಭಾವ, ಆಸೆ, ಅಕ್ಕರೆ ಕಮ್ಮಿಯಾಯಂಡ್ ನೈತಿಕತೆ ಎಣ್ಣುವದ್ ದಿನದಿನವೂ ಕ್ಷೀಣ ಆಯಂಡುಂಡ್. ಅಂಥಾ ಗುಣತ್‌ನ ಮರೆವಕ್ಕಾಗಾಂದ್ ಈ ಪುಸ್ತಕ ಎಳ್‌ದುವಕ್ ಕೈಇಟ್ಟಿಯೆ.

ಪೆರಿಯವು, ಆದ್ಯ ನಲ್ಲರಿಕೆಲಿರಂಡು. ಅಯಿನ ನೋಟಿತ್ ಮಕ್ಕಪಡಿಪ. ಪೆರಿಯವು ನಲ್ಲ ಬಟ್ಟೆ ಬೊಳಿ ಕಾಟ್‌ನಕ ಚೆರಿಯವು ನಲ್ಲ ಬಟ್ಟೆಕ್ ಬಪ್ಪ. ಹೆಚ್ಚಿನ ಜವಾಬ್ದಾರಿ ಅವ್ವಂಗಡದ್.

ನಾಡ ಈ ಚೆರಿಯ ಎಳ್ತ್‌ನ ಪುಸ್ತಕ ರೂಪತ್ ಬೊಳಿ ಪಡತುವಕ್ ಮಿಂಞಕ್ ಬಂದ "ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ"ಕ್ ನಾಡ ಮನ ದುಂಬ್‌ನ ಕೃತಜ್ಞತೆ.

ಕುಶಾಲನಗರ

6-5-1999 ಚೇಂದ್ರಿಮಾಡ ಗ. ಮುತ್ತಪ್ಪ

# ಬಾಳ್‌ಕ್ ಗುರಿ ಬೋಂಡು

ಪುಟ್ಟ್‌ನ ಮನುಷ್ಯ ಬದ್‌ಕಿ ಬಾಳುವ. ಬಾಳ್‌ಕ್ ಓರ್ ನಲ್ಲ ಗುರಿ ಬೋಂಡು. ಪ್ರತೀ ದಿನ ನಲ್ಲೋರ್ ಆದರ್ಶತ್‌ನ ಗೊತ್ತ್ ಮಾಡಿಯವಂಡು. "ಆದರ್ಶ" ಎಣ್ಣಕ ಪಣ ಸಂಪಾದನೆ, ಅಧಿಕಾರ ಸಾಧನೆ ಇಂಥ ವಿಚಾರ ನಂಗಕ್ ಗೇನ ಬಪ್ಪ. ಇದ್ ನಲ್ಲದೇ. ಆಚೇಂಗಿ, ಇದ್‌ಂಗಿಂಜಿ ನಲ್ಲದೂ ಉಂಡ್. ನಲ್ಲಗುಣ, ನಲ್ಲನೀತಿ, ನಲ್ಲನಡೆತನ ತಾಂಡದಾಯಿತ್ ಮಾಡಿ ಬೆಚ್ಚವದ್ ನಲ್ಲದ್. ಪಣಕಾರ, ಎಕ್ಕಲೂ ಸುಖ ಭೋಗತುಳ್ಳವು ನಲ್ಲ ಪೆದ ಎಡ್‌ತಿತ್ತಿಲ್ಲೆ; ಮೋಳ್‌ಕ್ಕೇರಿತ್ತಿಲ್ಲೆ. "ಮನುಷ್ಯನಾಯಿತ್ ಪುಟ್ಟಿತೂ ನಲ್ಲರಿಮೆಲ್ ದೇವಡ ಅಂತಸ್ತು ಪಡೆಯಲು" ಎಣ್ಣಿತ್ ಯೇಸು, ಬುದ್ಧ, ವಿವೇಕಾನಂದ, ಗಾಂಧಿ, ಮಹಮ್ಮದ್ ಇಂತವು ಎಣ್ಣಿತ್. ನಂಗಕ್ ಪ್ರತೀ ದಿನ ಪುದಿಯ ದಿನ ಆಂಡು. "ಪುದಿಯ ದಿನ" ಎಣ್ಣಕ ನಲ್ಲ ನೀತಿ, ನಡತೆ ಬೊಳಿಯಂಡು. ಸುಖ, ದುಃಖ ಇಂಜಿತೇ ಇಪ್ಪ. ಆಚೇಂಗಿ ತಪ್ಪಿತೂ ಪಾಳ್ ಮೊಟ್ಟ್ ಇಡಂಡ. ಪ್ರತೀ ದಿನ ನಂಗ ತಪ್ಪ್ ಮಾಡತನ್ನೆಕೆ, ಬಾಳ್‌ನ ನಲ್ಲ ರೀತಿಲ್ ಕಯಿಪನ್ನೆಕೆ ಶಕ್ತಿ ತರಡ್.

# ಬುದ್ಧಿ ಬೊಳಿಯುಂಡು

ನಂಗಡ ಬದ್‌ಕ್‌ಕ್ ಅನುಕೂಲ ಬೋಂಡು. ಬದ್‌ಕ್‌ಲ್ ಮನೆ, ಆಸ್ತಿ, ದುಡ್ಡ್, ನಲ್ಲ ಚಾಕ್ರಿ ಇದೆಲ್ಲಾ ಬೋಂಡು. ಪಯಿಪು, ದಾವು, ಕುಳ್‌ರ್, ಗಾಳಿ, ಬೆದ್ ಇಂತಾ ತೊಂದರೆಂಜಿ ನಂಗ ನಂಗಳ ರಕ್ಷಣೆ ಮಾಡಿಯವಂಡು. ನಂಗ ಬಾಳ್‌ಲ್ ತಿಂಬ, ಉಂಬ, ಸಂತಾನ ಮಾಡಿಯುವದೊಂದೇ ಆನಕ ಪ್ರಾಣಿಯಕೂ ನಂಗಕೂ ಭೇದ ಇಲ್ಲೆ. "ಜೀವನ" ಎಣ್ಣಕ ಬೊಳ್‌ಚೆ ಕಾಂಗಂಡು. ಬೊಳಚೆ ಬೊರೀ ತಡಿ ಅಲ್ಲ. ಬುದ್ಧಿಯೂ ಬೊಳಿಯೊಂಡು. ಆತ್ಮತ್‌ರ ಬೊಳ್‌ಚೆಯೂ ಆಂಡು. ಅರ್ಥ ಇಚ್ಚಿಕೇಃ ಮನುಷ್ಯಂಡ ತಡಿ ಬೊಳಂದಂಡ್

ಬಪ್ಪನ್ನಕೆ ಮನುಷ್ಯಂಡ ಮನುಷ್ಯತ್ವ, ನೀತಿ, ನಡತೆ, ಬೋಳೆಯಂಡು. ನಂಗಡ ಶೀಲ-ಸಂಸ್ಕಾರ ವಿಕಾಸ ಆಂಡು. ಮೆದ್‌ಳ್‌ರ ಬೊಳಚೆ ಎಣ್ಣಕ ನಲ್ಲಬುದ್ಧಿ. ಬದ್‌ಕ್‌ಲ್, ಪ್ರಾಣಿ ಮಟ್ಟತ್‌ರ ಜೀವನ ಆಗ. ನಲ್ಲ ಬುದ್ದಿಲ್ ಮನುಷ್ಯ ಮನುಷ್ಯನಾಯಿತ್ ಬಾವಂಡು. ನಂಗ ಆದ್ಯ, ಮನುಷ್ಯಂಗಳಾಂಡು. ಮನುಷ್ಯತ್ವತ್ ನಲ್ಲ ಪೆದ ಎಡ್‌ಕಂಡು.

## ಚೆಡಿ ಇಪ್ಪಕ್ಕಾಗ

"ಚೆಡಿ" ಎಣ್ಣುವದ್ ಮನುಷ್ಯಂಗೂ ಉಂಡ್, ಪ್ರಾಣಿಯಕೂ ಉಂಡ್. ಪ್ರಾಣಿಯ ಚೆಡಿ ಬಾತೇಂಗಿ ಪುಚ್ಚಿ ಪುಚ್ಚಿ ಕಳಿಪ. ಪ್ರಾಣಿಯಕ್ ಚೆಡಿನ ತಡತವ ಕಯ್ಯುಲೆ. ಚೆಡಿನ ತಡತವಂತ ಸೌಭಾಗ್ಯ ಮನುಷ್ಯಂಗ್ ಮಾತ್ರ ಉಳ್ಳ. ಮನುಷ್ಯ ಚೆಡಿಲೂ ಅದ್‌ನ ಎರ್‌ಕಿಯಂಡ್ ತೆಳಿಮೂಡ್ ಕಾಟಲು. ಇರ್‌ಂಬುಕ್ ಕಿಲ್‌ಂಬು ಪುಡಿಪನ್ನಕೆ, ಚೆಡಿ ಮನುಷ್ಯನ ಪಾಳ್‌ಮಾಡುವ. ನಂಗ ನಂಗಡ ಚೆಡಿನ ಪುಡ್‌ತತ್ ಬೆಕ್ಕತ ಪೋಚೇಂಗಿ ನಂಗ ನಂಗಳಾಯಿತೇ ಪಾಳಾಪ. ಚೆಡಿನ ಹದ್ದ್‌ಬಸ್ತ್‌ಲ್ ಬೆಪ್ಪವನೇ ನೇರಾನ ಮನುಷ್ಯ-ಕುದ್‌ರೆನ ಅನ್ನನೇ ಬುಟ್ಟಕ ತಾರಾ ಮಾರಾ ಓಡುವ. ಲಗಾಂ ಇಟ್ಟಕ ಹದ್ದ್ ಬಸ್ತ್‌ಲ್ ಓಡ್‌ಚಿಡಲು. ಅನ್ನನೆ ಚೆಡಿ ಎಣ್ಣುವಾನ ಆಂಡ ಪಾಡ್‌ಕ್ ಬುಟ್ಟಕ ಆಕತದ್ ಆಪ. ತಿತ್ತ್ ಒಲೆರೊಳ್‌ಲಿರಂಡು. ಪೊರಮೆ ಕತ್ತುವಕ್ಕಾಗ. ಅನ್ನನೇ ಚೆಡಿನ ಮನಸ್ಸ್‌ರೊಳ್‌ಲ್ ಮಾತ್ರ ಬೆಚ್ಚವಂಡು. ಪೊರ್‌ಮೆ ಬುಡುವಕ್ಕಾಗ. ಚೆಡಿನ ಆಂಡ ಪಾಡ್‌ಕ್ ಬುಡತೆ ತಾಂಡ ಹದ್ದ್ ಬಸ್ತ್‌ಲ್ ಬೆಚ್ಚವಕ್ ಪ್ರಯತ್ನಪಡಂಡು.

## ಗೋರಿ ಗೋಪುರ ಬೋಂಡ

ಭೂಮಿ, ಸೂರ್ಯ, ಚಂದ್ರ, ನಕ್ಷತ್ರ ಎಲ್ಲಾ ಕ್ರಮ ಪೋಲೆ

ಸುತ್ತಿಯಂಡಿಪ್ಪ. ಅವು ಸುತ್ತ್‌ನ ಬಟ್ಟೆನ ಗುರ್ತ್‌ಮಾಡಿತ್ ತಪ್ಪ್‌ಲೆ. ಸೂರ್ಯ ಪೊವ್‌ಲ್ ಬೊಪ್ಪು ತಪ್ಪ. ಬೈಟ್ ಅವಂಡ ಪತ್ತೆ ಇಪ್ಪುಲೆ. ಸೂರ್ಯ ತಾನ್ ಮಾಡ್‌ನ ಕೆಲಸಕ್, ತಾನ್ ಮಾಡ್‌ನ ಸೇವೆಕ್ ಗೋರಿ, ಗೋಪುರ ಕೆಟ್ಟುವಕ್ ಇಷ್ಟಪಡುಲೆ. ದಾರೂ ಕೆಟ್ಟುಲೆ. ಅನ್ನನೆ ಭೂಮಿಯೂ, ಚಂದ್ರ ನಕ್ಷತ್ರ ಕೂಡ ಮನುಷ್ಯನೂ ಇದ್‌ಲ್ ಬುದ್ದಿ ಪಡಿಕಂಡು. ನಂಗಡ ಬದ್‌ಕ್ ಚೆನ್ನ ಕಾಲ ಮಾತ್ರ. ತಾನ್ ಮಾಡಂಡಿಯ ಕೆಲಸತ್‌ನ ಪೆರ್ಟ್ ಚೆನ್ನ ಸಮಯತೇ ಮಾಡಿತ್ ತ್‌ೀಕಂಡು. ಮನುಷ್ಯ ಪುಟ್ಟ್‌ನಾಂಗಾಯಿತ್ ತಾಂಡ ಕರ್ತವ್ಯ ಮಾಡಂಡು. ವಾಡ್‌ನ ಕೆಲಸಕಾಯಿತ್ ಗೋರಿ, ಗೋಪುರ ಕೆಟ್ಟ್‌ಚಿಡುವಕ್ ಪ್ರಯತ್ನಪಡುವ. ಈ 'ನಾನ್' ಎಣ್ಣುವ ಬಯಕೆನ ಬೆಚ್ಚವದ್ ಮನುಷ್ಯತ್ವ ಅಲ್ಲ. ಬೊರೀ ಕೈಲ್ ಬಪ್ಪ, ಬೊರೀ ಕೈಲೇ ಪೋಪ. ಏದ್ ಗೋರಿ-ಗೋಪುರ ಅವಂಡ ಕೂಡೆ ಪೋಪಾ ?

## ನೀಡ ಕೈಲುಂಡ್

ಪ್ರಾಣಿ ಜನ್ಮಕ್ಕಿಂಜಿ ಮನುಷ್ಯ ಜನ್ಮ ಉತ್ತಮಾಂದೆಣ್ಣುವ. ಕಾರಣ ಮನುಷ್ಯಂಗ್ ವಿಚಾರಶಕ್ತಿ ಉಂಡ್, ಪ್ರಾಣಿಯಕ್ಕಿಲ್ಲೆ. ಮನುಷ್ಯ ಪ್ರಾಣಿ ಪಕ್ಷಿಕ್ ಬುದ್ದಿ ಪಡ್‌ಪ್‌ಚಿಡುವಂಜಿ, ತಾಂಗ್ ಉಪಕಾರಿಯಳನ್ನಕೆ ಮಾಡಿಯವ. ಪ್ರಾಣಿಯ ಬುದ್ಧಿ ಪಡಿಪ ತಾಂಡ ಸ್ವಂತ ಬುದ್ಧಿಲಲ್ಲ. ಇಞೊಬ್ಬಂಡ ಪ್ರೇರಣೆಯೇ ಕಾರಣ. ಮನುಷ್ಯ ತಾನೂ ನಲ್ಲವಂನಾಯಂಡ್, ಬಾಕಿ ಜನತ್‌ನೋ ನಲ್ಲರಿಕೆಲಿಪ್ಪನ್ನಕೆ ಮಾಡುವ ಶಕ್ತಿ ಉಳ್ಳಂವ. ಮನುಷ್ಯ ಪುಟ್ಟ್‌ನ ಮಾತ್ರಕ್ ಗೌರವ ಪಡೆಯುಲೆ. ಪುಟ್ಟುವದ್ ಪ್ರಾಣಿಕೂ ಮನುಷ್ಯಂಗೂ ಒಂದೇ. ಮನುಷ್ಯನೂ ಓರ್ ಪ್ರಾಣಿ. ಪ್ರಾಣಿಯಡ ಶಕ್ತಿ ಮನುಷ್ಯಂಗಿಲ್ಲೆ. ಮನುಷ್ಯಂಗ್ ಬುದ್ಧಿ ಶಕ್ತಿ ಉಂಡ್. ಆ ಬುದ್ಧಿಶಕ್ತಿಲ್ ಮನುಷ್ಯ ಮನುಷ್ಯತ್ವ ಪಡಂದಕ ಮಾತ್ರ ಅಂವ ಮನುಷ್ಯನಾಪ. ತಾಂಡನಲ್ಲ ಗುಣ, ನಲ್ಲ ನಡತೆ,

ನಲ್ಲ ಜ್ಞಾನ ಉಂಡೇಂಗಿ ತಾಂಗೂ ತಾಂಡ ಪುಟ್ಟ್‌ನ ನಾಡ್‌ಕೂ ಕೀರ್ತಿ ತಪ್ಪ. ಆನಗುಂಡ್ ಮನುಷ್ಯಂಡ ಬಲ್ಯರಿಕೆ, ಕ್‌ಳರಿಮೆ ಅವಂಡ ಕೈಲೇ ಉಂಡ್.

## ಮನಸ್ಸ್

ಮನುಷ್ಯ ನಲ್ಲಂವನಾಪಕೂ, ಕೆಟ್ಟಂವನಾಪಕೂ ಅವಂಡ ಮನಸ್ಸೇ ಕಾರಣ. ದೇವಡ ಕಲ್ಪನೆ ಬಪ್ಪದೂ ಮನಸ್ಸ್‌ನಗುಂಡ್. "ಮನಸ್ಸೇ ಮಾದೇವ" ಎಣ್ಣುವ. ಮನಸ್ಸ್ ಪವಿತ್ರ ಆಚೇಂಗಿ ಸರ್ವವೂ ಪವಿತ್ರ. ಪುಳು ಬುದ್ಧ ವಸ್ತುನುಂಡ್ ಪ್ರಯೋಜನ ಎಂತ? ತಿಂಬಕ್ಕಾಪ್‌ಲೆ ಗೊಬ್ಬರಕ್ಕಾಪ! ಅನ್ನನೆ ಮನಸ್ಸ್‌ಕ್ ಪುಳು ಬುದ್ದಕ ಕೆಟ್ಟಬುದ್ಧಿ ಬಪ್ಪಲ್ಲತೆ ನಲ್ಲಬುದ್ಧಿ ಬಪ್ಪದುಂಡಾ? ನೆಮ್ಮದಿ ತಪ್ಪದುಂಡಾ ? ಮನುಷ್ಯ ತಾಂಡ ಮಟ್ಟತೇ ಮೋಳ್‌ಕೇರುವ, ಅಡಿಕೂ ಬೂವ. ನಲ್ಲ ಪವಿತ್ರ ಮನಸ್ಸುಳ್ಳವು ಎಂದೂ ಕ್‌ಳ್ ಮಟ್ಟಕ್ ಇಳಿಯ. ಮನಸ್ಸ್‌ರ ಪಾವಿತ್ರತೆ, ಸ್ವಚ್ಛತೆಯೇ ಸ್ವರ್ಗ ನಾಂದಿ. ನಲ್ಲದ್ ಗೇನ ಮಾಡಂಡು. ನಲ್ಲದ್ ಪರೆಯಂಡು, ನಲ್ಲ ಕಾರ್ಯ ಮಾಡಂಡು. ಅದೇ ನಂಗಡ ನಲ್ಲರಿಕೆ. ನಲ್ಲಮನಸ್ಸೇ ನಲ್ಲರಿಮೆ.

## ಅಭಿಪ್ರಾಯ ಓರೋರ ತರ

ಜನ ಪರೆವ ತಕ್ಕ್‌ನ ಬೇರ್‌ಚಿಡತೆ, ಆನ ಕೆಮಿ ಕೊಡ್‌ತ್ ಕೇಟಂಡ್ ಅದೇ ಪೋಲೆ ನಡಪವು ಖಂಡಿತಾ ಅಪಾಯತ್ ಬೂವ. ಜನಡ ದೃಷ್ಠಿ ಅಭಿಪ್ರಾಯ ತರಾವರಿ ಇಪ್ಪ. ಘನತೆ, ಗೌರವ, ಜ್ಞಾನ ಮಾನ ಕೂಡ ಒರೋರಬಕ್ ಓರೋರ ರೀತಿ. ಮನುಷ್ಯ, ತಾಂಡ ಪುಟ್ಟ್‌ನ ಸಂಸ್ಕಾರ, ತಾಂಡ ಮನಸ್ಸ್‌ರ ಮಟ್ಟತ್ ಅಂವ ಪ್ರತಿಯೊಂದಾಂಗೂ ಬೆಲೆ ಕೆಟ್ಟುವ. ಜಿಪುಣಂಗ್ ಪಣ ಕೂಟುವದೇ ಪರಮಜ್ಞಾನ. ಕಳ್ಳಂಗ್ ದರೋಡೆ ಮಾಡುವದೇ ಸ್ವರ್ಗ; ಅದೇ ಅವಂಗ್ ಕಲೆ. ಚಾಯಿಲ್ ಉಡುಪ್ ತೊಡ್‌ಪುಲುಳ್ಳವನ

ಗೌರವಸ್ಥಂದೆಣ್ಣುಲಿಯಾ? ಪಣವುಳ್ಳವನ, ಅಧಿಕಾರವುಳ್ಳವನ ಜನ ಪೂಜನೀಯ ಎಣ್ಣುವ. ಓರೋರಬಡ ಅಭಿಪ್ರಾಯ ಓರೋರ್ ಮಟ್ಟ್, ಓರೋರ್ ರೀತಿ. ಅಭಿಪ್ರಾಯ ಎಣ್ಣುವದ್ ವಿಚಿತ್ರ ರೀತಿ. ಏದೇ ಅಭಿಪ್ರಾಯ ಇರಡ್ ಅದ್‌ನ ಆಳತ್ ಪರೀಕ್ಷೆ ಮಾಡಿತ್ ನಲ್ಲ ಅಭಿಪ್ರಾಯ, ನಲ್ಲದಾಪಂತ ಅಭಿಪ್ರಾಯ ಮಾತ್ರ ಎಡ್‌ತವಂಡು.

## ಹಟ ಬೋಂಡು

ನಲ್ಲ ಜೀವಮಾನ ನಂಗಡದಾಂಡೂಂದ್ ಎಣ್ಣುವದೂ, ಗೇನ ಮಾಡುವದೂ ಸುಲಭ. ಆಚೇಂಗಿ, ನಲ್ಲ ಜೀವಮಾನ ನಡತುವದ್ ಅಚ್ಚಕ್ ಸುಲಭ ಅಲ್ಲ. ಎಣ್ಣನ್ನಕೆ ಮಾಡುವ, ಮಾಡ್‌ನಾನ ಎಣ್ಣುವಕ್ ಪಡಿಚತೇಂಗಿ ನಂಗಡ ಜೀವನ ನಲ್ಲದಾಪ. ನಂಗ ಗೇನ ಮಾಡುವದೊಂದ್, ಎಣ್ಣುವದೊಂದ್, ಮಾಡುವದೊಂದ್ ಮಾಡಿಯಂಡ್ ಒಂದಾಂಗೊಂದ್ ಸಮ್ಮಂಧ ಇಲ್ಲತೆ ಮಾಡುವ ಕಾರ್ಯಕ್ "ರಾಜಕಾರಿಣಿರ ಕಾರ್ಯ" ಎಣ್ಣಲು. ನಂಗಡ ಕೀಳರಿಮೆಕ್ ಅದೇ ಏತು. ನಲ್ಲ ಭಾವನೆ, ಕೆಲಸ ಒಂದಾಂಗೊಂದ್ ಸರಿಯಾಯಿತಿಪ್ಪದೇ ಧರ್ಮ. ಅದೇ ವೇದಾಂತ ! ಅದೇ ದೇವಡ ಪ್ರಾರ್ಥನೆ. ಅದೇ ಸರ್ವಸ್ವ. ಅದೇ ಸ್ವರ್ಗ. ಈಂಡ ಸಾಧನೆ ಕಷ್ಟ ಕಷ್ಟಾಂದ್ ಬುಡುವಕ್ಕಾಗ. ಸಾಧನೆ ಮಾಡುವ ಹಟ ಬೋಂಡು. ಕಷ್ಟಪಡತೆ ಸುಖ ಕೈಕ್ ಬಪ್ಪ್‌ಲೆ. ಪ್ರಾಣಿಯಕ್ ಬುದ್ದಿ ಪಡಿಪ್ ಚಿಡುವ ಮನುಷ್ಯ ತಾಂಡ ಬುದ್ದಿನ ಎನ್ನಂಗ್ ತಿದ್ದಿಯವಕಾಗ ? ಅದ್‌ಂಗ್ ಕರ್ತವ್ಯ ನಿಷ್ಠೆ ಬೋಂಡು, ತಿದ್ದಿಯವಿ ಎಣ್ಣುವ ಹಟ ಬೋಂಡು.

## ಗುರಿ ಮುಟ್ಟಂಡು

ಮನುಷ್ಯಂಡ ಆಸೆ ಅಭಿಲಾಷೆ ಒಂದಾ-ದಂಡಾ? ನಾಕ್ ಅದ್ ಮಾಡಂಡು, ಇದ್ ಮಾಡಂಡು ಎಣ್ಣಿಯಂಡ್ ಪ್ರತೀಯೊಬ್ಬನೂ ನೂರಾರ್

ನಿರ್ಧಾರ ಮಾಡುವ. ಅನ್ನನೆ ಗಾಳಿ ಗೋಪುರ ಕೆಟ್ಟಿತ್ ಪ್ರಯೋಜನ ಇಲ್ಲೆ. ನಿರ್ಧಾರ ಮಾಡ್‌ನಾನ ಕಾರ್ಯರೂಪಕ್ ಕೊಂಡ್ ಬಪ್ಪ ಹಟ ಇರಂಡು. ಕಾರ್ಯಕೋರ್ ಗುರಿ ಇರಂಡು. ಹಂಸಪಕ್ಷಿ ಎಚ್ಚಕೇ ಕೊಡಿಲ್, ಎಚ್ಚಕೇ ದೂರ ಪಾರ್‌ಚೇಂಗೂ ಜಲಾಶಯತ್ ನೀರ್‌ಕೇ ಇಳಿಯುವಲ್ಲತೆ, ಭೂಮಿಕ್ಕ್‌ಳಿಯುಲೆ. ಮನುಷ್ಯ, ಓರ್‌ನಲ್ಲ ಕೆಲಸ ಮಾಡುವೀಂದ್ ನಿರ್ಧಾರ ಮಾಡ್‌ನ ಪಿಞ್ಞ ಎಚ್ಚಕೇ ಕಷ್ಟ ಬರಡ್- ತಾಂಡ ಗುರಿಂಜಿ ಬಯ್ಯಕ್ ಬಪ್ಪಕ್ಕಾಗ. ಅಂಥಾ ನಿರ್ಧಾರ ಇಲ್ಲತವು ಗಾಳಿಕ್ ಕೊಕ್ಕಲೆ ಪಾರ್‌ನೆನ್ನಕೆ ದಿಕ್ಕಿಲ್ಲತೆ ಪಾರಿಪೋಪ. ಜೀವನಕ್ ಏದೋರ್ ನೆಲೆ ಇಲ್ಲತಾಪ. ಏದ್ ಗುರಿನೋ ಮುಟ್ಟತಾಪ. ನಲ್ಲ ಗುರಿ ಬೋಂಡು. ಅದ್‌ಂಗ್ ನಿರ್ಧಾರ-ಯೋಜನೆ ಬೋಂಡು. ಕಷ್ಟ ನಿವಾರಣೆ ಮಾಡಿಯಂಡ್ ತಾಂಡ ಗುರಿಮುಟ್ಟಂಡು.

## ನಷ್ಟ ಆಪ್‌ಲೆ

ನಯ ವಿನಯ ಇಲ್ಲತವಂಡ ಅಧಿಕಾರ, ಘನತೆ ಇಲ್ಲತ ಜೀವನ ಪುಡಿ ಇಲ್ಲತ ಕತ್ತಿನನ್ನಕೆ ಪ್ರಯೋಜನಕ್ ಬಪ್ಪುಲೆ. ನಯ, ವಿನಯ, ನಲ್ಲ ಚೊಲ್ಲ್‌ಕ್ ಪಣ ಖರ್ಚಿ ಇಲ್ಲೆ. ತೊಂದರೆಯೂ ಇಲ್ಲೆ. ಗಾಳಿ ದುಂಬ್‌ನ ಮೆತ್ತೆ ಒಳ್‌ಲ್ ಟೊಳ್ಳಾಚೇಂಗೂ ಆಂಡ ಮೇಲೆ ಅಳ್‌ತವಂಗ್ ಓರ್ ಆನಂದ. ಅನ್ನನೆ, ನಯ ವಿನಯ ಉಳ್ಳಲ್ಲಿ ಒಂದೂ ಇಲ್ಲತನ್ನಕೆ ಕಂಡಕೋ ಅದ್ ಜೀವನತ್‌ರ ಕಿತಾಪತಿನ ನಯ ಮಾಡಿತ್ ಬದ್‌ಕ್‌ನ ತೂಪೆ ಮಾಡುವ. ಗಾಡಿ ಚಕ್ರ ಸದ್ದಿಲ್ಲತೆ ತಿರುವೇಂಗಿ ಅದ್‌ಂಗ್ ಎಣ್ಣೆ ಇಡಂಡು. ಅನ್ನನೆ ಜೀವನ ಎಣ್ಣುವ ಚಕ್ರ ಚಾಯೋಡೆ ತಿರಂಡಿಕೆ ವಿನಯ ಎಣ್ಣುವ ಎಣ್ಣೆ ಬೋಂಡು. ಪಾಲ್ ಕುಡಿಚಿತ್ ಪಲ್ಲ್‌ನ ಕಳಂದವನಿಲ್ಲೆ. ನಯ ವಿನಯ ಕಾಟಿತ್ ನಷ್ಟಪಟ್ಟವನಿಲ್ಲೆ.

## ಅನುಭವ ಬೋಂಡು

ತಾಂಡ ಮಕ್ಕ ನಲ್ಲದಾಯಿತಿರಂಡೂಂದ್ ಪ್ರತೀ ಅಪ್ಪವ್ವಂಗಡ ಆಸೆ. ಈ ಬಯಕೆನನ್ನೆಕೆ ನಲ್ಲ ಬೋಧನೆ ಕೊಡ್‌ಪಂಜಿ ತಾಂಡ ಮಕ್ಕಳ ಉತ್ತಮ ರೀತಿಲ್ ಮಾಡುವಕ್ ಅಪ್ಪವ್ವಂಗ್ ಸಾಧ್ಯ ಇಲ್ಲತ್ತಿಪ್ಪಕ, ಇಞ್ಞೊಬ್ಬ ಮಾಡುವ ಭೋಧನೆಲ್ ಎಚ್ಚಕ್ ಪ್ರಯೋಜನ ? ಇದ್‌ನ ಪ್ರತ್ಯೇಕವಾಯಿತ್ ವಿವರಿಚಿ ಡಂಡಿಯ ಅವಶ್ಯಕತೆ ಇಲ್ಲೆ. ಈ ವಿಚಾರತ್ ಬಲ್ಯಭಾಷಣ, ತಕ್ಕ್ ತಕ್ಕ್‌ಲ್ ಭೋಧನೆ, ಉಪದೇಶ ಪ್ರಯೋಜನ ಇಲ್ಲೆ. ಅವಂಡವಂಡ ಅನುಭವತ್ ಅವಂಡಂವಂಡ ಜೀವನತ್‌ನ ತಿದ್ದಿಯವಂಡು. ಅನ್ನನ್ನೆಣ್ಣಿಯಂಡ್ ನೀತಿ ಭೋಧನೆರ ಅವಶ್ಯ ಇಲ್ಲೇಂದಲ್ಲ; ನೀತಿ ಭೋದನೆ, ಪುರಾಣ, ಪುಣ್ಯಕಥೆ ಅನುಭವತಿಂಜಿ ಬಂದದ್. ಈ ಅನುಭವತ್ ಲಾಭ ಉಂಡ್. ಈಂಡ ಲಾಭ ನಂಗಕ್ಕಾಂಡಿಯೆ. ನಂಗ ಆ ಅನುಭವತ್‌ನ ನಂಗ ನಂಗಡಕೆ ಜೀವನತ್‌ಲ್ ಬೆಚ್ಚವಂಡು. ಅನುಭವತಿಂಜ ಪಡಿಪಂಜಿ ಮನುಷ್ಯ ತಾನ್ ತಾನಾಯಿತೇ ಉತ್ತಮನಾಯೋಂಡು.

## ಬಡಜನ

ತಿತ್ತ್‌ಪತ್ತಿತ್ ಮರ ಬೆಂಜಂಡುಳ್ಳಾನ ನೋಟುವಕ್ ಚಾಯಿ. ಗಾಳಿಕ್ ತಿತ್ತ್ ಕತ್ತುವದ್ ನೋಟುವಕ್ ಚಾಯಿ. ಅನ್ನನೆ ಸಿರಿ, ಸಂಪತ್ತ್, ಅಧಿಕಾರ ಇಂಜಂಡ್ ಮೆರೆವಯಿನ ನೋಟುವಕ, ಅವಂಡ ಜೀವಮಾನ ನೋಟುವಕ ಅಂವ ಎಂತಾ ಸುಖಿಪುರುಷಂದಾಪ. ತಿತ್ತ್‌ಲ್ ಮರ ಬೇವನ್ನೆಕೆ ಸಿರಿ, ಸಂಪತ್ತ್ ಅಧಿಕಾರತ್ ಮನುಷ್ಯ ಪಾಳಾಪ, ಐಶ್ವರ್ಯ ದುಂಬ ಉಳ್ಳಲ್ಲಿ ಮನುಷ್ಯತ್ವ ಕಮ್ಮಿ ಇಪ್ಪ. ನಾನೇ ಎಲ್ಲಾರ್‌ಕಿಂಜಿ ಮೇಲ್-ಎಣ್ಣುವ ಭಾವನೆಯೂ ಅವಂಡಲ್ಲಿಪ್ಪ. ಅದೇ ಗರ್ವ, ಅಹಂಕಾರಕ್ ಕಾರಣವಾಯಿತ್ ಸಂಸಾರ

ಬಾಂಧವ್ಯ, ಮನುಷ್ಯತ್ವ ಕಮ್ಮಿಯಾಪ. ಮನುಷ್ಯತ್ವ ಕಮ್ಮಿ ಆಪಕ ದಯೆ, ಕರುಣೆ, ತ್ಯಾಗ, ಸಹಕಾರ ತತ್ವ ಇಲ್ಲತಾಪ. ನಂಗ ಸಮಾಜತ್‌ನ ಸೂಕ್ಷ್ಮವಾಯಿತ್ ಪರೀಕ್ಷೆ ಮಾಡ್‌ನಕ ಅರ್ಥ ಆಪ. ಬಡಜನ ಅಥವಾ ಗರೀಬ ಜನಡಲ್ಲಿ ಪ್ರೀತಿ, ವಿಶ್ವಾಸ, ಭಕ್ತಿ, ದಯೆ, ಸಹನೆ, ಕರುಣೆ, ಉದಾರ ಮನಸ್ಸ್ ಇಂತಾ ದೇವಗುಣ ಜಾಸ್ತಿಯಾಯಿತಿಪ್ಪ. ದೇವಡ ವಿಚಿತ್ರ ಸೃಷ್ಟಿ !

## ಬಾಳ್‌ರ ಯೋಗ್ಯತೆ

ರೂಪತ್ ಪುಟ್ಟುವ ಪ್ರತೀ ಜೀವಿಕ್ ನಾಶ ಉಂಡೇ ಉಂಡ್. ಪುಟ್ಟ್‌ನ ಮನುಷ್ಯ ಚತ್ತಿತೇ ಚಾವಂಡು. ಇದ್ ತಪ್ಪ್‌ಚಿಡುವ ಕೈಯ್ಯತ ದೇವಕಾರ್ಯ. ಬಾಳ್‌ರ ಬದ್‌ಕ್‌ಲ್ ಬದ್‌ಕ್‌ರ ಯೋಗ್ಯತೆ ಎಣ್ಣುವದ್ ಉಂಡ್. ಬಾಳ್-ಯೋಗ್ಯತೆ ಉಳ್ಳ, ಕಾಲತ್ತಿಲ್ಲೆ. ಲೋಕ ಕಂಟಕನಾಯಂಡ್, ಸಮಾಜಕ್ ವಂಚಕ ನಾಯಂಡ್ ನೂರ್‌ಕಾಲ ಬಾವಾಂಗಿಂಜಿ ಚಾವು ಸುಖ. ದುಂಬ ಕಾಲ ಬದ್‌ಕ್‌ನನ್ನೆಕೆ ಪಾಪಭಾರ ಜಾಸ್ತಿ. ಧೀರ್ಘಾಯುಷ್ಯ ನಲ್ಲದಲ್ಲ. ಬಾಳ್‌ರ ರಸ ಅರಿಯತೆ, ಪ್ರೇಮ, ನೇಮತ್‌ರ ಚೋದ್ ಅರಿಯತೆ ಕಲ್‌ನನ್ನೆಕೆ ನೂರ್‌ಕಾಲ ಬದ್‌ಕಿತ್ ಎನ್ನ್ ಪ್ರಯೋಜನ? ನೂರ್‌ಕಾಲ ಬಾಳ್‌ನಕ ಮಹಾತ್ಮನಾಪ್‌ಲೆ. ಪ್ರತೀ ಕ್ಷಣತ್‌ನ ನಲ್ಲಾಂಗ್ ಉಪಯೋಗ ಮಾಡಿಯಂಡ್ ಮನುಷ್ಯತ್ವ ಎಣ್ಣುವ ಪೂವುರ ವಾಸನೆನ ನೂರ್‌ಕಾಲ ಇಪ್ಪನ್ನೆಕೆ ಬಾವದೇ ಬಾಳ್. ಉಪಯೋಗ ಇಲ್ಲತ ಜೀವಮಾನ ವ್ಯರ್ಥ. ತಾಂಡ ಬಾಳ್ ಇಂಞೊಬ್ಬಂಗ್ ಉಪಕಾರ ಆಂಡು. ಅದೇ ನಲ್ಲ ಬಾಳ್.

## ತಪ್ಪ್‌ನ ಕಾಟುವೊ ಎನ್ನಂಗ್ ?

ನಾನ್ ಮಾಡ್‌ನ ತಪ್ಪುನ ಇಞ್ಞೊಬ್ಬ ಎಡ್‌ತ್ ಕಾಟುವಕ ನಾಕ್ ಚೆಡಿಬಪ್ಪ. ನನ್ನ ಹೊಗಳಿತ್ ಪರೆವಕ ಕುಷಿಯಾಪ. ನಾನ್ ಮಾಡುವದ್

ತಪ್ಪೂಂದ್ ಗೊತ್ತಿಂಜಿತೂ ಅದ್‌ನ ಮರೆ ಮಾಡುವವನ ನಾನ್ ಮೆಚ್ಚುವಿ. ಇದ್ ಸೆರಿ ಅಲ್ಲ. ನಂಗಡ ತಪ್ಪುನ ನಂಗಕ್ ಎಡ್‌ತಿತ್ ಕಾಟುವವೇ ನಂಗಡ ಸ್ನೇಹಿತಂಗ. ನಂಗಡ ತಪ್ಪು ನಂಗಕ್ ಗೊತ್ತಾಪ್‌ಲೆ. ತಪ್ಪುನ ತಿದ್ದುವ ಸ್ನೇಹಿತ ಇಪ್ಪಕ ನಂಗ ನಂಗಳ ತಿದ್ದಿಯವಲು, ನಂಗಳ ಹೊಗಳುವದ್ ನಂಗಕ್ ಕಷ್ಟ. ನಂಗಳ ತಿದ್ದುವಯಿಂಗಡ ಕೂಡೆ ಸ್ನೇಹ ನಲ್ಲದ್. ಕನ್ನಡಿಲ್ ನಂಗ ನೋಟುವಕ ನಂಗಕೇ ಕಾಂಬ. ಕಿಡಿಕೆ ತೊರಂದಿತ್ ಪೊರಮೆ ನೋಟುವಕ ಮನಸ್ಸ್‌ಕ್ ಕುಶಿ. ಪೋಡೆಕೋಳಿ ಕಾಪಳ್‌ಪ ಮುಟ್ಟೆನ ಬೇವು ಚಿಡುವಕ್ಕಲ್ಲ. ಕುಞ್ಞಿ ತೊಲಿಪಕ್. ಅನ್ನನೇ ನಂಗಳ ತಿದ್ದುವವು ನಂಗ ನಲ್ಲದಾಡ್‌ಂದ್ ಆಸೆ ಪಡುವಲ್ಲತೆ, ನಂಗಡ ನಾಶಕ್ಕಾಯಿತ್ತಲ್ಲ.

## ನಲ್ಲ ಕೆಲಸ

ಏದೋರ್ ನಲ್ಲ ಕೆಲಸ ಮಾಡ್‌ನಾಂಗಾಯಿತ್ ನಂಗ ಬಯ್ಯಂಜಿ ವ್ಯಸನ ಪಡುವ ಅವಶ್ಯಕತೆ ಇಲ್ಲಿಯೋ, ಕೆಲಸ ಮಾಡ್‌ನಾಂಗಾಯಿತ್ ಒಬ್ಬಂಗ್ ಬೊತ್ತುವ ಅವಶ್ಯಕತೆ ಇಲ್ಲಿಯೋ - ಅಂತ ಕೆಲಸ ಮಾಡುವದ್ ನಲ್ಲದ್. ನಲ್ಲ ಕೆಲಸ ಆನಂದ, ಶಾಂತಿ ತಪ್ಪ. ಕಪಟ ದೃಷ್ಟಿಲ್, ಮೋಸತ್, ಸ್ವಂತ ಆಸೆಕ್, ಆತ್ಮವಂಚನೆಲ್ ಮಾಡ್‌ನ ಕಾರ್ಬಾರ್ ದುಃಖಕ್ ಕಾರಣ. ಅಶಾಂತಿಕ್ ಕಾರಣ, ಚುಮ್ಮಿ ಕುಞ್ಞಿಕ್ ನಾಟ್ಯಕಲೆ ಗೊತ್ತಿಲ್ಲೇಂಗೂ ಆಂಡ ಮೊಟ್ಟ್‌ನಂಗಕ್ ನರ್ತನ ಆಪ. ಆ ಮೊಟ್ಟ್‌ನ ನಂಗ ಕೊದಿಪ. ಅನ್ನನೆ ಆಡಂಬರತ್‌ರ ಶಬ್ದ ಇಲ್ಲತೆ ಸತ್ಯ, ಸರಳತೆ, ಮೌನ ಮುಗ್ದತೆಲ್ ಮಾಡುವ ಕೆಲಸತ್‌ನ ಎಲ್ಲರೂ ಸ್ವಾಗತ ಮಾಡುವ. ನಂಗ ಮಾಡುವ ಕೆಲಸ ಜನ ಮೆಚ್ಚೆಂಡು. ನಲ್ಲ ಮನಸ್ಸ್ ನಲ್ಲ ಕೆಲಸಕ್ ಕಾರಣ.

## ಸಾರ ಮಾತ್ರಮುಖ್ಯ

ಝೇಂಕಾರ ಮಾಡಿಯಂಡ್ ಪೂವ್‌ರ ಮೇಲೆ ಅಳ್‌ಪ ತೇನ್‌ಪುಳು, ನಂಗಕ್ ಒರ್ ಪಾಠ ಎಣ್ಣುವ. ತೇನ್‌ಪುಳು ಪೂವ್‌ನ ತೊಟ್ಟಿತ್ ಮೇಲೆ ಬುದ್ದಕೋ ಪೂವುರ ರಂಗ್‌ಕಾಡ್, ಗಮನಕಾಡ್, ಆಂಡ ಆಕಾರತ್‌ನಾಡ್ ಕೆಡ್‌ತುಲೆ. ಪೂವುರ ರಂಗ್‌ಕ್ಕಾಡ್, ಚಾಯಿಕ್ಕಾಡ್, ಆಂಡ ಪದಕ್ಕಾಡ್ (ಕೋಮಲತೆ) ತಾಂಡ ಮನಸ್ಸ್ ಒಪ್ಪ್‌ಚಿಟ್ಟಿತ್ ಮಂಡೆ ಕೆಡ್‌ತಿಯವುಲೆ. ತಾಂಗ್ ಬೋಂಡಿಯ ಪೂವ್‌ರ ಮಕರಂದತ್‌ನ ಸಂಗ್ರಹ ಮಾಡಿಯಂಡ್ ಒರ್ ಕ್ಷಣತ್‌ನೋ ಪಾಳಾಕತೆ ತಾಂಡ ಕೆಲಸ ಮಾಡುವ, ಅನ್ನನೆ ಮನುಷ್ಯ ಕೂಡ ಪ್ರತೀಯೊಂದಾತ್ ಅದ್‌ಂಡ ಸಾರ ಮಾತ್ರ ಎಡ್‌ತಂಡ್ ಬಾಕಿನ ಅಲ್ಲಿಯೇ ಬುಟ್ಟರಂಡು. ಪೊರ್‌ಮೆರ ರಂಗ್, ಚಾಯಿಕ್ ಮರುಳಾಪವು, ಚರ್ಚೆಕ್, ಸಭೆಕ್ ಬಪ್ಪಂಜಿ ಚರ್ಚೆ ಮಾಡತೆ, ತಕ್ಕ್‌ಪರೆಯತೆ ಜನಡ ಉಡ್‌ಪ್ ತೊಡಪ್‌ನ ನೋಟಿಯಂಡ್ ತನ್ನ ತಾನೇ ಮರಂದನ್ನೆಕೆ. ಕಾರ್ಯತ್‌ರ ಸಾರ ಮಾತ್ರ ಮುಖ್ಯ.

## ತಡಿನ ಕೊದಿಕಂಡ

ನಂಗ,ನಂಗಡ "ತಡಿ" ಎಣ್ಣುವ ಶರೀರತ್‌ರ ಮೀದ ವಿಶ್ವಾಸ ಬೆಪ್ಪಕ್ಕಾಗ. ಅದ್ ಕೇಡ್‌ಕ್ ಬಟ್ಟೆ. ಅದ್‌ನ ಎಚ್ಚಕ್ ಬೋಂಡುವೋ ಅಚ್ಚಕ್ಕಾತೇ ಬೆಕ್ಕಂಡು. ತಡಿಕ್ ಎನ್ನತೆಲ್ಲಾ ಬೋಂಡು. ಒಂದಾ ದಂಡಾ ? ನಂಗಡ ತಡಿ ಒರ್ ಮಣ್ಣ್‌ರ ಕುಡಿಕೆನನ್ನೆಕೆ. ತಡಿಯೇ ಸರ್ವಸ್ವ ಎಣ್ಣಿಯೆಂಡ್ ನಂಬುವದ್ ಅಪಾಯಕಾರಿ. ತಡಿನ ಆರೋಗ್ಯತ್ ಬೆಚ್ಚವಂಡು. ಕಾರ್‌ನ ಕತ್ತಿಯೆಂಡ್ ಆಂಗ್ ಎಣ್ಣೆ, ನೀರ್ ಬೂಕಿಯಂಡ್ ಚಾಯೋಡೆ ಬೆಚ್ಚವ ಎನ್ನಂಗ್ ? ನಂಗಡ ಪ್ರಯಾಣಕ್ ಅನುಕೂಲ ಆಡ್‌ಂದ್, ಅದ್‌ನ ಓಟತೆ ಪೂಜೆಕ್ ಬೆಪ್ಪಕ್ಕಲ್ಲ. ಅನ್ನನೆ ನಂಗ,

ನಂಗಡ ತಡಿನ ನಲ್ಲ ಬಟ್ಟೆಬರೆ ಇಟ್ಟಂಡ್ ಪೌಡರ್, ಸೆಂಟ್ ಇಟ್ಟಂಡ್ ಬೆಚ್ಚವ. ಎನ್ನಂಗ್? ಪರೋಪಕಾರಕ್ಕಾಯಿತ್, ಅಲಂಕಾರಕ್ಕಲ್ಲ, ಪೂಜೆ ಮಾಡುವಕ್ಕಲ್ಲ, ಮಣ್ಣ್‌ರ ಕುಡಿಕೆಕ್ ಅಲಂಕಾರ ಮಾಡಿತೆನ್ನ್ ಸುಖ? ಆನಗುಂಡ್ ಎಂತೇಂಗಿ ಕೆಲಸ ಆಪಾ ? ಸಮಾಜಕಾರ್ಯ ಮಾಡತ ತಡಿಕ್ ಅಲಂಕಾರ ಮಾಡಿತೆನ್ನ್ ಸುಖ ?

## ಪ್ರಯತ್ನ ಬೋಂಡು

ಪರೀಕ್ಷೆಕ್ ಅಳ್‌ಪವು ಪಾಸಾಂಡು ಎಣ್ಣಿಯಂಡ್ ವರ್ಕ್, ಕೂಳ್ ಸಹ ಸೆರಿಯಾಯಿತ್ ಎಡ್‌ತವತೆ ಪ್ರಯತ್ನ ಪಡುವ. ವ್ಯಾಪಾರಿ ತಾಂಡ ಲಾಭಕ್ಕಾಯಿತ್ ಬೈಟ್, ಪೋಲ್‌ನ ಕೂಟಾಕತೆ ನೈಪ. ವಿಜ್ಞಾನಿ ತಾನ್ ಮಾಡುವ ಶೋಧನೆಕ್ಕಾಯಿತ್ ಪೂರ ಪ್ರಪಂಚತ್‌ನ ಮರ್‌ಪ. ಸುರೂಲ್ ತೋಟ ಮಾಡುವವು ತಾಂಡ ಸುಖತ್‌ನ್ನೆಲ್ಲಾ ಮರ್‌ಂದಂಡ್ ಕಷ್ಟ ಪಡುವ. ಇನ್ನನೇ ಓರೋರಬ ಓರೋರಂದ್ ಕೆಲಸತ್ ಲೋಕ ಮರೆಪ. ಆಚೇಂಗಿ ನೀತಿ, ನಡತೆ, ಶೀಲ, ಸಭ್ಯತೆಕಾಯಿತ್ ಪ್ರಯತ್ನ ಪಡುವವು ಪೆರ್‌ತ್ ಕಮ್ಮಿ. ಅಂತಾಂಗ್ ಬೆಲೆ ಕೊಡ್‌ಪವು ಕಮ್ಮಿ. ಈ ಕಾರಣಕೆನ್ನೋ ನೀತಿ, ನಡತೆಕ್ಕಾಯಿತ್ ಕಷ್ಟಪಡುವಕೂ ಪೋಪ ಮನುಷ್ಯಂಡ ಯೋಗ್ಯತೆಕ್ ಬೆಲೆ ಕೊಡ್‌ಪ್‌ಲೆ. ಅವಂಡ ಬಟ್ಟೆಬರೆ ಪಣಕ್ ಬೆಲೆ ಕೆಟ್ಟುವ. ಶಾಶ್ವತ ಆನಂದ ಶಾಂತಿಕ್ ಬಟ್ಟೆ ಕಂಡ್‌ಪುಡಿಪದ್ ಬುಟ್ಟಿತ್ ದುಃಖ ಅಶಾಂತಿರ ಬಟ್ಟೆ ಪುಡಿಪದ್ ತಪ್ಪ್. ಶಾಶ್ವತ ಆನಂದ, ಶಾಂತಿಕ್ಕಾಯಿತ್ ನಲ್ಲ ನಡತೆಕ್ ಸತತ ಪ್ರಯತ್ನ ಬೋಂಡು.

## ನಲ್ಲಗುಣ ಬೊಳತಿಯುವಂಡು

ತೋಟ ತೊಡಿಯ ಮಾಡುವವು ಸುರೂಲ್ ಕಾಡ್ ಕೆತ್ತುವ, ಮಣ್ಣ್ ಕಳಪ, ಬೋಂಡತ ಕಡ್ಡಿ ಕಚಡತ್‌ನ ಕೂಟಿತ್ ತಿತ್ತ್ ಕೊಡ್‌ಪ. ಅಲ್ಲಿಂಜಿ

ಮಣ್ಣ್‌ನ ಪದ ಮಾಡಿತ್ ಗಿಡ ಅಥವಾ ಕುರು ನಡಪ. ಅದ್ಂಗ್ ನೀರ್ ಗೊಬ್ಬರ ಇಟ್ಟಿತ್ ಚಾಕುವ. ಆಡ್ ಅತ್ತ ತಿಂಗತನ್ನಕೆ ಬೇಲಿ ಇಟ್ಟುವ. ಇಚ್ಚಕ್ ಕೆಲಸ ಒಬ್ಬನೇ ಮಾಡಂಡು. ಈ ಸಮಯತ್ ಜನ ದಾರೂ ಪಕ್ಕಬಪ್ಪ್‌ಲೆ. ತೋಟತ್ ಗಿಡ ಬೊಳಂದಿತ್, ಪೂಬುಟ್ಟಿತ್, ಫಸಲಾಪಕ ತೋಟ ಪೊಲಂದಿತ್ ಕಾಂಬ. ಅಕ್ಕ ಜನ ಬಪ್ಪಂಜಿ ಬಾಯಿದುಂಬಾ ಹೊಗಳುವ. ನೋಟಿಯೆಂಡ್ ಕುಶಿ ಪಡುವ. ಅನ್ನನೇ ಮನುಷ್ಯನೂ ಕೂಡ ತಾಂಡ ಮನಸ್ಸ್‌ರ ಕಲ್ಮಷ, ಕಸ, ಕಡ್ಡಿನ ದೂರ ಮಾಡಿತ್ ಮನಸ್ಸ್‌ನ ಪದಮಾಡಿತ್ ನಲ್ಲ ಗುಣ ನಡತೆನ ತಾನೇ ಬೊಳತಿಯವಂಡು, ನಲ್ಲ ಗುಣ ನಲ್ಲನಡತೆ ಕಾಂಬಕ ಅವನ ಎಲ್ಲರೂ ಹೊಗಳುವ. ಮನಸ್ಸ್‌ರ ಕೆಟ್ಟ ಭಾವನೆನ ಚುಡೊಂಡು. ನಲ್ಲ ಪ್ರೀತಿ ಭಾವನೆನ ಬೊಳತಿಯವಂಡು.

## ಡ್ರೆಸ್ಸ್ ಲೆನ್ನುಂಡ್ ?

ಕಾವಿ ಇಟ್ಟಂವನ ಗೌರವಿಚಿಡುವ, ಖಾದಿ ಇಟ್ಟವನ ಮರ್ಯಾದೆ ಮಾಡುವ. ಕೀತ್‌ನ ಮಾಜಿ ಬಟ್ಟೆ ಇಟ್ಟಂವನ ಸಮಾಜಕ್ ಅಯೋಗ್ಯ ಎಣ್ಣುವ. ಒಟ್ಟಾರೆ ಇಟ್ಟ ಬಟ್ಟೆ ನೋಟಿತ್ ಬೆಲೆ ಕೆಟ್ಟುವದ್ ನಂಗಕ್ ರೂಢಿಯಾಯಿತ್. ನಲ್ಲ ಬಟ್ಟೆ ಇಟ್ಟಾಕ್ಷಣ ಮನುಷ್ಯ ನಲ್ಲವನಾಯಿರುಲೆ; ಕಾವಿ ಇಟ್ಟಾಕ್ಷಣ ಸನ್ಯಾಸಿ ಆಪ್‌ಲೆ. ಖಾದಿ ಇಟ್ಟಾಕ್ಷಣ ದೇಶಭಕ್ತನಾಪ್‌ಲೆ. ಬಟ್ಟೆಕ್ ಸರಿಯಾನ ಭಕ್ತಿ, ವಿರಕ್ತಿ ಇಲ್ಲತ ಪೋಚೇಂಗಿ ಅದ್ ಮೋಸ ಮಾಡ್‌ನನ್ನೆಕೆ. ಪರಹಿತ ಬುದ್ದಿ ಬೋಂಡು, ನಲ್ಲ ಪವಿತ್ರ ನಡ್‌ಪು ಬೋಂಡು. ನಲ್ಲ ಚಾರಿತ್ರ್ಯ ಉಳ್ಳಂವನಾಂಡು. ಅನ್ನತವು ಮಾಮೂಲಿ ಬಟ್ಟೆ ಇಟ್ಟಕ, ಎನ್ನನೆ ತಲಮಿನ ಬುಟ್ಟಕೋ ನಲ್ಲದೇ ಕಾಂಬ. ಡ್ರೆಸ್ಸ್‌ಲ್ ಮನುಷ್ಯನ ಅಳೆಪಕ್ಕಾಗ, ಗುಣ ನಲ್ಲ ನಡ್‌ತೆಲೆ ಮನುಷ್ಯನ ಗೊತ್ತ್‌ಮಾಡಂಡು.

# ಸಾಧನೆ ಚೆರ್‌ಪತ್‌ಂಜೇ ಬೋಂಡು

"ಮನುಷ್ಯಂಗ್ ಯೌವ್ವನ, ಶಕ್ತಿ ಇಪ್ಪಕ ಎನ್ನೆಲ್ಲೇಂಗಿ ಕಳಿಕಲು. ವಯಸ್ಸಾನ ಪಿಂಞ ದೇವಳ ಗೇನ ಮಾಡ್‌ಚೇಂಗಿ ಮದಿ"ಂದ್ ಎಣ್ಣುವ ಮನೋಭಾವ ತಪ್ಪು. ಜೋರ್‌ಲ್ ಓಡುವ ಕುದ್‌ರೆಕ್ ಮಾತ್ರ ಕಡಿವಾಣ. ಅನ್ನನೆ ಮನುಷ್ಯ ತಾನ್ ಆರೋಗ್ಯತಿಪ್ಪಕ ವಯಸ್ಸ್ ಇಪ್ಪಕ, ಯೌವ್ವನ ಇಪ್ಪಕ ನಿಸ್ವಾರ್ಥ ಸೇವೆ ಮಾಡಂಡು. ವಯಸ್ಸಾನನ್ನೆಕೆ ಆರೋಗ್ಯ ಪಾಳಾಪ. ಯೌವ್ವನ ಇಪ್ಪ್ಲೆ. ಅಕ್ಕ ಏದ್ ಕೆಲಸ ಮಾಡವಕೂ ಕೈಯ್ಯುಲೆ, ಮನಸ್ಸಾಪ್‌ಲೆ. ಎಲ್ಲಿಕೆತ್ತಣೆ ನಲ್ಲ ತಡಿ ನಲ್ಲ ಮನಸ್ಸಿಪ್ಪೋ ಅಕ್ಕೇ ನಂಗ ಆದರ್ಶ ಜೀವನ ನಡತುವಕ್ ಪಡಿಕಂಡು. ನಾಳೆಕ್ ತ್‌ೇರಕ್‌ನಕ ಬಾಳ್ ಪಾಳಾಪ. ಮನೆಕ್ ತಿತ್ತ್ ಪತ್ತಿತ್ತಿಪ್ಪಕ ಕಣತರೆ ತೋಡ್ ಚಿಡುವದ್ ಪ್ರಯೋಜನ ಆಪ್‌ಲೆ. ಅಭ್ಯಾಸ ಮಾಡತೆ ಪೋಚೇಂಗಿ ಚಾವಕ್ಕಾಪಕ ನಲ್ಲ ಸ್ಮರಣೆ ಬಪ್ಪ್ಲೆ. ಚೆರ್‌ಪತ್ತಿಂಜೇ ನಲ್ಲ ಸಾಧನೆ ಮಾಡುವಕ್ ಪಡಿಕಂಡು, ಸಾಧನೆ ಮಾಡಂಡು.

# ಗೇನ ಮಾಡ್‌ನನ್ನೆಕೆ ಜೀವನ

ಎಲ್ಲಿ ತೆಳಿ ಉಂಡೋ ಅಲ್ಲಿಯೇ ನಂದನವನ. ತೆಳಿಯೇ ಬಾಳ್‌ರ ಬೊಳಿ. ಜೀವನ ಎಣ್ಣಕ. ಕಷ್ಟ-ಸುಖ ಜೀವನತ್ ದುಂಬಿತ್ತಿಪ್ಪ. ಕಘಟತ್ತಿಪ್ಪಕ ಮೂಡ್ ಬಾಡಿಯಂಡಿಪ್ಪ. ಜೀವನ ಒರ್ ಭಾರಾಂದ್ ಗೇನ ಮಾಡುವಕ್ಕಾಗ. ಸೀತೆಕ್ ಕಾಡೇ ನಂದನವನ ಆಚಿ. ರಾಮಂಗ್ ಅರಮನೆಯೇ ಸ್ಮಶಾನ ಆಚಿ. (ಸೀತಾ ಪರಿತ್ಯಾಗ) "ನಿಂಗೆಲ್ಲಾ ಆನಂದತ್‌ರ ಮಕ್ಕ. ನಿಂಗಡ್ ಮೂಡ್ ಸದಾ ಬೀಂದಿತ್ತಿರಡ್" ಎಣ್ಣ್‌ನ ಸ್ವಾಮಿ ವಿವೇಕಾನಂದಂಡ ತಕ್ಕ್‌ಲ್ ಪೆರ್ತ್ ಅರ್ಥ ಉಂಡ್. ಸೋಮಾರಿಕ್ ಒರ್ ಮೈಲ್ ನಡಪ ಎಣ್ಣಕ ಪ್ರಾಣಕ್ ಬಪ್ಪ.

ನಡಪಡೋರ್ ಕಳೀಂದ್ ಕಳ್‌ಚಕ ಅದೋರ್ ಕ್ಷಣ ಮಾತ್ರ. ಜೀವನ ನಂಗ ಅರಿಂಜನ್ನೆಕೆ, ತೆಳಿಮೂಡ್‌ಲ್ ಮಾಡ್‌ನ ಕೆಲಸಕ್ ಭಾರ ಕಮ್ಮಿ. ಭಾರಾಂದ್ ಗೇನ ಮಾಡ್‌ನಲ್ಲಿ ಶಕ್ತಿಯೂ ಇಲ್ಲತಾಪ.

## ಜೀವನ ಕಣ್ಣ್ ಮುಚ್ಚಾಲೆ ಕಳಿ

ಇಂದ್ ಬೆಲೆ ಬಾಳುವದ್ ನಾಳೆ ತಾಂಡ ಬೆಲೆನ ಕಳಂದವ. ಇಂದ್ ನಂಗಕ್ ಬೋಂಡಿಯಾಪದ್ ನಾಳೆ ಬೋಂಡತಾಪ. ಇದ್ ನಂಗಡ ಅನುಭವ ಲೋಕತ್ ನಾಶ ಆಪ ವಸ್ತುರ ಬೆಲೆ ಎಲ್ಲಾ ಅನ್ನನೆ. ಇದೇ ಅವಸ್ಥೆ ಏದ್ ಅಪ್ಪವ್ವೊ ನಂಗಳ ಚಾಕ್‌ಚೋ, ನಂಗಕ್ ಜನ್ಮ ತಾತೋ, ದಾರ್ ನಂಗಳ ಮುತ್ತ್‌ಟ್ಟಂಡ್ ಚಾಕ್‌ಚೋ, ದಾರ್ ನಂಗಳ ತಾಂಡ ಜೀವಾಂದ್ ಚಾಕ್‌ಚೋ ಅವು ಎಲ್ಲ ಚೆನ್ನಂಗೇ ಕಾಲ ಇಪ್ಪ. ಒಂದೋ ಅವು ನಂಗಳ ಬುಟ್ಟಿತ್ ಪೋಪ. ಇಲ್ಲೇಂಗಿ ನಂಗ ಅಯಿನ ಬುಟ್ಟಿತ್ ಪೋಪ. ಚೆನ್ನಕಾಲ, ಕುಞ್ಞಿಯಾಯಿತ್, ಯೌವ್ವನತ್ ಚಾಯಿಕಾರನಾಯಿತ್. ಒಮ್ಮ ಪಣಕಾರನಾಯಿತ್, ಒಮ್ಮ ಗರೀಬನಾಯಿತ್. ಒಮ್ಮ ಆರೋಗ್ಯತ್, ಒಮ್ಮ ರೋಗಿ ಆಯಿತ್ ಜೀವನತ್‌ರ ಸುಖ ದುಃಖ ಎಣ್ಣುವ ಕಣ್ಣ್ ಮುಚ್ಚಾಲೆ ಕಳಿಕಳಿಪ. ಈ ಕಳಿಲ್ ಜೀವನತ್‌ರ ಅನಂತ ಶಕ್ತಿನ ನಂಗ ಅರಿಂಜವಂಡು.

## ಮಾಡಿತ್ ಕಾಟಂಡು

ತಾಂಡ ಮೇಲೆ ತಾಂಗ್ ಪ್ರೀತಿ ಇರಂಡು. ಇದ್ ಸ್ವಾಭಾವಿಕ. ಆಚೇಂಗಿ ಎಚ್ಚಕಾಳ್ ತನ್ನ ತಾನೇ ಪ್ರೀತಿ ಮಾಡುವ? ತನ್ನ ತಾನೇ ಪ್ರೀತಿ ಮಾಡಂಡಿಕೆ ತಾಂಡ ಮೇಲೆ ತಾಂಗೇ ಕಣ್ಣಿರಂಡು. ಇರ್‌ಲ್ ಪೋಲ್ ತಾಂಡ ನಡತೆರ ವಿಷಯತ್ ಕಣ್ಣಿರಂಡು. ಇರ್‌ಲ್ ಪೋಲ್ ತಾಡ ನಡತೆರ ವಿಷಯತ್ ಎಚ್ಚರ

ಇರಂಡು. ನಂಗ ಇಞ್ಞೊಬ್ಬಂಡ ವಿಷಯ ಪರೆವ. ಅಂವ ಅನ್ನನಿರಂಡು, ಇನ್ನನ್ನಿರಂಡು ಎಣ್ಣುವ, ಅನ್ನನೆ ನಂಗಳ ನಂಗಳೇ ತಿದ್ದಿಯಂಡಿರಂಡೂಂದ್ ಗೇನವೇ ಮಾಡುಲೆ. ಇಂಞೊಬ್ಬಂಗ್ ಉಪದೇಶ ಮಾಡುವದ್ ಸುಲಭ. ಸ್ವತಃ ಅದ್‌ನೇ ಆಚರಣೆ ಮಾಡುವದ್ ಕಷ್ಟ. ಸುರೂಲ್ ತಾನ್ ಮಾಡಿತ್, ಮಾಡಿಯಂಡ್ ಉಳ್ಳಯಿಂಗಕ್ ಎಣ್ಣಂಡು. ತಕ್ಕ್ ತಕ್ಕ್‌ಕ್ ಪೊಟ್ಟ್‌ಪರೆವವು ಬಾಕಿ ಉಳ್ಳವು ನೇರ್ ಎಣ್ಣಂಡೂಂದ್ ಆಶೆ ಪಡುವೊ ಎನ್ನನೆ ?

## ಬಿತ್ತ್‌ನಾನ ಕೊಯ್ಯುವ

ಬೋಂಡತ ಕೆಲಸ ಮಾಡಿತ್ ಒಬ್ಬಕೂ ಗೊತ್ತಾಯಿತ್ತಿಲ್ಲೆ, ನಾನ್ ತಪ್ಪ್‌ಚಿಟ್ಟಂಡ ಎಣ್ಣಿಯವದ್ ಮುಟ್ಟಾಳತನ. ಪ್ರತೀ ಕೆಲಸಕ್ ಆಂಡದೇ ಆನ ಪ್ರತಿಫಲ ತಪ್ಪ್‌ನದಲ್ಲ. ಪಾಳ್ ಕೆಲಸತ್‌ರ ಪ್ರತಿಫಲ ಬಪ್ಪಲ್ಲಿಕೆತ್ತನೆ ನಂಗಕ್ ಸುಖ ಎಣ್ಣಿತೆ ಕಾಂಬ. ನಲ್ಲ ಕೆಲಸ ಮಾಡ್‌ಚೇಂಗಿ ಆಂಡ ಫಲ ಬರಣೆ ಕಷ್ಟಾಂದ್ ಕಾಂಗು. ಆಚೇಂಗಿ ಪ್ರತಿಫಲ ತಪ್ಪ್‌ನದಲ್ಲ. ಬೋಂಡತ ದೆಲ್ಲಾ ಮಾಡ್‌ನ ಕೌರವ ಸರೋವರತೆ ಒಳಿಚತ್. ಆಚೇಂಗ್ಯೂ ಅವಂಗ್ ಚಾವು ತಪ್ಪ್‌ಲೆ, ರಬ್ಬರ್ ಚೆಂಡ್‌ನ ಎಚ್ಚಕ್ ಜೋರ್‌ಲ್ ಕೆಂವಕ್ ಕನ್‌ಚಕ ಅಚ್ಚಕೇ ಜೋರ್‌ಲ್ ಅದ್ ಬಯ್ಯಕ್ಕೇ ಬಪ್ಪ! ಅನ್ನನೆ ಪ್ರತಿ ಕೆಲಸಕ್ಕೂ ಅದೇ ರೀತಿ ಪ್ರತಿಕ್ರಿಯೆ ಬಂದಿತೇ ಬಪ್ಪ. ನಂಗ ನಲ್ಲದಾಂಡಿಕೆ ನಲ್ಲ ಗೇನ, ನಲ್ಲ ತಕ್ಕ್, ನಲ್ಲ ಕೆಲಸ ಮಾಡಂಡು ಅಕ್ಕ ತಾಂಗೂ ನಲ್ಲದ್, ಜನಕೂ ನಲ್ಲದ್, ನಂಗ ಎಂತಾನ ಬಿತ್ತುವೋ ಅದ್‌ನೇ ಪ್ರತಿಫಲ ಆಯಿತ್ ಕೊಯ್ಯಂಡು.

## ಎಲ್ಲಾಕೂ ಬೋಂಡಿಯುವನಾಂಡು

ಆಸೆ-ನಿರಾಸೆ, ರೋಗ-ರುಜಿನ, ಕಷ್ಟ-ನಿಷ್ಠುರ, ಸುಖ-ದುಃಖ, ಜೀವನತ್ ಪ್ರತೀ ಮೊಟ್ಟ್‌ಲೂ ಬಪ್ಪ. ಅದ್‌ನ ತಪ್ಪ್‌ಚಿಟ್ಟಂಡ್ ಬದುಕುವಿಂದ್ ಗೇನ

ಮಾಡಂಡ. ಜೀವನ ಬರೀ ಕಷ್ಟ, ಕಣ್ಣೀರ್ ಎಣ್ಣಿಯಂಡ್ ಚಾವಕ್ ಪೋಪಕೂ ಆಗ. ಒರ್ ಪೂವ್ ಬೀವಂಡಿಕೆ, ಕಾಟ, ಕಡ್ಡಿ, ಹೇಸಿಗೆ, ಗೊಬ್ಬರತ್ತಿಂಜಿ ನಲ್ಲ ಸಾರ ಊತಿಯಂಡ್ ಬೊಳಂದಿತ್ ಪೂವ್ ಬುಡುವ. ಆ ಪೂವ್‌ನ ಜನ ಕೊದಿಪ. ಮನುಷ್ಯ ಜೀವನತ್ ಏವದೂ ಬೂವದೂ ಉಂಡ್. ಬೂವ ಏವಕ್ಕಾಯಿತ್, ಬುದ್ದಲ್ಲಿಯೇ ಇಪ್ಪಲೆ. ಜೀವಮಾನತ್ ದರಿದ್ರತನ, ಕೆಟ್ಟಪೆದ, ಜಗಳ ಇದ್‌ನೆಲ್ಲ ಧೈರ್ಯತ್ ನೀಸಂಡು, ಪೂತೋಟತ್ ತರಾವರಿ ಪೂವ್ ಉಳ್ಳನ್ನೆಕೆ, ಪೂತೋಟನೆನ್ನೆಕೆ ಉಳ್ಳ ಈ ಲೋಕತ್ ತರಾವರಿ ಜನ ಇಪ್ಪ. ಪೂವ್ ಚಾಯಿಲ್ ಸುವಾಸನೆ ಉಂಡೇಂಗಿ ಎಲ್ಲರೂ ಖುಷಿ ಪಡುವ. ಮನುಷ್ಯ ನಲ್ಲ ಗುಣ, ನಡತೆ, ತಕ್ಕ್ ಕಂಡಲ್ಲಿ ಕೊದಿಪ. ಅಂತವು ಎಲ್ಲಾಕೂ ಬೋಂಡಿಯಾಪ.

## ಆಸೆಕ್ ಅಂತ್ಯ ಇಲ್ಲೆ

ಮರಗಿಡ ಮುದಿಯಾಯಿತ್ ಒಣಂಗಿತ್ ನಾಶ ಆಪ. ಪ್ರಾಣಿ ಪಕ್ಷಿಯ ಬೊಳಂದನ್ನೆಕೇ ಕ್ಷೀಣ ಆಯಂಡ್ ಚಾವ. ಮನುಷ್ಯಂಡ ಶರೀರವೂ ಚಾಯಿಲ್ ಬೊಳಂದಿತ್ ಕಡೇಕ್ ನಾಶ ಆಪ. ತೀಕ್ಷ್ಣ ಬುದ್ದಿ ಉಳ್ಳವಂಗೂ ಸಮಯ ಪೋನನ್ನೆಕೆ ಬುದ್ಧಿ ಕಮ್ಮಿಯಾಯಂಡ್ ಬಪ್ಪ. ಶಕ್ತಿವಂತಂಡ ಶಕ್ತಿಯೂ ಕಮ್ಮಿಯಾಯಂಡ್ ಬಪ್ಪ. ಇದೆಲ್ಲಾ ಕಾಂಬಕ ಬೊಳೆವ ಪ್ರತೀ ವಸ್ತುಕೂ ಒಂದಲ್ಲ ಓರ್ ದಿನತ್ ನಾಶ ಇಂಜಿತೇ ಇಪ್ಪ. ಚೆರಿಯ ಮಕ್ಕಡಲ್ಲಿ ಆಸೆ ಕಮ್ಮಿ ಇಪ್ಪ. ಆಚೇಂಗಿ ವಯಸ್ಸ್ ಜಾಸ್ತಿ ಆನೆನ್ನೆಕೆ ಆಸೆಯೂ ಏರುವ. ವಯಸ್ಸ್‌ಲ್ ಪಣ್ಣಾನ, ಪಣ್ಣ್ ಪಣ್ಣಾನ ಮುದುಕಂಗ ಆಸೆ ಬುಟ್ಟಿತ್ತಿಲ್ಲೆ. ಮಿತಿ ಇಲ್ಲತ ಆಸೆ ಉಳ್ಳವಂಗ್ ನಿರಾಶೆ ತಪ್ಪ್‌ನದಲ್ಲ. ಸರ್ವ ಕಷ್ಟ, ದುಃಖ, ಅಶಾಂತಿ, ನಿಷ್ಠುರಕ್ಕೆಲ್ಲಾ ಆಸೆಯೇ ಮೂಲ ಕಾರಣ. ನಂಗಡ ಮೂಡ್ ಬೆನ್ನೇ ನಂಗಕ್ ಕಾಂಬ್‌ಲೆ. ಅನ್ನನೆ ಆಸೆರ ಪ್ರತಿಫಲ ಒಮ್ಮಲೇ ಕಾಂಬ್‌ಲೆ. ಆಸಲ್ ಕಣ್ಣ್

ಕುರುಡಾಪ, ಬುದ್ದಿ ಮಂದ ಆಪ. ಪುಚ್ಚನಾಪಕೂ ಮದಿ.

## ನಲ್ಲ ಗುಣ ನಲ್ಲ ಕಾರ್ಯ

ಮನುಷ್ಯ-ಎಲ್ಲಾ ಉಂಡೇಂಗ್ಯೂ, ಏದ್ ಜವಾಬ್ದಾರಿ ಪೊರ್‌ತಂಡ್ ಕೆಲಸ ಮಾಡ್‌ಚೇಂಗೂ, ಕೆಲಸ ಮಾಡ್‌ನವಂಗ್ ನಲ್ಲ ಕೆಲಸ ಮಾಡುವ ಗುಣ ಇರಂಡು. ರಾಜನೇ ಆಡ್, ಆಳೇ ಆಡ್-ತಾನ್ ಮಾಡುವ ಕೆಲಸತ್‌ರ ಮೀದ ಪ್ರೇಮ, ಪ್ರೀತಿ ನಿಷ್ಠೆ ಇರಂಡು. ಅದಿಲ್ಲೇಂಗಿ ಮಾಡ್‌ನ ಕೆಲಸ ಚಾಯಾಗ. ಏದೇ ಕೆಲಸ ಮಾಡುವಕ ಭಕ್ತಂಗಡಲ್ಲಿಪ್ಪ ನಿಷ್ಠೆ, ಅವ್ವಂಡನ್ನತ ಹೃದಯ ಬೋಂಡು. ಪತಿವ್ರತೆರಲ್ಲಿಪ್ಪ ಪಾವಿತ್ರ್ಯತೆ ಬೋಂಡು. ಜಿಪುಣಂಗ್ ಪಣತ್‌ರ ಮೀದ ಆಕರ್ಷಣೆ ಇಪ್ಪನ್ನಕೆ ನಂಗಕ್ ನಂಗ ಮಾಡುವ ಕೆಲಸತ್‌ರ ಮೀದ ಆಕರ್ಷಣೆ ಇರಂಡು ಇನ್ನನೆ ಮಾಡ್‌ನ ಕೆಲಸ ಅಥವಾ ಪಣಿ ನಲ್ಲದಾಯಿತ್ ಉತ್ತಮವಾಯಿತ್ ಕಾಂಬ. ನಲ್ಲ ಗುಣ ಉಳ್ಳವಂಗ್ ಏದ್ ಪಣಿಯೂ ಅಸಾಧ್ಯ ಆಪ್‌ಲೆ.

## ಅರಿಯುವವನೇ ಪೆರಿಯವೊಂ

"ಅರಿಯುವವನೇ ಪೆರಿಯವಂವ" ಎಣ್ಣುವ ಗಾದೆ ಉಂಡ್. ಈ ಲೋಕತ್ ಅರಿಯುವಂತಾ ಜ್ಞಾನ ಪರ್ತ್ ಉಂಡ್. ಎಲ್ಲಾನ ಅರಿಂಜವನ್ನತ ಶಕ್ತಿ ಮನುಷ್ಯಂಡ ಬುದ್ಧಿಕ್ ಇಲ್ಲೆ. ಎಲ್ಲಾ ವಿಚಾರ ಇರಡ್ ತಾಂಗ್ ಅವಶ್ಯ ಉಳ್ಳಾನಾಚೇಂಗ್ಯೂ ಅರಿಂಜವಕ್ ಸಾಧ್ಯ ಇಲ್ಲೆ. ಮನುಷ್ಯಂಡ ಮೆದುಳ್‌ಕ್ ಎಲ್ಲಾನೋ ಗ್ರಹಣ ಮಾಡುವ ಕಯ್ಯ್‌ಲೆ. ಅವಂಡ ಆಯಸ್ಸ್ ಪೋರ. ಒಬ್ಬ ಎಲ್ಲಾ ಪುಸ್ತಕತ್‌ನ ಓದಲು, ಓದುವದೇ ಜ್ಞಾನ ಅಲ್ಲ. ಓದ್‌ನಾನ ಅನುಭವತ್ ಕರಕಿಯವದೇ ಜ್ಞಾನ. ನಂಗಡ ಜೀವಮಾನಕ್ ಜ್ಞಾನ ಒಂದೇ ಪೋರ. ಬುದ್ದಿ,

ಹೃದಯ, ಜ್ಞಾನ-ಪ್ರೇಮ ದಂಡೂ ಒಟ್ಟಾಯಿತಿರಂಡು. ಬುದ್ದಿ ಎಣ್ಣಕ ಪೋರ. ಶುದ್ಧಿ ಬೋಂಡು. ಜ್ಞಾನ ಜಾಸ್ತಿ ಉಂಡೇಂಗಿ ಪೋರ, ಮಾನ ಬೋಂಡು. ಆಲೋಚನೆ ತೆಳಿ ಪೋರ, ಸಹನೆ ಪಿಂಞ ಸಂತೋಷ ಬೋಂಡು. ಎಲ್ಲಾಂಡ ವ್ಯತ್ಯಾಸ ಅರಿಯಂಡು.

## ತಿದ್ದುವ ಎನ್ನನೆ ?

ಇಞ್ಞೊಬ್ಬಂಡ ತಪ್ಪುನ ಎಡ್‌ತ್ ಪರೆವಕೂ, ತಾಂಡ ತಪ್ಪುನ ಇಞ್ಞೊಬ್ಬ ಕಾಟಿತಪ್ಪಕೂ ಒರ್ ರೀತಿ ಉಂಡ್. ತಪ್ಪುನ ಕಾಟಿ ಕೊಡ್‌ಪವನ, ತಪ್ಪ್‌ನ ತಿದ್ದುವ ದೃಷ್ಟಿಲ್ ಮಾತ್ರ. ಅವಮಾನ ಮಾಡುವಕ್ಕಲ್ಲ. ಮೇಲ್‌ಲ್ ಉಳ್ಳ ಪುಣ್ಣ್‌ಕ್ ಮದ್ದ್ ಇಟ್ಟನ್ನೆಕೆ. ಟೀಕೆ ಮಾಡುವಕ ಪೋಷಣೆ ಮಾಡುವನ್ನೆಕ್ಕಿರಂಡು. ಗಾಯಕ್ ಉಪ್ಪ್ ಇಟ್ಟನ್ನೆಕೆ ಆಪಕ್ಕಾಗ. ಈ ದೃಷ್ಟಿಲ್ ತಪ್ಪ್‌ನ ಕಾಟಿತಪ್ಪಯಿಂಗಳ ಸ್ವಾಗತ ಮಾಡಂಡು. ಅಂತಯಿಂಡ ಸಹಾಯತ್ ನಂಗ ನಂಗಡ ತಪ್ಪುನ ತಿದ್ದಿಯಂಡ್ ನಲ್ಲವು ಆಕಲು, ಒರ್ ಪಾತ್ರೆಲ್ ಮಸಿ ಬೂದಿ ಇಪ್ಪಕ ಅದ್‌ನ ಉದ್ದಿತ್ ಎಡ್‌ಕಂಡು. ಆಂಡ ಬದ್‌ಲ್ ಪಾತ್ರೆಕ್ ದೊಣ್ಣೆ ಎಡ್‌ತ್ ಬಡಿಚಕ ಎನ್ನಾಕು? ಅನ್ನನೆ ಪರಿವರ್ತನೆ ಮಾಡತ ಟೀಕೆ ಪ್ರಯೋಜನ ಆಪಾಂಡ ಬದ್‌ಲ್ ವೈರತ್ವ ಪುಟ್ಟುವಕ್ ಮೊಳಿ ಆಪ. ತಿದ್ದುವ ಎಣ್ಣುವಲ್ಲಿ ಎಚ್ಚರ ಇರಂಡು.

## ಕ್ಷಮಾ ಭಾವನೆ ಇರಂಡು

ಪುಟ್ಟ್‌ನ ಪ್ರತೀ ಜೀವಿಕೂ ಆಂಡದೇ ಆನ ಪುಟ್ಟ್‌ರ ಗುಣ ಉಂಡ್. ಪುಟ್ಟ್‌ಗುಣತ್‌ನ ದಾರೂ ಬುಟ್ಟ್ ಕೊಡ್‌ಪುಲೆ. ಮನುಷ್ಯಂಗೂ ಒರ್ ಪುಟ್ಟ್‌ಗುಣ ಉಂಡ್. ಅದೇ ಮನುಷ್ಯತ್ವ. ಅದಂಗ್ ಸರಿಯಾಯಿತ್ ಬಾವಕ್

ಪಡಿಕಂಡು, ಪ್ರಯತ್ನ ಪಡಂಡು. ಕೆಟ್ಟ ಕೆಲಸ ಮಾಡುವವ, ಮೋಸ, ದರೋಡೆ ಮಾಡುವಂವ, ಮನುಷ್ಯ ರೂಪತ್ತುಂಡೇಂಗೂ ಪ್ರಾಣಿಕ್ಕಿಂಜಿ ನಲ್ಲವನಾಪ್ಲೆ. ತಾಂಡ ಆಸೆನ ನೆರವೇರ್‌ಚ್‌ಡುವಕ್ ಮಾಡತಾನೆಲ್ಲಾ ಮಾಡುವ. ಆಸೆಕ್ ಮಿತಿ ಇಲ್ಲೆ. ಅದ್ ಎಲ್ಲಾ ಬೋಂಡು ಎಣ್ಣುವದ್ ನೇರ್. ಆಸೆಕ್ ಮಿತಿ ಇರಂಡು. ಆಸೆನ ತಾಂಡ ಪುಡ್‌ತತ್ ಬೆಚ್ಚವಕ್ ಪಡಿಕಂಡು. ಒಬ್ಬನ ಶಿಕ್ಷೆಕ್ ಗುರಿ ಪಡತುವದ್ ಬಲ್ಯ ವಿಷಯ ಅಲ್ಲ. ಕ್ಷಮಾಭಾವನೆ ಬೋಂಡು. ಈ ರೀತಿ ನಲ್ಲಗುಣತ್‌ನ ಬೊಳತಿಯವು "ಮನುಷ್ಯ" ಎಣ್ಣಿಚಿಟ್ಟವ. ರೂಪ ಆಕಾರತ್ ನಿಜ ಮನುಷ್ಯ ಆಪ್‌ಲೆ. ಪ್ರೀತಿ, ಕ್ಷಮಾಭಾವನೆ ಇರಂಡು.

## ಕಳೆ ಮನಸ್ಸ್

ಗರಿಕೆ ಪಿಲ್ಲ್ ಬೊಳಂದ ನೆಲತ್‌ನ ಶುದ್ಧ ಮಾಡುವದ್ ಕಷ್ಟ. ಎಚ್ಚಕೇ ಪ್ರಯತ್ನಪಟ್ಟಕಲೂ ಅದ್ ಚಿಗರಿಯೆಂಡೇ ಇಪ್ಪ. ಅದ್‌ನ ಪೂರ್ತಿ ನಾಶಮಾಡುವಕ್ ಒಂದೊಂದಾಯಿತ್ ಆಂಡ ಬೇರ್‌ನೇ ಬಲ್‌ಚಿ ಕನಿಕಂಡು. ಮನುಷ್ಯಂಗ್ ಪಾಳ್ ಬುದ್ಧಿ, ಪಾಳ್ ಗುಣ ಗರಿಕೆ ಪಿಲ್ಲ್‌ನೆನ್ನೆಕೆ. ಒಮ್ಮ ನಂಗಡ ಹೃದಯತ್ ಕೆಟ್ಟ ಗುಣ ನುಗ್ಗಿಟಕ ಅದ್‌ನ ಪೋಪ್‌ಚಿಡುವದ್ ಪೆರ್ತ್ ಕಷ್ಟ. ಬೇಲ್‌ಲ್ ನಲ್ಲ ಬೊಳೆ ಆಂಡಿಕೆ ಕಳೆ ಇಪ್ಪಕ್ಕಾಗ. ಉಂಡೇಂಗೂ ಕಳೆನ ಪೂರ್ತಿ ಎಡ್‌ಪಂಜಿ ನಾಶ ಮಾಡಂಡು. ಚಿಗುರುವಕ್ ಬುಡುವಕ್ಕಾಗ. ಅನ್ನನೇ ನಲ್ಲ ಗುಣತ್‌ರ ಮನಸ್ಸ್ ಬೋಂಡಿಕೆ ದುಷ್ಟಗುಣತ್‌ನ ನಾಶ ಮಾಡಂಡು. ಅದ್‌ನ ಬೊಳೆವಕ್ ಬುಡುವಕ್ಕಾಗ, ಏದೋರ್ ಕೆಲಸ ಕಾರ್ಯ ಮಾಡುವಕೂ ಮನಸ್ಸ್ ಶುದ್ಧತಿರಂಡು.... ತಯಾರಾಯಿತಿರಂಡು. ಕರ್ತ ಮಸಿಲ್ ಬೊಳ್‌ತ ಕಾಗದತ್ ಎಳ್‌ದಲು, ನಕ್ಷೆ ಬುಡ್‌ತಲು, ಚಾಯಿಕಾಂಬ, ಆಂಡ ಬದ್‌ಲ್ ಕಾಗದ ದುಂಬಾ ಇಂಕ್ ಬುದ್ದಕ ಕಾಗದ ಕನಿಕಂಡು. ಅನ್ನನೇ ನಂಗಡ ಮನಸ್ಸೂ.

## ಒಳ್‌ಲ್ ಶತ್ರುವ

ಏದೇ ವಸ್ತು ಆಡ್, ಆಂಡ ಮೀದ ಅಳತೆ ಮೀರಿತ್ ಆಸಕ್ತಿ ಇಪ್ಪಕ್ಕಾಗ. ಪ್ರತೀಯೊಂದಾತೂ ಪುಡ್‌ತ ಇರೊಂಡು ಪ್ರೇಮಿಯ ಎಣ್ಣಿಯೆಂಡ್ ಬೀದಿಲ್ ಪ್ರೇಮ ಪ್ರದರ್ಶನ ಮಾಡುವ ಕಯ್ಯುವಾ? ನಾವುಕ್ ಚೋದ್ ಎಣ್ಣಿಯಂಡ್ ಹದ್ದ್ ಬಸ್ತ ಇಲ್ಲತೆ ತಿಂದಕ ಎನ್ನಾಪ ? ಏದೇಂಗಿ ಆಸಕ್ತಿ ವಿಪರೀತ ಅನಕ ಲಾಭಕ್ಕಿಂಜಿ ನಷ್ಟವೇ ಜಾಸ್ತಿ. ನಲ್ಲ ಪಾಟ್‌ಕಾರ ಎಣ್ಣಿಯಂಡ್ ರಸ್ತೆಯಿಡೀ ಪಾಡ್‌ನಕ ಜನ ಅವನ ಪುಚ್ಚ ಎಣ್ಣುವ. ಅದ್‌ಂಡ ಬದ್‌ಲ್ ತಾಂಡ ಗೌರವ ಬೆಚ್ಚಂಡ್ ಗಾಯನ ಕಚೇರಿಲ್ ಪಾಡ್‌ನಕ ಜನ ಮೆಚ್ಚುವ. ಏದೇ ವಸ್ತುವಾಡ್ ಅದ್‌ನ ಬೆಪ್ಪಲ್ಲಿ ಬೆಚ್ಚಕ, ಇಪ್ಪಲ್ಲಿ ಇಂಜಕ ಆಂಗ್ ಸ್ಥಾನ ಮಾನ ಅದ್‌ಂಗೋರ್ ಗೌರವಸ್ಥಾನ ತಪ್ಪ್‌ನಕ ತಿರಸ್ಕಾರ ಕೆಟ್ಟಿಟ್ಟದ್.

## ನೀಕ್ ನೀನೇ ಸಹಾಯಕ

ನಂಗಡ ಅಪ್ಪವ್ವ ನಂಗಡ ಮೇಲೆ ಎಚ್ಚಕೇ ಪ್ರೀತಿ ಬೆಕ್ಕಡ್, ಬೆಂದು ಚಜ್ಜಾದಿಯ ಎಚ್ಚಕೇ ಮಮತೆ ಕಾಟಡ್, ಸ್ನೇಹಿತಂಗ ಎಚ್ಚಕೇ ಸಹಾಯ ಮಾಡಡ್, ನಂಗಡ ಕಾಲ್‌ಲೇ ನಂಗ ನಡಂದಿತ್ ಮಿಞ್ಞಾಕ್ ಪೋಂಡು. ಬೋರೆ ಜನ ಎಣ್ಣುವ ಬುದ್ಧಿ, ಮಾಡಿತಂದ ಕೆಲಸ, ಮಾಡ್‌ನ ಸಹಾಯ ದುಂಬ ದಿನ ಬಪ್ಪ್‌ಲೆ. ಇಂಞ್‌ಒಬ್ಬಂಡ ಆಶ್ರಯತ್ ಬದ್‌ಕುವವಂಗ್ ಸುಖಶಾಂತಿ ಇಪ್ಪ್‌ಲೆ, ಅವು ಎಲ್ಲಾ ತಂಗಕ್ ಬಟ್ಟೆ ಕಾಟುವುವು ಮಾತ್ರ. ಬಟ್ಟೆಲ್ ನಡ್‌ಪಕ ನಂಗಳೇ ನಡಕಂಡು. ಅನ್ನನೇ ಸಮಯತ್‌ರ ಬೆಲೆ ಅರಿಯಂಡು. ಇದ್‌ನ ಅರಿವವು ನಂಗಡಲ್ಲಿ ಕಮ್ಮಿ. ಲೋಕತ್ ನಂಗ ಅರಿಂಜಿತ್ ಅನುಭವಿಚಿಡುವಕ್ ಪರ್ತ್ ಉಂಡ್ ನಂಗಕ್ ಆಯುಷ್ಯ ಅಚ್ಚಕ್ ಇಪ್ಪ್‌ಲೆ. ಅನ್ನನ್ನಿಪ್ಪಕ ಸೋಮಾರಿ ತನ ಆಗ, ಕೈಲುಳ್ಳ ಬಂಡವಾಳತ್‌ನ 'ಬಡ್ಜೆಟ್' ಮಾಡಿಯಂಡೇ ದುಡ್ಡ್

ಪಾಳಾಕತನ್ನಕೆ ಎಚ್ಚರ ಎಡ್‌ತವೆನ್ನಕೆ ನಂಗಡ ಬಾಳ್‌ಲ್ ಸಮಯ ಎಣ್ಣುವ ಬಡ್ಜೆಟ್‌ನ ಸೆರಿಯಾಯಿತ್ ಉಪಯೋಗ ಮಾಡಂಡು. ಇಞ್ಞೊಬ್ಬ ಸಹಾಯ ತಾತೇಂಗೂ ನೀಡ ಸಹಾಯ ನೀನೇ ಮಾಡಿಯಂಡ್ ಮಿಂಞಕ್ ಪೋಂಡು.

## ಚೇತನ

ಸೂರ್ಯಂಡ ಪ್ರಕಾಶತ್ ಈ ಜಗ, ಜಗತ್ತುಳ್ಳ ಅಲಂಕಾರ, ರಂಗ್, ತರಾವರಿ ರೂಪ ನಂಗಕ್ ಕಾಂಬ. ಸೂರ್ಯಂಡ ಬೊಪ್ಪು ಇಲ್ಲೇಂಗಿ, ಕಣ್ಣ್ ಇಂಜಿತೂ ಫಲ ಇಲ್ಲೆ. ಸೂರ್ಯಂಡ ಕಿರಣ, ಗಾಳಿರ ಬೀಜಲ್, ನೀರ್ ಪೊಳೆರ ಒಕ್ಕಲ್ ಇದೆಲ್ಲಾ ಒರ್ ಶಕ್ತಿನ್ನುಂಡ್ ಆಪಂತದೆ. ಅದ್ ಅಲ್ಲಾಂದ್ ಎಣ್ಣುವವೂ ಇಲ್ಲತ್ತಿಲ್ಲೆ. ಭೂಮಿ, ಸೂರ್ಯ, ಚಂದ್ರ, ನಕ್ಷತ್ರ ಎಲ್ಲಾ ಇಪ್ಪದ್ ಕಾಂಬಕ ಈಂಗಲ್ಲಾ ಒರ್ ಚಿನ್ಮಯ ಶಕ್ತಿ ಎಣ್ಣುವದ್ ಇಂಜಿತೇ ಇರಂಡು. ಮನುಷ್ಯಂಡ ಕಣ್ಣಕ್ ದೇವಳ ಕಾಂಬಲೆ. ಕಾಣತಾಂಗ್ ದೇವ ಇಲ್ಲೇಂದ್ ಎಣ್ಣುವಕಾಪ್‌ಲೆ. ನಂಗಡ ಕಲ್ಪನೆನನೆಕೆ ದೇವ ಇಲ್ಲೆ. ನಂಗಡ ಚೆರಿಯ ಶಕ್ತಿರ ಬುದ್ಧಿಕ್ ದೇವಡ ಅನಂತ ಶಕ್ತಿನ ಅರಿವಕಾಪ್‌ಲೆ. ನಂಗಕ್ ನಂಗಡ ಬುದ್ದಿ, ಅಡಂಗ್‌ನನ್ನೆನೆ ಬೀಜುವಗಾಳಿ, ಬೀಂದಿತ್ ಕಾಂಬ ಪೂವ್, ಮರಗಿಡತ್ ಕಾಂಬ ಚಿಗ್‌ರ್ ಕಾಲಕ್ ಸರಿಯಾಯಿತ್ ಬೂವ ಮಳೆ ಇದೆಲ್ಲಾ ಕಾಂಬಕ ಈಂಡ ಬಯ್ಯಲ್ ಕಣ್ಣ್‌ಕ್ ಕಾಣತ ಒರ್ ಚೇತನ ಶಕ್ತಿ ಉಂಡ್‌ಂದ್ ಗೊತ್ತಾಪ.

## ನಂಗಡ ಪ್ರಯತ್ನ

ಪೋಡಿಯಾಪಂತ ಭಯಂಕರ ಕಾಡ್‌ಲ್ ಪೊನ್ನ್ ಉಂಡ್‌ಂದ್ ಗೊತ್ತಾನದು, ಮನುಷ್ಯ ಏದ್ ಪೋಡಿನೋ ಕೂಟಾಕತೆ ಕಾಡ್‌ಕ್ ನುಗ್ಗುವ. ಪೊನ್ನ್, ಮುತ್ತ್, ರತ್ನ ಎಣ್ಣುವಕ ತಾಂಡ ಪ್ರಾಣತ್‌ನೋ ಕೂಟಾಕುಲೆ! ಸಮುದ್ರತ್‌ರ ಆಳಕ್ ಮುಙ್ಙುವಕೂ ಬೊತ್ತುಲೆ. ತಾಂಡ ಪ್ರೇಮ,

ಕಾಮಕ್ಕಾಯಿತ್ ಕೂಳ್, ನೀರ್, ವರಕ್ ಇಲ್ಲತೆ ಪೇಚಾಡುವ. ಆಚೇಂಗಿ ಇಂತ ಕಷ್ಟತ್‌ರ ತಪಸ್ಸ್‌ನ ನಲ್ಲಾಮೆಕ್ ಉಪಯೋಗ ಮಾಡುವವು ಕಮ್ಮಿ. ನಲ್ಲಾಮೆ ಎಣ್ಣಕ ನಂಗಡ ನಡತೆ, ನೀತಿನ ತಿದ್ದಿಯವದ್. ಎಚ್ಚಕ್ ಪ್ರಯತ್ನಪಡುವಾ? ಇದ್ ಎನ್ನನೆ ಎಣ್ಣಕ ಕಾವೇರಿ ಪೊಳೆ ಪಕ್ಕತ್ತೇ ಒಕ್ಕಿಯಂಡುಂಡೇಂಗ್ಯೂ ಕುಡಿಪಕ್ ಕೊಳಕ್ ನೀರ್ ತೇಡುವನ್ನೆಕ್ಕಾಪ. ನಂಗಡ ಜೀವನ ತಿಳಿಗೇಡಿ ಜೀವನ ಆಪಕ್ಕಾಗ. ಜೀವನತ್ ಬೆಲೆ ಕೆಟ್ಟುವಾಂಗ್ ಬೆಲೆ ಕೆಟ್ಟುಲೆ. ಎಂತಾಂಗೆಲ್ಲೋ ಪ್ರಯತ್ನ ಮಾಡುವ. ಚಾಯೋಡೆ ಅರಿವಂಜಿ, ಅರ್‌ಂಜಾಂಗ್ ನಂಗ ನಂಗಡ ಪ್ರಯತ್ನ ಮಾಡಂಡು.

## ಒಳ್ ಮನಸ್ಸ್

ಪ್ರೀತಿ, ಪ್ರೇಮ, ಧರ್ಮ ನೀತಿರ ಕಲ್ಪನೆಯೂ ಅವಂಡವಂಡ ಅಂತಸ್ತ್‌ರ ಮೇಲೆ ಪೋಪ. ಕೆಲವು ಜನ ತಿಂಬದ್, ಉಂಬದೇ ನಂಗಡ ಪರಮ ಧರ್ಮ ಎಣ್ಣುವ. ಸುಖತ್‌ರ ಕಲ್ಪನೆಯೂ ಅನ್ನನೆ. ಬೀಡಿ, ಸಿಗರೇಟ್, ಡ್ರಗ್ಸ್ ಇಲ್ಲತೆ ಸುಖ ಇಲ್ಲೇಂದೂ ಎಣ್ಣುವವು ಉಂಡ್.

ಅಪೀಮು, ಗಾಂಜ ಇಲ್ಲತೆ ಸುಖ ಇಲ್ಲೆ ಎಣ್ಣುವ . ಕೆಲವು ಜನಕ್ ಕಳ್ಳ್ ಕುಡಿಯೇ ಸುಖ ತಪ್ಪಾಂದ್ ಎಣ್ಣುವ ಗೇನ. ಇನ್ನನೆ ಸುಖ ಎಣ್ಣುವದ್ ವ್ಯಕ್ತಿಂಜಿ ವ್ಯಕ್ತಿಕ್ ಅಂವಡ ಅಂತಸ್ತ್‌ರ ವ್ಯತ್ಯಾಸ. ಯೌವನ ಇಪ್ಪಕ ಪೊಣ್ಣೇ ಸುಂದರಿಯಾಯಿತ್ ಕಾಂಬ. ಅಂವಡ ಸಹವಾಸವೇ ಸುಖಾಂದ್ ಕಾಂಬ. ಮುದಿತನಲ್ ಆ ಪೊಣ್ಣೇ ಕಷ್ಟಕ್ ಕಾರಣ ಎಣ್ಣುವ ಗೇನ ಕೂಡ ಬಕ್ಕು. ಸುಖ ಎಣ್ಣುವದ್ ತಾಂಡ ತಡಿರೊಳ್‌ಲ್‌ಲೇ ಉಳ್ಳದ್ ಎಣ್ಣುವಾನ ನಂಗ ಅರಿಯತೇ ಈ ವ್ಯತ್ಯಾಸಕ್ ಕಾರಣ. ಸುಖ ಪೊರ್‌ಮೆರ ವಸ್ತುನ, ನಾಶ ಆಪ ವಿಷಯಕ್ ಆಧಾರ ಅಲ್ಲ. ಸುಖ ಅದೋರ್ ಪವಿತ್ರ ವಾನ ಮನಸ್ಸರೊಳ್‌ಲ್,

ಮನಸ್ಸ್‌ನ ಹೊಂದಿಯಂಡಿಪ್ಪ ಒರ್ ಒಳ ಮನಸ್ಸ್.

## ಅನುಭವವೇ ಸತ್ಯ

ನಾನೊಬ್ಬ ಬಲ್ಯ ಜ್ಞಾನಿ ಎಣ್ಣುವ ಅಹಂಕಾರ, ಅಹಂಭಾವ ಅಜ್ಞಾನ್‌ತ್‌ರ ಲಕ್ಷಣ. ನಂಗ ಜಾಸ್ತಿ ಜಾಸ್ತಿ ಪಡಿಚಚ್ಚಕೂ ನಂಗಡ ಅಜ್ಞಾನತ್‌ರ ಆಳ ಗೊತ್ತಾಪ. ಪೂರ್ತಿ ಜ್ಞಾನವಂತ ದಾರೂ ಇಲ್ಲೆ. ಅನ್ನನ್ನಿಪ್ಪಕ ತಾನ್ ಎಣ್ಣದೇ ಪರಮ ಸತ್ಯ ಎಣ್ಣಿಯಂಡ್ ಹಠ ಪುಡಿಪದೂ ಯೋಗ್ಯತೆ ಅಲ್ಲ. ಲೋಕತ್ ಪ್ರತೀ ಒಂದಾಂಗೂ ಅವಂಡವಂಡ ಮನೋಭಾವ, ದೃಷ್ಟಿ, ವಿಚಾರ ಶಕ್ತಿರ ಮೇಲೆ ಬೋರೆ ಅರ್ಥ ಕ್‌ಟ್ಟುವ ಸಾಧ್ಯತೆ ಉಂಡ್. ಸತ್ಯ, ಒಂದಾಂಗ್ ಮಾತ್ರ ದಂಡ್ ಅರ್ಥ ಇಲ್ಲೆ. ಏದ್ ವಿಚಾರಕೂ ದಂಡರ್ಥ ಇಪ್ಪ. ಚರ್ಚೆಕೂ ಆಸ್ಪದ ಇಪ್ಪ. ಸತ್ಯಕ್ ಚರ್ಚೆ ಇಲ್ಲೆ. ನಂಗಡ ಕಲ್ಪನೆ ಶಕ್ತಿಯೂ ಕೂಡ ನಂಗಡ ಅಂತಸ್ತ್ ಉಳ್ಳನ್ನಕೆ. ತಾಂಡಮನೆ, ತಾಂಡ ಕುಟುಂಬಕ್ಕಾಯಿತ್ ನೈಪದ್, ಚೆನ್ನ ವಿಶಾಲ ದೃಷ್ಟಿರ ದೇಶ ಭಕ್ತಂಗ್ ಸೆರಿ ಕಾಂಬಕ್ಕಿಲ್ಲೆ. ದೇಶ ಭಕ್ತಂಡ ಸ್ವದೇಶ ಭಕ್ತಿ ಅಂತರಾಷ್ಟ್ರೀಯವಾದಿಕ್ ಯೋಗ್ಯ ಅಲ್ಲತಿಕ್ಕು. ನಂಗಡ ಕಣ್ಣ್, ಕೆಮಿ, ಅವಯವತ್‌ರ ಅನುಭವ, ಜ್ಞಾನ ಒರ್ ಮಿತಿರೊಳ್‌ಲ್ ಮಾತ್ರ ಕೆಲಸ ಮಾಡುವ. ಆನಗುಂಡ್ ನಂಗಕ್ ನಂಗಡ ಅನುಭವವೇ ಪೂರ್ಣ ಸತ್ಯ.

## ಭೋದನೆ ಸಾಧನೆ ಆಂಡು

ಕುಂದ್‌ರಚ್ಚಕ್ ತಕ್ಕ್‌ಕ್ಕಿಂಜಿ ಕಡುರಚ್ಚಕ್ ಪಣಿನಲ್ಲದ್-ಎಣ್ಣುವ ತಕ್ಕ್‌ಉಂಡ್. ಆನಗುಂಡ್ ಮಾತ್‌ಮಲ್ಲನಾಪಾಂಗಿಂಜಿ ಚೆನ್ನಂಗಾಚೇಂಗ್ಯೂ ಕೆಲಸತ್‌ರ ದಾಸನಾಪದ್ ನಲ್ಲದ್. ನಾನ್ ನಲ್ಲವನಾಪೀಂದ್ ಮನಸ್ಸ್‌ಲ್ ಎಣ್ಣಿಯಂಡಕ ಪ್ರಯೋಜನ ಇಲ್ಲೆ. ಆ ಕ್ಷಣತ್ ನಲ್ಲದ್ ಮಾಡುವ ನಿಷ್ಠೆ ಬೋಂಡು. ಲೋಕತ್ ಪ್ರತಿಯೋರ್ ಧರ್ಮ, ಪ್ರತೀ ಪುಸ್ತಕ, ಸುಧಾರಕಂಗ,

ಭೋದಕಂಗ ಆದಿಯಾಯಿತ್ ಎಲ್ಲರೂ ಪೊಟ್ಟ್ ಪರೆಯೆತಿ, ಕೆಟ್ಟಕೆಲಸ ಮಾಡತಿ, ಮೋಸ ಮಾಡತಿ, ಕಪಟಿಯಳಾತಿ ಎಣ್ಣೆಯಿಂಡ್ ನಂಗ ಪುಟ್ಟ್‌ನಲ್ಲಿಂಜೇ ಇಂತಾ ನಲ್ಲತಕ್ಕ್ ಎಣ್ಣುವ. ನಂಗಳೂ ಅದ್‌ನೇ ಎಣ್ಣುವ. ಉಪಾದ್ರಿಯ ಮಕ್ಕಕ್ ಅದ್‌ನೇ ಎಣ್ಣುವ. ಅವು ...... ಅದ್‌ನೇ ಎಣ್ಣುವ. ಆಚೇಂಗಿ ಇದ್ ಎಚ್ಚಕ್ ನಲ್ಲದಾಯಿತ್? ದಿನ ದಿನ ಕಳ್ಳತನ, ಕೊಲ್ಲ್ ಕೊಲೆ, ಪೊಟ್ಟ್‌ಮಾರಿತನ ಇನ್ನತದೇ ಜಾಸ್ತಿಯಾಯಂಡ್ ಉಂಡ್. ಆನಗುಂಡ್ ಬೊರೀ ಭೋಧನೆ ಪಣಿಕ್ ಬಪ್ಪ್‌ಲೆ. ಸಾಧನೆಕ್ಕಿಳಿಂಜ ಭೋಧನೆ ಮಾತ್ರ ಸಾರ್ಥಕ.

## ಹೃದಯ ಬೋಂಡು

ನಲ್ಲ ಚುರ್‌ಕ್ ಬುದ್ಧಿಶಕ್ತಿ ನಲ್ಲದೆ, ಮೆದ್‌ಳ್‌ರ ಶಕ್ತಿನ ಹೊಗಳಂಡು, ಆಚೇಂಗಿ ಹೃದಯ ಇಲ್ಲತ ಮೆದ್‌ಳ್ ಶಕ್ತಿ ಪ್ರಯೋಜನಕ್ ಬಪ್ಪದಲ್ಲ. ನಂಗ ಎಚ್ಚೆಕೋ ಬುದ್ಧಿಶಾಲಿಯಳ ಚುರ್‌ಕ್‌ಕಾರಳ ಕಾಂಬ. ನಲ್ಲಚಾಯೋಡೆ ರಸತ್ ಕಾವ್ಯ ರೂಪತ್ ತಕ್ಕ್‌ಪರೆವಯಿನ ಕಾಂಬ. ಎಂತಾ ಕಷ್ಟ ಸಮಸ್ಯೆನ ಸುಲಭತ್ ತ್‌ಪಯಿನ ಕಾಂಬ. ನಂಗಕ್ ಗೊತ್ತಿಲ್ಲತಾನ ಗೊತ್ತ್ ಮಾಡುವ ಮೇಧಾವಿಯಳ ಕಾಂಬ. ನಲ್ಲಮಟ್ಟತ್‌ರ ಭಾಷಣಕಾರ, ವಿಮರ್ಶೆಕಾರಳೋ ಕಾಂಬ. ಅವು ಎನ್ನನೇ ತಕ್ಕ್ ಪರಂದಕೋ ಆಂಡ ಪ್ರಭಾವ ನಂಗಕ್ಕಾಪ್‌ಲೆ. ಇಂಞೂ ಚೆನ್ನಂಗಾಳ್ ಕೀತ್ ಮುರ್‌ಕ್‌ರ ಭಾಷೆಲ್ ತಕ್ಕ್‌ಪರೆವ. ಅಯಿಂಡ ಭಾವನೆಯೂ ಕೀತ್‌ನನ್ನೆಕೆ ಇಪ್ಪ. ಆಚೇಂಗಿ ದಾಡ ತಕ್ಕ್ ತಾಂಡ ಹೃದಯತ್, ಹೃದಯ ತಂತಿರ ಸ್ವರತ್ ಬಪ್ಪೋ ಅದೇ ನಂಗಕ್ ನಂಗಡ ಮೇಲೆ ಪ್ರಭಾವ ಕಾಟು. ಬರೀ ತೀಕ್ಷ್ಣ ಬುದ್ಧಿ, ಚುರ್‌ಕ್‌ತನ, ಪಾಂಡಿತ್ಯ ಸಹಾಯ ಆಪ್‌ಲೆ. ಹೃದಯ ಬೋಂಡು.

# ನಲ್ಲ ಕೆಲಸ ಅಕ್ಕನ್ನೇ ಮಾಡ್

ಕೈಲ್ ಎಡ್‌ತಂಡ ಕೆಲಸ ಎಚ್ಚ್ಚೇ ಕಷ್ಮತ್‌ರ ಆಚೇಂಗ್ಯೂ ಕರ್ತವ್ಯ ದಕ್ಷತೇ ಬಲ್ಯಗುಣ. ನಂಗಡಲ್ಲಿ ಪೆರ್ತ್ ಜನ ಆರಂಭಶೂರಂಗ ! ಸುರುಮಾಡುವಕ ಕುಷಿ, ಆತುರ ಇಪ್ಪದ್ ದಂಡ್ ದಿನ ಕೈಂಜದು ಇಪ್ಪಲೆ. ಅಂದೇತ ದಿನತ್‌ರ ಕೆಲಸ ಅಥವಾ ಕರ್ತವ್ಯ ಅಂದಂದೇ ಮಾಡುವಕ್ ಅಭ್ಯಾಸ ಮಾಡಿಯವಂಡು. ನಾಳೆಕ್‌ಎಂದ್ ಬೆಪ್ಪದ್ ಸೋಮಾರಿಯಡ ಲಕ್ಷಣ. ಅಚ್ಚಿಕೇ ಅಲ್ಲ, ಅದ್ ಕೇಡ್‌ಕ್ ಬಟ್ಟೆ ಆಕು. ತಡಿಕ್ ಬೋಂಡಿಯ ಆಹಾರ, ಅಗತ್ಯಕ್ ಕಂಡೆನ್ನಕೆ ಗೊತ್ತ್ ಮಾಡ್‌ನ ಸಮಯತ್ ಸೇವನೆ ಮಾಡುವದ್ ದುಂಬಾ ಅವಶ್ಯ. ಅನ್ನನೇ ಗೊತ್ತ್ ಮಾಡ್‌ನ ಪಣಿಯೂ! ನಾಳೆ ಎಣ್ಣುವ ತಕ್ಕೇ ಪಾಳ್. ನಾಳೆ ಎನ್ನಾಪಾಂದ್ ದಾರ್‌ಕ್ ಗೊತ್ತ್? ದಾರ್‌ಕೂ ಗೊತ್ತಿಲ್ಲೆ. ಮನುಷ್ಯಂಡ ಪ್ರತೀ ಮೊಟ್ಟ್‌ಲೂ ಚಾವು ಉಂಡ್. ಆನಗುಂಡ್ ಅಂದೇತ್‌ರ ದಿನವೇ ಆಖೀರಿದಿನ ಅಥವಾ ಕಡೇ ದಿನಾಂದ್ ಗೇನ ಮಾಡಿಯಂಡೆ ನಂಗಡ ಕರ್ತವ್ಯತ್‌ನೆಲ್ಲಾ ಮಾಡುವದ್ ನಲ್ಲದ್.

# ಬಡತನ ಎಂತದ್ ?

ಬಡತನ ಎಣ್ಣುವದ್ ಅವಂಡವಂಡ ಕೈಲಿಪ್ಪೋರ್ ಕುಞ್ಞಿ. ಭಿಕಾರಿರ ಮನೆಲ್ ಪುಟ್ಟ್‌ನವನೂ ಪಣಕಾರನಾಯಿತ್ ಮೆರೆವ. ಭಾರೀ ಪಣಕಾರಡ ಮನೆಲ್ ಪುಟ್ಟ್‌ನವನೂ ಭಿಕಾರಿ ಆಯಿತ್ ತಿರ್‌ಗುವ. ಇದ್‌ನ ನಂಗೆಲ್ಲಾ ಕಂಡಂಡುಂಡ್. ಪಣಕಾರ, ಗರೀಬ ದೇವತಂದ ವರ ಅಲ್ಲ. ಬಡತನತ್‌ರ ಅರ್ಥವೂ ಓರೋರಬಕ್ ಓರೋರ ತರ. ಬಡತನತ್‌ರ ಅರ್ಥವೂ ಓರೋರಬಕ್ ಓರೋರ್ ರೀತಿ. ಕಾರ್ ಉಳ್ಳವನ ನೋಟಿತ್ ಕಾರಿಲ್ಲತ ನಾನ್ ಬಡವ ಎಣ್ಣುವ. ಆಳ್ ಇಲ್ಲತಂವನ ಆಳ್ ಬೆಚ್ಚವನ ಓಟಿತ್ ನಾನ್ ಬಡವ (ಗರೀಬ) ಎಣ್ಣುವ. ಲಕ್ಷಕಾರ, ಕೋಟಿಕಾರನ ನೋಟಿತ್ ಬಡವ

ಎಣ್ಣುವ. ಬಡತನ ಓರೋರಬಡ ದೃಷ್ಟಿಕೋನ. ವಾಡಿಕೆ ಆಯಿತ್ ಕೆಲಕ್ ಕೂಳ್, ಮೇಲ್‌ಕ್ ಬಟ್ಟೆ, ಇಪ್ಪಕ್ ನೆಲೆ ಉಳ್ಳವು ಗರೀಬಳಲ್ಲ. ಹೃದಯ ಇಲ್ಲತಂವ ಬಡವ. ಕೋಟ್ಯಾಧೀಶನಾಚೇಂಗ್ಯೂ ನೀತಿ, ನಡತೆ, ಸಂಸ್ಕಾರ ಇಲ್ಲತವನೇ ನೇರಾನ ಬಡವ.

## ಸಂಪಾದನೆ ಎಚ್ಚಕ್ ?

ಪೊನ್ನ್, ಮುತ್ತ್, ರತ್ನ, ವಜ್ರ ದುಂಬಾ ಬೆಲೆ ಬಾಳುವಂತದ್. ಆಚೇಂಗಿ ಅದ್‌ಂಡ ಬೆಲೆ ಇಚ್ಚಿಕೇಂದ್ ಗೊತ್ತ್ ಮಾಡಲು. ಅದ್‌ಂಗಿಂಜಿ ಬೆಲೆವುಳ್ಳ ವಸ್ತುವೂ ಉಂಡ್. ಪ್ರೀತಿ, ಪ್ರೇಮ, ನಂಬಿಕೆ, ವಿಶ್ವಾಸ ಇಂತಾಂಗ್ ಬೆಲೆ ಕೆಟ್ಟುವದ್ ಸಾಧ್ಯಇಲ್ಲೆ. ಮುತ್ತ್, ರತ್ನಕಿಂಜಿ ಜನಳ ಕ್ರಯಕ್ ಎಡ್‌ತವಲು. ಚೆನ್ನಂಗಾಳ್‌ನ ಮಾತ್ರ. ಆಚೇಂಗಿ ಪ್ರೀತಿ, ಪ್ರೇಮತ್ ಲೋಕತ್‌ನೇ ಗೆಲ್ಲಲು, ತಾಂಡ ನೆರೆಕರೆಕಾರಳ, ಊರ್‌ಕಾರಳ, ನಾಡ್‌ಕಾರಳ, ದೇಶಕಾರಳ ಅಲ್ಲತೆ ಸರ್ವಜನತ್‌ನ ಪ್ರೀತಿ ಮಾಡುವ ಪ್ರೇಮವುಳ್ಳವು ದೇವಳ ತೇಡಂಡಿಯದಿಲ್ಲೆ. ಅಗತ್ಯವೂ ಇಲ್ಲೆ. ಅಯಿಂಗಕ್ ಜಪ, ತಪ, ನೇಮ ನಿಯಮ, ನಿಷ್ಠೆರ ಅವಶ್ಯಕತೆ ಇಲ್ಲೆ. ಇದ್‌ನರಿಯತೆ ಪೊನ್ನ್, ಮಣ್ಣ್‌ರ ಬಯ್ಯೇ ಜೀವನತ್‌ನ ಪಾಳ್ ಮಾಡುವವು ಬುದ್ಧಿ ಇಂಜಕೋ ಮೂಢಂಗ. ತಾಂಡ ಜೀವಮಾನಕ್ ಸಂಪಾದನೆ ಬೋಂಡು. ಸಂಪಾದನೆಕ್ಕಾಯಿತೇ ಜೀವಮಾನ ನಲ್ಲದಲ್ಲ. ಗುಣಕ್ ಬೆಲೆ, ಪಣಕ್ ಅಲ್ಲಾಂದ್ ಗೊತ್ತಿಂಜಿತೂ ಬಟ್ಟೆ ತಪ್ಪುವವು ಜಾಸ್ತಿ. ವಿಪರೀತ ಸಂಪಾದನೆ ನೆಮ್ಮದಿಕ್ ಪಾಳ್.

## ಚೂದ್ ನೂಲ್

ತನ್ನ ತಾನರಿವಾಂಗಿಂಜಿ ಬಲ್ಯ ಗುಣ, ಶ್ರೇಷ್ಠವಾನ ವೇದಾಂತ ಬೋರೆ ಇಪ್ಪಕ್ಕಿಲ್ಲೆ. ತನ್ನ ತಾನರ್‌ಂಜವಂಗ್ ತಾಂಡ ದುರ್ಬಲತೆ, ದುರ್ಗುಣ,

ಸದ್ಗುಣತ್‌ರ ಅರಿವಾಪ. ಅಂತವು ಹೊಗಳಿಕೆ, ತೆಗಳಿಕೆಕ್ ಉಬ್ಬುವದೂ ಇಲ್ಲೆ, ಕುಗ್ಗುವದೂ ಇಲ್ಲೆ. ತನ್ನ ತಾನರಿಂಜಕ ಏದ್ ಪರಿಸ್ಥಿತಿರ ತೂಕ ತಪ್ಪುಲೆ. ಆಚೇಂಗಿ ತನ್ನ ತಾನರಿವಕ್ ಅಚ್ಚಕ್ ಸುಲಭ ಅಲ್ಲ. ನಂಗಕ್ ದುಂಬಾ ಪ್ರೀತಿ ಉಳ್ಳಯಿಂಡ ತಪ್ಪ್, ಕೆಟ್ಟಚಾಳಿನೆಲ್ಲಾ ಗೊತ್ತ್ ಮಾಡಿಯುವದ್ ಕಷ್ಟ. ಅದ್‌ಂಗ್ ಆತ್ಮ ನಿರೀಕ್ಷಣೆ ಬೋಂಡು. ಬುದ್ಧಿ, ಜ್ಞಾನ ಜೊತೆ ಆಂಡು. ಮೆದ್‌ಳ್, ಹೃದಯ ಕೂಡಂಡು. ಬುದ್ಧಿರ ತೀಕ್ಷ್ಣತೆ ಚೂದ್‌ನೆನ್ನೆಕೆ. ತಾಂಡ ಮೊನೆನಗುಂಡ್ ಎಲ್ಲಾನೋ ಕುತ್ತಿಯಂಡ್ ದಾಟಿರುವ. ಆಂಡ ಪ್ರಯೋಜನ ಆಂಡಿಕೆ ಚೂದ್‌ರ ಕೂಡೆ ಎಲ್ಲಾನೋ ಒಕ್ಕಚೆ ಕೂಟುವ ಹೃದಯ ವೈಶಾಲ್ಯತರ ನೂಲ್ ಬೋಂಡು.

## ಹೃದಯ ಪರೀಕ್ಷೆ

ಮನಸ್ಸ್, ಪೆರ್ತ್ ಚಂಚಲ. ಸ್ಥಿರತೆ ಇಪ್ಪುಲೆ. ಚಂಚಲತೆನ ದೂರಮಾಡಿತ್ ಸ್ಥಿರತೆ, ಏಕಾಗ್ರತೆರ ಸಾಧನೆ ಬೋಂಡಿಕೆ, ಪುದಿಯ ಜನತ್‌ರ ಕೂಡೆ ದುಂಬ ಕಾಲ ಇಪ್ಪಕ್ಕಾಗ. ಯೌವನಸ್ತಂಗಡಲ್ಲಿ ಹೃದಯ ತೊರಪಕ್ಕಾಗ. ಪಣಕಾರಳ ತೆಕ್ಕಿನಡ್‌ಪಕ್ಕಾಗ. 'ಬಲ್ಯವು' ಎಣ್ಣುವಯಿಂಗಡ ಸಂಗ ಬೋಂಡ. ದಾಡಕೂಡೆಯೂ ಮುಖ್ಯವಾಯಿತ್ ವಿರೋಧ ಲಿಂಗಕಾರಡ ಕೂಡೆ ವಿಪರೀತ ಸಲಿಗೆ ಆಗ. ಧೈನ್ಯತೆ ಉಳ್ಳಲ್ಲಿ ಸಮಯ ಕಳೆವು, ಗುಣ ನಡತೆ ಚಾಯಿಉಳ್ಳಲ್ಲಿ ಆರಾಂ ಪಡೆವಲು. ನೇಮ, ನಿಷ್ಠೆ, ಸರಳ ಸ್ವಭಾವ, ಸತ್ಯಕ್ ಬೆಲೆ ಉಳ್ಳಲ್ಲಿ, ಉಳ್ಳಯಿಂಗಡ ಕೂಡೆ ಸ್ನೇಹ ಬೋಂಡು. ಆಚೇಂಗಿ, ತೋರಿಕೆರ ಜನಡ ಎಡೆಂಜಿ ದೂರ ಇಪ್ಪದ್ ನಲ್ಲದೆ. ಮನುಷ್ಯನ ಪೊರಮೆಕಾಂಬಕ ಟೀಕುಟಾಕು ನೋಟಿತ್ ಮನಸ್ಸ್‌ಕ್ ಚಂಚಲತೆಲ್ ಮಂಡೆ ಪಾಳ್ ಮಾಡಿಯವಕ್ಕಾಗ. ಬಲ್ಯ ಆಕಾರವುಳ್ಳವು ಎಲ್ಲಾ ಖನ ಪಟ್ಟವು ಆಪುಲೆ. ಪ್ರತೀ ಒಂದಾಂಡ ಬೆಲೆನ

ಕಣ್ಣ್‌ರ, ಮೆದುಳ್‌ರ ಮೂಲಕ ತಟ್ಟತೆ ಹೃದಯತ್‌ರ ಒರೆಕಲ್ಲ್‌ಲ್ ತೇಚಿ ನೋಟಿತ್ ಬೆಲೆ ಕೊಡ್‌ಕಂಡು, ಕಣ್ಣ್‌ರ ನೋಟಕ್ಕಿಂಜಿ ಹೃದಯ ನೋಟವನೇ ಶಾಶ್ವತ.

## ಆತ್ಮವೇ ಗುರು

ಮನುಷ್ಯ, ನಾಕೆಲ್ಲಾ ಗೊತ್ತುಂಡ್, ನಾನೊಬ್ಬ ಸ್ವತಂತ್ರ ಜೀವಿ-ಎಣ್ಣಿಯವ. ಅಂತಾನ್ನುಂಡ್ ತೊಂದರೆ ಉಂಡ್. ನಲ್ಲವು ಗುಣವಂತಂದ್ ಕಂಡವಂಡ ಆಶ್ರಯ ಪಡೆವದ್ ನಲ್ಲದ್. ತನ್ನ ತಾನೇ ಪುಡ್‌ತತ್ ಬೆಚ್ಚವದ್ ಕಷ್ಟ ಕೆಲಸ, ನಂಗಕ್ ನಲ್ಲ ಬಟ್ಟೆ ಕಾಟಿತಪ್ಪಯಿಂಡ ಆಶ್ರಯ ಸುಖಕರ, ಇಂಞೊಬ್ಬಂಡ ಆಶ್ರಯ ಬಲಾತ್ಕಾರ ಆಪಕ್ಕಾಗ. ಬಲತ್ಕಾರ ಉಳ್ಳಲ್ಲಿ ಪ್ರೀತಿ, ವಿಶ್ವಾಸ ಇಪ್ಪುಲೆ. ಪ್ರೀತಿರ ಆಶ್ರಯ ಸ್ವರ್ಗ. ಎಲ್ಲಿ ತೃಪ್ತಿ ಇಲ್ಲೆಯೋ ಅಲ್ಲಿ ಆತ್ಮ ಬೀವುಲೆ. ಮನಸ್ಸ್ ಬೀವಂಡಿಕೆ ಪ್ರೀತಿ ಪ್ರೇಮ ಇರಂಡು. ಅಪ್ಪ-ಮೋಂವ, ವಡಿಯ-ಪೊಣ್ಣ್, ಸ್ನೇಹಿತಂಗಡಲ್ಲಿ ಪ್ರೇಮ ಎಣ್ಣುವ ಕೆಟ್ಟ್ ಇಪ್ಪದ್ ನಲ್ಲದ್, ಹಿತವಾನದ್‌ಂದ್ ಕಂಡಲ್ಲಿ ಅಂತಯಿಂಡ ಆಶ್ರಯತ್ ನಲ್ಲೋಣೆ ದುಡಿಮೆ ಮಾಡಲು. ಅಂತಾ ದುಡಿಮೆಲ್ ಶಾಂತಿ, ತೃಪ್ತಿ, ಸುಖ ಕ್‌ಟ್ಟುವ. ಇವು ನಂಗಕ್ ಗುರುನೆನ್ನಕೆ. ಅದೇ ಹೃದಯ ಆತ್ಮ. ಹೃದಯ ವಾಸಿ. ಆತ್ಮನಿವಾಸಿಯೇ ನಂಗಕ್ ಗುರು.

## ಕಾರ್ಯಕ್ ಮೂಲ ಪ್ರೇಮ

ಬಲಾತ್ಕಾರತ್‌ರ ಭಾರ ಇಲ್ಲತೆ, ಕಿರುಕುಳ ಇಲ್ಲತೆ ಪ್ರೀತಿಲ್, ಪ್ರೇಮತ್ ಮಾಡ್‌ನ ಏದ್ ಕೆಲಸವೂ ಪರಿಪೂರ್ಣ ಆಪ. ಲೋಕತಾನ ಬಲ್ಯ ಬಲ್ಯ ಕಾರ್ಯಕ್ ಪ್ರೀತಿ ಪ್ರೇಮವೇ ಆಧಾರ ಶಕ್ತಿ. ಇದ್‌ನ ನಂಗ ಕಾಂಗಲು.

ತಾಂಡ ಪ್ರೀತಿರ ಪೊಣ್ಣ್‌ರ ಪ್ರೇಮ ಆನಂದಕ್ಕಾಯಿತ್ ಎಚ್ಚಕಾಳ್ ಎಚ್ಚ್‌ಕ್ ಬಲ್ಯ, ಅದ್ಭುತ ಕೆಲಸ ಮಾಡಿತ್ತಿಲ್ಲೆ. ತಾಂಡ ಪ್ರೀತಿನ ಕಾಟುವಕ್ಕಾಯಿತ್ ಎಚ್ಚಕ್ ಗ್ರಂಥ ಎಳ್‌ದಿತ್ತಿಲ್ಲೆ? ಎಚ್ಚಕ್ ಗೋರಿ ಕೆಟ್ಟಿತ್ತಿಲ್ಲೆ? ಆಣ್ ಸಾಧನೆ ಮಾಡ್‌ನ ಪ್ರತೀ ಓರ್ ಬಲ್ಯಕೆಲಸತ್‌ರ ಬಯ್ಯತ್ ಪೊಣ್ಣ್‌ರ ಪ್ರೀತಿ, ಪ್ರೇಮ ಪ್ರೇರಕ ಶಕ್ತೀಂದ್ ಎಣ್ಣುವದ್ ಹೊಗಳಿಕೆ ಆಚೇಂಗ್ಯೂ ತಪ್ಪಲ್ಲ. ಪೊಣ್ಣ್‌ರ ಪ್ರೇಮಕ್ಕಿಂಜಿ ಹೃದಯ ವಿಶಾಲ ಪ್ರೇಮತ್ ಆದರ್ಶ ಕೆಲಸ ಮಾಡ್‌ನ ಜನಳೂ ಉಂಡ್. ಗಾಂಧಿ, ವಿವೇಕಾನಂದ ಇವು ಎಲ್ಲಾ ಓರ್ ಉದಾಹರಣೆ. ಅಂಥವು ವಿಭೂತಿ ಪುರುಷಂಗ ಎಣ್ಣಲು. ಉದಾಹರಣೆಕ್ ಶ್ರೀ ಸತ್ಯಸಾಯಿಬಾಬ. ಆಚೇಂಗಿ ಪ್ರತಿಯೋರ್ ಮಹಾಕಾರ್ಯಕ್ ಪ್ರೇಮವೇ ಮೂಲ. ಇನ್ನತ ಅನಂತ ಪ್ರೇಮತ್ ಮಾಡ್‌ನ ಕಾರ್ಯ ಎಲ್ಲಾ ಪರಮ ಪವಿತ್ರ.

## ವೃಥಾ ಕಾಲಕ್ಷೇಪ ಆಗ

ಪೂಜೆ, ಪ್ರಾರ್ಥನೆ, ಆರಾಧನೆ ಎಣ್ಣುವದೆಲ್ಲಾ ಗೊಡ್ಡ್ ಪುರಾಣ ಎಣ್ಣಿಯಂಡ್ ತೆಳಿಪವೂ ಉಂಡ್. ಕಾರಣ ಅದ್‌ಂಡ ಅರ್ಥ ಗೊತ್ತಾಕತದೇ, ಈ ಹಾಸ್ಯಕ್ ಮೂಲ. ಅಂತರ್ ನಿರೀಕ್ಷೆ (ಹೃದಯತ್‌ರೊಳ್‌ಲ್ ಉಳ್ಳವು) ಮಾಡತವು ನಲ್ಲ ಬಟ್ಟೆಲಿಪ್ಪಕ್ ಸಾಧ್ಯ ಇಲ್ಲೆ. ಈ ಅಂತರ್ ನಿರೀಕ್ಷೆನ ಪ್ರಾರ್ಥನೆ ಎಣ್ಣಲು. ಪೂಜೆ, ಆರಾಧನೆ ಕೂಡ ಈ ಅಂತರ್ ಪ್ರಾವಿತ್ರ್ಯಕ್ ಸಹಾಯ ಮಾಡುವ. ಪೊಲಾಕ ಎದ್ದೆನ್ನೆಕೆ ತಾಂಡ ಅಂದೇತ ದಿನತ್‌ರ ಕರ್ತವ್ಯ ಗೇನಮಾಡಂಡು ಅದ್‌ನೆಲ್ಲಾ ಮಾಡಿ ತ್‌ಕಂಡು. ಬೈಟ್, ತಾನ್ ಮಾಡ್‌ನ ಕರ್ತವ್ಯತ್‌ನ ವಿಮರ್ಶೆ ಮಾಡಂಡು. ಇಚ್ಚಕ್ ಮಾಡುವಕ್ ಜಪಮಾಲೆ ಪುಡಿಕಂಡ; ಶಂಖ ಉರ್‌ಪಂಡ. ಇದ್ ಆತ್ಮತ್‌ರ ವಿಷಯ. ಅದೇ ಪ್ರಾರ್ಥನೆ. ಇದ್‌ನೆಲ್ಲಾ ಗೇನ ಮಾಡುವಕ್ ಸಮಯ ಎಲ್ಲಿ ? ಹರಟೆಕ್, ಗುರಿ ಇಲ್ಲತ

ತಿರ್‌ಗಾಟಕ್ ಎಚ್ಚಕ್ ಸಮಯ ಇಲ್ಲೆ ? ಬರೀ ಕಾಲಹರಣ ಮನುಷ್ಯನ ಪರ್ತ್‌ ಕಮ್ಮಿತರಕ್ ಉಳ್‌ಪಿರುವ.

## ಆತ್ಮ ಸುಖ

ಬೊಪ್ಪುರ ಬಯ್ಯತೇ ಇರ್‌ಟ್. ಸುಖತ್‌ರ ಬಯ್ಯತೇ ದುಃಖ. ಇನ್ನನೆ ಒಂದಾಂಡ ಬಯ್ಯೀ ಒಂದಿಪ್ಪ. ಪೂರ್ಣ ದುಃಖ ಇಲ್ಲತನ್ನೆಕೆ ಬಯೆಂದ್‌ವದ್ ಪುಚ್ಚಿತನ. ಕುಶೀಲ್ ಮನೆಂಜಿ ಪೋನವು ದುಃಖತ್ ಬಯ್ಯಕ್ ಬಕ್ಕು. ಅನ್ನನೆ ದುಃಖತ್ ಪೋನವು ಸುಧಾರಣೆಲ್ ಬಕ್ಕು. ಲೋಕ ಪ್ರತೀ ಕ್ಷಣ ಕ್ಷಣಕ್ ಬದ್‌ಲಾಯಿಂಡಿಪ್ಪ. ಅಂತ ಲೋಕತ್ ಸುಖ ಬಯೆಂದವದ್ ಮೂಢತನ. ಸುಖ ಶಾಶ್ವತ ಇಲ್ಲತಾಚೇಂಗಿ ದುಃಖವೂ ಶಾಶ್ವತ ಇಪ್ಪ್‌ಲೆ. ನಂಗಕ್ ಶಾಶ್ವತ ಆಯಿತ್ ಕಾಂಬ ಭೂಮಿಯೇ ನಂಗಕ್ ಶಾಶ್ವತ ಅಲ್ಲ. ಮರ, ಗಿಡ, ಕಲ್ಲ್, ಮಣ್ಣ್ ಎಲ್ಲಾಂಗೂ ನಾಶ ಎಣ್ಣುವದ್ ಉಂಡ್. ಇನ್ನನ್ನಿಪ್ಪಕ ನಾಶ ಆಪ ವಸ್ತುಲ್ ಸುಖ ಸಾಧ್ಯಇಲ್ಲೆ. ಆಚೇಂಗಿ ನಾಶವಿಲ್ಲತೋರ್ ವಸ್ತು ಉಂಡ್. ಅದ್ ಪೊರಮೆ ಇಲ್ಲೆ. ತಾಂಡೊಳ್‌ಲೇ ಉಂಡ್. ಅದ್ ಒಳ್‌ಲ್ ಉಂಡೇಂಗ್ಯೂ ಇಡೀ ಲೋಕತ್‌ನ್ನೆಲ್ಲಾ ಕೈಲಾಕಿಯೆಂಡಿತ್. ಅದೇ ಆತ್ಮ. ಅದ್‌ನರಿವದೇ ಆತ್ಮ ಸುಖ.

## ದುಃಖತ್ ಧೈರ್ಯ ಇರಂಡು

ನಂಗ ಬಯಂದ ಆಸೆ ಕೈಕಂಡ್‌ಲೇಂದ್ ಕಣ್ಣೀರ್‌ಟ್ಟಕ ಎಂತ ಪ್ರಯೋಜನ? ಲೋಕ ಅಥವಾ ಜಗತ್ ಮಂಡೆ ಕುಂಬ್ಬ್‌ಟಂಡ್ ಕಣ್ಣೀರ್‌ಡುವ ಸ್ಥಳ ಅಲ್ಲ. ಪ್ರತೀಯೊಬ್ಬಂಗೂ ತಾನ್ ಮಾಡುವಕುಳ್ಳ ಕರ್ತವ್ಯ ಉಂಡ್. ತಾನ್‌ಗೇನ ಮಾಡ್‌ನೆನ್ನೆಕೆ, ಆಸೆ ಪಟ್ಟನ್ನೆಕೆ ಬದುಕುವಕ್ ದಾರ್‌ಕೂ ಸಾಧ್ಯ ಇಲ್ಲೆ. ಕಾರಣ ನಂಗಡ ಗೇನ, ಯೋಚನೆ ಆಸೆ ಎಲ್ಲಾ ಲೋಕತ್ ಶಾಶ್ವತ

ಅಲ್ಲತಾಂಡ ಮೇಲೆ ಉಂಡ್. ಆನಗುಂಡ್ ಲೋಕತ್‌ರ ಬದಲಾವಣೆನ್ನುಂಡ್ ನಂಗಡ ಆಸೆ ಆಕಾಂಕ್ಷೆ ಎಲ್ಲಾ ಕೊಡಮರಿವ. ಒರ್ ಅವ್ವ ತಾಂಡ ಚತ್ತ ಕುಞ್ಞಿ ಬದ್‌ಕ್‌ಚಿಡ್‌ಎಂದ್ ಬುದ್ಧದೇವನ ಕೇಟಂಡ್ ಮೊರಟತ್. ಬುದ್ಧ ಆಕೊಂದ್ ಎಣ್ಣಿತ್ ಅವಕ್ಕೆಣ್ಣಿಚಿ ನೀಡ ಕುಞ್ಞಿ ಬದುಕಂಡೂಂದ್ ಕಂಡಕ, ಚಾವು ಆಕತ ಮನೆಂಜಿ ಚೆನ್ನ ಕಡು ಎಡ್‌ತಂಡ್ ಬಾಂದೆಣ್ಣಿಚಿ. ಸಾಧ್ಯ ಉಂಡಾ ? ಚಾವು ಆಗತ ಮನೆ ಅಥವಾ ಸಂಸಾರ, ದುಃಖ ಪಡತ ಜೀವನ ಎಲ್ಲಿಯೂ ಇಲ್ಲೆ. ಇದ್‌ನೇ ಬುದ್ಧದೇವ ಅವಕ್ ಗೊತ್ತ್ ಮಾಡಿ ಕೊಡ್‌ತತ್. ದುಃಖ ತಪ್ಪುಲೆ. ಆಚೇಂಗಿ ದುಃಖತ್ ಧೈರ್ಯ ಎಡ್‌ತವಂಡು.

## ಚಾವಕ್ ತಯಾರಿರಂಡು

ನಂಗಡ ಶರೀರ ಎಚ್ಚಕೇ ಶಕ್ತಿಶಾಲಿಯಾಯಿತಿರಡ್, ಎಚ್ಚಕೇ ಆರೋಗ್ಯತಿರಡ್ ಅದ್‌ಂಗ್ ಮುದಿ ಪುಡಿಪ. ಇಂದಲ್ಲ ನಾಳೆ ಚಾವು ತಪ್ಪ್‌ನದಲ್ಲ. ಇಂದ್ ನಂಗ ತೆಳಿಚಂಡಿರಲು. ಓಡಿಕಳಿಚಂಡಿರಲು, ಪಣಿ ಕೆಜ್ಜಂಡಿರಲು. ಇಂದೋ ನಾಳೆಯೋ ಚಾವು ತಪ್ಪ್‌ನದಲ್ಲ. ಪುಟ್ಟ್‌ನವಂಗ್ ಚಾವು ಕೆಟ್ಟಿ ತಂದ ಕೂಪದಿ. ನಂಗ ಎಚ್ಚಕೇ ಪ್ರಯತ್ನ ಪಟ್ಟಕೋ ಈ ಶರೀರತ್‌ನ ಉಳಿಚಿಡುವಕ್ ಸಾಧ್ಯ ಇಲ್ಲೆ. ಶರೀರ ನಾಶ ಆಚೇಂಗ್ಯೂ ಚಿರಂತನ ಆಯಿತ್ತಿಕ್ಕಲು. ಅದೇ ನಲ್ಲ ಗುಣ. ಚಾವಕ್ ಸದಾ ತಯಾರಾಯಿತ್ತಿಂಜಿತ್ ನಲ್ಲ ಗುಣಕ್ಕಾಯಿತ್ ಬದುಕುವವನೇ ಆದರ್ಶ ವ್ಯಕ್ತಿಯಾಪ. ಈ ಜೀವನತ್ ಬೋಂಡಿಯಾನದ್ ಬೋಂಡತದ್, ಟೀಕೆ-ಟಿಪ್ಪಣಿ, ಕಿತ್ತಾಟ-ಲತ್ತಾಟತ್‌ರ ವಿಷಯತ್ ಚತ್ತವ ಎನ್ನನಿರಂಡು. ಅದ್‌ನ ಪ್ರಯತ್ನ ಪಡುವಂಜಿ ಪಡಿಕಂಡು. ಇಂತಾ ವಿಚಾರತ್ ಜೀವಂತತ್‌ನ ನಲ್ಲ ಗುಣಕ್ಕಾಯಿತ್, ನಲ್ಲ ನಡತೆಕ್ಕಾಯಿತ್ ಜೀವಿಚಿಡುವವು ಚತ್ತಕೋ ಬದ್‌ಕಿತುಳ್ಳನೆಕೆ. ಶರೀರ ಇಲ್ಲೇಂಗೂ ಅಂವ ಚಿರಂಜೀವಿ.

## ಎಲ್ಲಾರೂ ಬಾವಂಡು

ನಂಗ ಬದ್‌ಕುವ ಚೆನ್ನಂಗೇ ಕಾಲಕೆತ್ತನೆ "ನೂರ್ ಕಾಲ ಬಾಳ್"ಂದ್ ಆಶೀರ್ವಾದ ಮಾಡ್‌ನಕೋ ಅಂವ ಒಳ್ಲ್ ಚಾವ. ಈ ಚೆನ್ನಕಾಲತ್‌ರ ಬದ್‌ಕ್‌ಕ್ಯಾಯಿತ್ ಎನ್ನಂಗ್ ನಂಗ ಪಗೆತನ, ಕಿಚ್ಚಿ, ಅಸೂಯೆ, ದ್ವೇಷತ್‌ನ ಬೊಳತಿಯವ ? ಉಳ್ಳ ಸಮಯತ್‌ನ ನಲ್ಲೋಣೆ ಬಳಕೆ ಮಾಡಿಯಂಡ್ ನಲ್ಲೋಣೆ ಬಾವಲು. ಎನ್ನನೆ ? ತಾಂಡ ಮನಸ್ಸ್‌ನ ಶುದ್ಧಮಾಡಿಯವಂಡು. ಪ್ರಯತ್ನ ಪಡಂಡು. ಪೊಲಾಕ ಕ್‌ಟ್ಟುವ ಸಮಯತ್‌ನ ಚಾಯೋಡೆ ಉಪಯೋಗ ಮಾಡ್‌ನಕ ಬೈಟೇತ ಸಮಯ ತೃಪ್ತಿತಪ್ಪ. ಅನ್ನನೆ ಯೌವನತ್ ನಲ್ಲಬಟ್ಟೆ (ಮಾರ್ಗ), ನಲ್ಲ ಆದರ್ಶತ್ ನಡಂದವಂಡ ವಯಸ್ಸ್‌ಕಾಲ ಆನಂದತ್ತಿಪ್ಪ. ಈ ಲೋಕ ವಿಶಾಲವುಂಡ್, ಇಲ್ಲಿ ಎಲ್ಲಾರ್‌ಕೂ ಬದುಕಿಬಾವ ಅವಕಾಶ ಉಂಡ್, ಆನಗುಂಡ್ ದ್ವೇಷ ಎನ್ನಂಗ್ ? ಸ್ವಾರ್ಥ, ಕಿಚ್ಚಿ, ಹೊಟ್ಟೆಕಿಚ್ಚಿ ಉಳ್ಳವಂಗ್ ಈ ಲೋಕ ಪೋರ. ಪ್ರೇಮ, ವಿಶ್ವಾಸ, ದಯೆ ಉಳ್ಳವಂಗ್ ಈ ಲೋಕತ್ ಎಲ್ಲಿಯೂ ಬಾವಳ ಜಾಗ ಉಂಡ್.

## ಕೆಟ್ಟಾನ ಕೆಟ್ಟಿಯುವತಿ

ನಂಗಡ ಸುತ್ತು ಮುತ್ತು ಉಳ್ಳಯಿಂಗಕ್ಕಿಂಜಿ ನಲ್ಲವು ಆಂಡೂಂದ್ ಅವು ಮಾಡ್‌ನಾನೇ ಮಾಡುವಕ್ ಕಯ್ಯುಲೆ. ಒಬ್ಬ ಮಾಡ್‌ನಾನ ನಂಗಳೂ ಮಾಡ್‌ನಕ ಅಯಿಂಡ ಕೂಟ್‌ಕ್ ನಂಗ ಒಬ್ಬೊ ಜಾಸ್ತಿ ಆಪ. ಇದ್ ಆದರ್ಶ ಮಾರ್ಗ ಅಲ್ಲ. ಒಬ್ಬೊ ಕಷ್ಟಾಂದ್ ಮಾಡತೆ ಬುಟ್ಟಾನ ಮಾಡುವಕ್ ಇಳಿಯಂಡು. ಅಂವ ಸುಖಾಂದ್ ಸುಖತ್‌ರ ಬಯ್ಯನ್ನೆ ಪೋಪೇಂಗಿ ನಂಗ ನಿರ್ಲಿಪ್ತ ಸ್ಥಿತಿಕ್ ಬರಂಡು. ಜೀವನ ಎಣ್ಣುವದ್ ಜಾರಿಯೆಂಡಿಪ್ಪ. ಆಂಡ ಬಟ್ಟೇ ಜಾರುವ ಬಟ್ಟೆ. ಇಂತಾ ಜಾರುವ ಬಟ್ಟೇಲ್ ನಂಗ ಗುರಿ ಮುಟ್ಟುವ

ಎನ್ನನೆ ? ನಲ್ಲದ್ ಎಣ್ಣುವಾನ ಮುರ್‌ಕಿ ಪುಡಿಕಂಡು; ಕೆಟ್ಟದ್ ಎಣ್ಣುವಾನ ದೂರ ಬೆಕ್ಕಂಡು. ಇಂಞ್ಞೊಬ್ಬ ಮಾಡ್‌ನೆನ್ನಕೆ ಮಾಡಂಡೂಂದಾಚೇಂಗಿ. ಅಲ್ಲಿಯತ್‌ರ ನಲ್ಲ ಗುಣತ್‌ನ ಎಡ್‌ತವಲು. ಅವಂಡಲ್ಲಿ ಉಳ್ಳ ಅಸಹ್ಯ ಆಪಂತ ಕೆಟ್ಟಗುಣತ್‌ನ ನಂಗ ಕೆಟ್ಟಿಯವಕ್ಕಾಗ.

## ಬಾಳ್‌ಕ್ ಗುರಿ ಇರಂಡು

ಲೋಕತ್‌ರ ನಿಯಮ ಬಾಳ್ ಬದಲಾಯಂಡಿಪ್ಪದ್. ಪ್ರತೀಯೊಂದು ಬದಲಾಯಂಡಿಪ್ಪ. ಇಂತಾ ಬದ್‌ಲಾಯಂಡಿಪ್ಪ ಬಾಳ್‌ಲ್ ಮನುಷ್ಯಂಗ್ ಆತ್ಮವಿಶ್ವಾಸ ಇರಂಡು. ಅದ್‌ನೆನ್ನಕೆ ನಡ್‌ಕಂಡು. ಆಚೇಂಗಿ ಒಬ್ಬನ ನಂಬಿತ್ ಅಳಪಕ್ಕಾಗ. ಇಂಞ್ಞೊಬ್ಬಂಡ ಕಾಲ್‌ಲ್ ನಿಪ್ಪಕ್ ತಯಾರಾಪಕ್ಕಾಗ. ನಂಗಡ ಕಾಲ್‌ಲ್ ನಂಗ ನಿಕ್ಕಂಡು. ಇಂದೊಬ್ಬೊ ನಂಗಡ ಸ್ನೇಹಿತನಾಕು. ನಾಳೆ ಅಂವ ಶತ್ರು ಆಕು. ಹವಾಮಾನಕ್ ಸರಿಯಾಯಿತ್ ಸಮುದ್ರತ್ ತೆರೆ ಏವ, ಅನ್ನನೇ ಪರಿಸ್ಥಿತಿ ಪ್ರಕಾರ ಮನುಷ್ಯ ಬದ್‌ಲಾಪ. ಪರಿಸ್ಥಿತಿ, ಮೋಹ ದಾರ್‌ದಾರ್‌ನೋ ಎನ್ನನ್ನೆಲ್ಲೋ ಬದ್‌ಲ್ ಮಾಡಿತ್. ಒಕ್ಕಿ ಆಟಂಡಿಕೆ ಮಧ್ಯತ್ ನೇರೆ ಉಳ್ಳ, ಗಟ್ಟಿವುಳ್ಳ ಬೋಟಿ ಬೋಂಡು, ಅಕ್ಕ ಮಾತ್ರ ಎತ್ತ್ ಅದ್‌ಂಡ ಸುತ್ತು ಸುತ್ತುವ. ಎಚ್ಚಕ್ ಸುತ್ತ್‌ನಕೋ ಬಟ್ಟೆ ತಪ್ಪುಲೆ. ಅನ್ನನೇ ಬಾಳ್‌ಕ್ ಒರ್ ಗುರಿ ಬೋಂಡು. ಆ ಗುರಿ ಉಂಡೇಂಗಿ ಬಟ್ಟೆತಪ್ಪುಲೆ. ಬಾಳೂ ಅರ್ಥ ಹೀನ ಆಪ್‌ಲೆ.

## ದುಃಖಿಕ್ ಒಬ್ಬನೇ

ಮನೆಲ್ ಉಂಬಕ್ಕುಂಡ್, ಊಟ ಉಂಡ್ ಎಣ್ಣಕ ಬೋಂಡಿಯ ಜನ ಬಪ್ಪ. ಕಾಕ್‌ನವೂ ಬಪ್ಪ. ಕಾಕತವೂ ಬಪ್ಪ. ನಂಗ ಉಪವಾಸ ಉಂಡೇಂಗಿ ಬಪ್ಪವೂ ಬಪ್ಪುಲೆ. ಆ ಬರಿಕ್ ಮೂಡ್ ಇಡುಲೆ. ಕಲ್ಲ್‌ಲ್ ಸಕ್ಕರೆ ಮಿಶ್ರ

ಆಚೇಂಗ್ಯೂ ಇರ್ಪು ಅದ್‌ನ ಮುತ್ತತೆ ಬುಡುಲೆ. ತೇನ್ ಬುದ್ಧ ಕೊಕ್ಕಲೆರ ಮೇಲೆಯೂ ವಲಂಜಿ ಪಾರಿ ಕಳಿಪ. ಇಂಞೊಬ್ಬಂಗ್ ಬೋಂಡಿಯದ್ ನಂಗಡಲ್ಲಿ ಉಂಡೇಂಗಿ, ಜನ ನಂಗಳ ಮುತ್ತುವ, ಸುತ್ತ್‌ಟ್ಟಂಡಿಪ್ಪ, ಹೊಗಳುವ, ಆಚೇಂಗಿ ಆ ಹೊಗಳಿಕೆ ಪ್ರೀತಿ ನಂಗಕ್ಕಾಯಿತಲ್ಲ. ಅಯಿಂಡ ಸ್ವಾರ್ಥತ್‌ರ ಕೊಣಿ ಕ್ಕಾಯಿತ್. ಉದಾಹರಣೆಕ್ ಮಂಗಲಕ್ ತಯಾರಾನ ಮೂಡಿ ಉಳ್ಳಮನೆ! ಜನಡ ನೀತಿಯೇ ಇನ್ನನೆ ಕಷ್ಟತ್ತಿಪ್ಪಕ ಸಹಾಯ ತಪ್ಪ್‌ಲೆ. ಸುಖತ್ತಿಪ್ಪಕ ಸಹಾಯ ಬೋಂಡುವಾಂದ್ ಕೇಪ. ಕೆಲ ಪಯಿಪವಕ್ ಕೂಳ್ ಇಡುಲೆ. ಕೆಲ ದುಂಬ್‌ನವನ ವರಾತ ಮಾಡುವ. ಅನ್ನನೇ ಸುಖತ್ತಿಪ್ಪಕ, ಜನ ಬೋಂಡಿಯಚ್ಚ್‌ಕ್ ಇಪ್ಪ. ದುಃಖತ್‌ರ ಭಾರ ಒಬ್ಬನೇ ಪೊರ್‌ಕಂಡು. ತೆಳಿಪಕ ಎಲ್ಲಾರೂ ಇಪ್ಪ. ಮೊರಡುವಕ ಒಬ್ಬನೇ ಮೊರಡಂಡು.

## ಆತ್ಮ ವಿಶ್ವಾಸ

ಆತ್ಮ ವಿಶ್ವಾಸ ಬೋಂಡು. ಅದ್‌ಂಗಿಂಜಿ ಮೀರ್‌ನ ಸಹಾಯ ದಾಡಕ್ಕೈಂಜೂ ಕ್‌ಟ್ಟ. ಬೊಳ್‌ಚಕ್ ಎಣ್ಣೆ ಇಂಜನ್ನಕೆ ಮನುಷ್ಯಂಗ್ ಆತ್ಮವಿಶ್ವಾಸ. ಆತ್ಮವಿಶ್ವಾಸ ಇಲ್ಲತಂವ ಒಂದಾನೋ ಸಾಧನೆ ಮಾಡುಲೆ. ಅಂತಯಿಂಗಕ್ ಎಚ್ಚಕೇ ನಲ್ಲ ಸುಲಭ ಅವಕಾಶ ಕ್‌ಟ್ಟ್‌ನಲ್ಲಿಯೂ ಪ್ರಯೋಜನ ಆಪ್‌ಲೆ. ಮನುಷ್ಯ ನಲ್ಲ ಬೊಳಚೆಕಾರನಾಯಿತಿಕ್ಕು, ಚಾಯಿಕಾರನಾಯಿತಿಕ್ಕು ಅಂವ ಜೀವ ಉಳ್ಳಲ್ಲಿಕೆತ್ತನೆ ಅದ್‌ನೆಲ್ಲಾ ಹೊಗಳಲು, ಒಳ್‌ಲುಳ್ಳ ಉಸ್‌ರ್‌ನಿಂದಕ ಅದ್ ಹೆಣ ಆಪ. ಜನ ಆಪ್‌ಲೆ. ಅನ್ನನೆ ಆತ್ಮವಿಶ್ವಾಸ ಒಂದಿಲ್ಲೇಂಗಿ ಮನುಷ್ಯ ಜೀವತುಂಡೇಂಗೂ ಚತ್ತನ್ನಕ್ಕೆ. ಎಂತಾ ಕುಂದ್‌ರಚ್ಚಕ್ ಬಲ್ಯ ಕಷ್ಟವೇ ಬರಡ್, ನಂಗಡ ಕೈಪುಡಿಪಂಜಿ ಬೊಪ್ಪುಕಾಟುವದೇ ಈ ಆತ್ಮವಿಶ್ವಾಸ.

## ಸ್ವಾರ್ಥ ಕೈಕಣಿ

ಚಿಟ್ಟೆ ಪುಳು ಆಡ್, ತೇನ್ ಪುಳ ಆಡ್, ಪೂವುರ ಮೇಲೆ ಅಳಪ. ಪೂವ್‌ರ ವಾಸನೆಕ್ಕಾಯಿತ್ತಲ್ಲ. ಪೂವುಲ್ ಉಳ್ಳ ಮೊದ್‌ರ ತೇನ್‌ಕ್ಕಾಯಿತ್. ತೇನ್‌ನ ಎಡ್‌ತಾಕ್ಷಣ, ಅದ್‌ಂಗ್ ಕ್‌ಟ್ಟಿಟಾಕ್ಷಣ ಆ ಪೂವುನ ಬುಟ್ಟಿತ್ ಪಾರಿರುವ, ಅನ್ನನೆ, ಮನುಷ್ಯನೂ ಕೂಡ. ಮನುಷ್ಯ ಮನುಷ್ಯಂಡ ಪಕ್ಕ ಬಪ್ಪ. ಅವಂಡ ಗುಣ, ನೀತಿ, ನಡತೆ, ಸಭ್ಯತೆಕ್ಕಾಯಿತ್ ಜನ ಬಪ್ಪವು ಕಮ್ಮಿ. ಪೆರ್ತ್ ಕಮ್ಮಿ. ಮನುಷ್ಯಂಡಲ್ಲಿ ಪಣ, ಅಧಿಕಾರ, ಚಾಯಿ ಉಂಡೇಂಗಿ ತಾಂಡ ಸ್ವಾರ್ಥ ತಟ್ಟೆನ ದುಂಬ್‌ಚಿಟ್ಟವಕ್ ದುಂಬಾ ಜನಬಪ್ಪ. ದುಂಬಿ ಪೂವುರ ಸುತ್ತು ಝೇಂಕಾರ (ಸದ್ದ್) ಮಾಡುವೆನ್ನೆಕೆ ಜನ ಸುತ್ತುನಿಂದಿತ್ ಹೊಗಳುವ, ತೊಪ್ಪಂಜಿ ನಿಪ್ಪ. ಅಯಿಂಡ ಸ್ವಾರ್ಥ ಎಕ್ಕ ಈಡೇರಿಚೋ ದೂರ ಪೋಪ. ಆನಗುಂಡ್ ಜನಡ ಮೆಚ್ಚಿಕೆಗಾರಿಕೆಕ್, ಹೊಗಳುವಾಂಗ್ ಮಂಡೆ ಕೆಡತಿಯೆವಕ್ಕಾಗ. ಹೊಗಳಿಕೆ ಯೋಗ್ಯತೆರ ಅಳತೆ ಕೋಲಲ್ಲ. ಹೊಗಳಿಕೆ ಸ್ವಾರ್ಥಕಾರಡ ಕೈಕಣಿ. ಕೋತಿಯಂಡ್ ತಿಂಬದ್.

## ಧೈರ್ಯ ಬೋಂಡು

ಧೈರ್ಯ ಎಣ್ಣುವದ್ ದೇವ ತಂದ ಮಹಾಶಕ್ತಿ. ಕಷ್ಟತ್‌ನ ಧೈರ್ಯತ್ ನೀಸುವವನೇ ವೀರ, ಶೂರ ಎಣ್ಣಿಚಿಟ್ಟವ. ಅನ್ನನೆ ದೇವಡ ಬಟ್ಟೆಲ್ ನಡ್‌ಪವಂಗ್ ಧೈರ್ಯ ಬೋಂಡು. ಪೋಡಿ ತೂರಿಕ್ ಸಾಧ್ಯ ಇಲ್ಲೆ. ಧೈರ್ಯವುಳ್ಳವಂಗೇ ದೇವಡ ಕೃಪೆ ಕ್‌ಟ್ಟುವ. ಶ್ರೀ ಕೃಷ್ಣ ನಂಗಳೆನ್ನೆಕೆ ಮನುಷ್ಯಾವತಾರಿ. ಇಂದ್ ನಂಗ ಶ್ರೀಕೃಷ್ಣನ "ದೇವಾ" ಎಣ್ಣಿತ್ ಪೂಜೆ ಮಾಡುವ. ಅದ್‌ಂಗ್ ಕಾರಣ ಕೃಷ್ಣಂಡ ಧೈರ್ಯ, ಸಾಹಸ. ಶ್ರೀನಾರಾಯಣನ ಕಾಳಿಂಗ ಸರ್ಪಂಡ ಮೇಲೆ ಬುದ್ದಂಡ್ ಕಾಂಬ. ಪಾಂಬುರ ಮೇಲೆ ದಾರೂ

ಬುದ್ದವುಲೆ. ಆ ಚಿತ್ರತ್‌ರ ಅರ್ಥ ಇಚ್ಚಕೇ. ಎಂತಾ ಗಂಡಾಂತರ (ಕಷ್ಟ) ಬಾತೇಂಗ್ಯೂ ಅದ್‌ನ ನೀಕಿತ್ ಕಷ್ಟತೂ ಸುಖ ಪಡುವವನೇ ಆದರ್ಶ ವ್ಯಕ್ತಿ. ಪೋಡಿ, ಬೊತ್ತಿಯೆಂಡುಳ್ಳಂವ, ಏದೋರ್‌ನಲ್ಲ ಕಾರ್ಯಕೂ ಆಪ್‌ಲೆ; ಆಯಿತ್ತಿಲ್ಲೆ. ಕಷ್ಟಕ್ ಎದೆನತಾಕಿತ್, ಪೋರಾಟ ಮಾಡುವವನೇ ಬಾಳ್‌ರ ತಿರ್‌ನ ತಿಂಬವೊ. ಕಷ್ಟಕ್ ಬೆನ್ನ್‌ಟ್ಟಿತ್ ಓಡುವವನಲ್ಲ.

## ಕೆಟ್ಟ ಬುದ್ಧಿ ಬುಡಂಡು

ದಿನ ಪೋನೆನ್ನೆಕೆ ತಡಿ ಬೊಳೆವ. ತಡಿಬೊಳಂದೆನ್ನೆಕೆ ಜೀವನತ್‌ರ ಆಸೆಯೂ ಬದ್‌ಲಾಪ. ಚೆರ್‌ಪತ್ತಿಪ್ಪ ಭಾವನೆ, ಕಲ್ಪನೆ, ಆಶೆ, ಅಭಿಲಾಷೆ ಯೌವನತ್ತಿಪ್ಪುಲೆ. ಯೌವನತ್ತಿಪ್ಪ ಆಸೆ, ಆಕಾಂಕ್ಷೆ ವಯಸ್ಸ್‌ಕಾಲತ್ತಿಪ್ಪ್‌ಲೆ. ಮನುಷ್ಯ ಮಾಡಿಯಂಡ ದೇವಡ ಕಲ್ಪನೆ ಕೂಡ ಮನುಷ್ಯಂಡ ಮನಸ್ಸ್ ಬೊಳಂದೆನ್ನೆಕೆ ವ್ಯತ್ಯಾಸ ಆಪ. ಪಂಡ್ ನಾಗರಿಕತೆ, ವಿದ್ಯೆ ಕಮ್ಮಿ ಇಪ್ಪಕ ಮನುಷ್ಯ ನರಬಲಿ, ಪ್ರಾಣಿಬಲಿನ ಕೇಪ ದೇವಳ ಬೊತ್ತಿತ್ ಪೂಜುವಯಿಂಜತ್. ಇಂದ್ ಅಂತ ಜನಡ ಸಂಖ್ಯೆ ಕಮ್ಮಿಯಾಯಿತ್. ದೇವಡ ಸಂಖ್ಯೆಯೂ ಕಮ್ಮಿ ಆಯಿತ್. ಇಂದ್ ದೇವ ಎಣ್ಣುಕ ಸೌಮ್ಯತೆ, ನಲ್ಲಗುಣ, ನಡತೆ ಎಣ್ಣುವಲ್ಲಿಕ್ಕೆತ್ತಿತ್. ಮನಸ್ಸ್‌ರ ವಿಕಾಸ ಆನೆನ್ನೆಕೆ ಅದಂಗ್ ಸರಿಯಾಯಿತ್ ಹೊಂದಿಯುವಂಡು. ನಡಂದ್ ಬಂದ ಸಂಪ್ರದಾಯಾಂದ್ ನರಬಲಿನ ನಿಪ್ಪ್‌ಚಿಟ್ಟಿಲಿಯಾ? ಪತಿವ್ರತೆ ಪದ್ಧತೀಂದ್ ಸಹಗಮನ ನಿಂದ್‌ಲಿಯಾ ? ಅನ್ನನೆ ಪಡ್‌ಚ ಬುದ್ದೀಂದ್ ಕೆಟ್ಟಬುದ್ದಿನ ಬೆಚ್ಚವಕ್ಕಾಗ, ಅಕ್ಕೆನ್ನೆ ಬುಡಂಡು.

## ನಲ್ಲ ನೆರೆಕರೆ ಒಕ್ಕುವ ನೀರ್

ಮನುಷ್ಯ ತಾಂಡ ನೆರೆಕರೆಕಾರಡ ಕೂಡೆ, ಸ್ವಂತ ಜನತ್‌ರ ಕೂಡೆ

ಎನ್ನನೆ ಬಾವಾ ಎಣ್ಣುವದೇ ಅವಂಡ ನಾಗರಿಕತೆ, ಸಂಸ್ಕೃತಿ, ದೈವಭಕ್ತಿನ ಅರಿವ ಅಳತೆ ಕೋಲ್. ನೆರೆಕರೆ ಕಾರಡ ಕೂಡೆ, ಸಂಸಾರತ್‌ರ ಕೂಡೆ ಕೂಡಿ ಬಾವಕ್ಕರಿಯತಂವ ಎಚ್ಚಕೇ ವಿದ್ಯೆ, ಬುದ್ದಿವಂತ ನಾನಕೋಅವಂಡ ಜೀವನ ವ್ಯರ್ಥ. ಮನುಷ್ಯಂಡ ನೇವಾನ ಮನುಷ್ಯತ್ವ ಅರಿವೇಂಗಿ ನೆರೆಕರೆ ಕಾರಡ ಕೂಡೆ ಮಾಡುವ ವ್ಯವಹಾರತ್ ಅರಿವಲು. ಬಂದಿತಕ್ಕೆನ್ನೇ ಪೋಪ ಬೆಂದುವಡ ಆದರ್ಶ ರೀತಿ ನೀತಿ ಅರಿವದ್ ಕಷ್ಟ. ಬೆಂದುವ ಚೆನ್ನದಿನ ಒಳಂಜತ್ತೇಂಗಿ ಅಯಿಂಡ ಒಳ ಹೃದಯ ಪ್ರತಿಬಿಂಬ ಗೊತ್ತಾಪ. ಅಯಿಂಡ ಆಡಂಬರ, ವಂಚನೆ, ಕಪಟ ಎಲ್ಲಾ ಲಟಪಟ ಆಪ. ನೆರೆಕರೆರ ಕೂಡೆ ಉಳ್ಳ ಸಂಬಂಧತ್ ಒಬ್ಬ ಎನ್ನೆನ್ನೇಂದ್ ಅರಿಯಲು. ಕಾಲ್‌ರಡಿಲ್ ಜೋರಾಯಿತ್ ಒಕ್ಕುವ ನೀರ್, ಚಿನ್‌ಂಗ್ ಮಳೆ ಮಂಡೆಕ್ ಬೂವಾಂಗಿಂಜಿ ಉತ್ತಮ. ದೂರತ್ತಿಂಜಿ ಬಂದಿತ್ ಪೋಪ ಬೆಂದ್‌ಕ ಅಡ್ಡಮಳೆನನ್ನೆಕೆ. ನಲ್ಲ ನೆರೆಕರೆ ಕಾಲಡಿಲ್ ಒಕ್ಕುವ ನೀರ್‌ನೆನ್ನೆಕೆ.

## ಜಿಪುಣತನ ಆಗ

ಮಿತವ್ಯಯ ಎಣ್ಣುವದ್ ಅಮರ ಗುಣ. ಮಿತವ್ಯಯ ಬೊರೀ ದುಡ್ಡ್‌ಲ್ ಮಾತ್ರ ಅಲ್ಲ. ಬಂದಾನ ಬಂದೆನ್ನೆಕೆ ಕರ್ಚಿ ಮಾಡುವವಂಗ್ ತೊಂದರೆ ತಪ್ಪ್‌ನದಲ್ಲ. ಸಂಪಾದನೆರ ದುಡ್ಡ್‌ನ ಆಗತಾಂಗ್ ಕರ್ಚಿಮಾಡ್‌ನಕ ಅದ್ ದುಂದುಗಾರಿಕೆ. ಅನುಭವತ್‌ರ ಕನಿಷ್ಟತ್‌ನ ಬೋಂಡತಾಂಗ್ ಉಪಯೋಗ ಮಾಡ್‌ನಕ ಅದ್ ನಲ್ಲದಾಗ. ಊಟ ಉಪಚಾರ, ತಕ್ಕ್, ವ್ಯವಹಾರ ಪ್ರತೀ ಒಂದಾತೂ ಎಚ್ಚಕ್ ಅಗತ್ಯವೋ ಅಚ್ಚಕ್ಕಾನ ಮಾತ್ರ ಮಾಡಂಡು. ಓರ್ ಗಾದೆ ಉಂಡ್ " ಸೂಕ್ಷ್ಮಿಸಿದರೆ ದುಃಖಿಸಬೇಡ" ಅನ್ನನೆ ಮಿತವ್ಯಯ ಒರ್ ಮಹಾಶಕ್ತಿ. ಎಣ್ಣುವಾನ ಅರಿಂಜಂಡ್ ನಡಂದಕ ದುಃ

ಖಿಕ್ ಕಾರಣ ಇಲ್ಲೆ. ಆನಗುಂಡ್ ಎಲ್ಲಿ ಉಳಿತಾಯ ಮಾಡಲು ಅಲ್ಲಿ ಖರ್ಚ್ ಆಗ. ಎಲ್ಲಿ ಖರ್ಚಿ ಮಾಡಂಡೋ ಅಲ್ಲಿ ಜಿಪುಣತೆ ಕಯ್ಯ.

## ನಿಸ್ವಾರ್ಥ ಸೇವೆ

ಸ್ವಾರ್ಥ ಎಣ್ಣುವಾನ ಬುಟ್ಟಲ್ಲತೆ ಮನುಷ್ಯ ನಲ್ಲವನಾಪ್‌ಲೆ. ಸ್ವಾರ್ಥ ಎಣ್ಣುವದ್ ಬೋಳೆಕ್ ಕೆಟ್ಟ್‌ನ ಕಲ್ಲ್‌ನೆನ್ನಕೆ. ಆ ಕಲ್ಲ್ ಉಳ್ಳ್‌ಲಿಕೆತ್ತನೆ ಈಜುವಕ್ಕಾಪ್‌ಲೆ. ಸ್ವಾರ್ಥತ್‌ರ ಗಡಿ ದಾಟ್‌ನಕೇ ಗೌರವ ಪಿಂಞ ಕೀರ್ತಿ. ಬಟ್ಟೆ ಒಂದೇ ಆಚೇಂಗೂ ಅದ್ ಇಪ್ಪಲ್ಲಿಯೇ ಇರಂಡು. ಕೈ ವಸ್ತ್ರ ಜೋಬ್‌ಲೇ ಇರಂಡು. ಆಂಡ ಕೆಲಸ ಕಣ್ಣ್‌ರ ನೀರ್‌ನೋ, ಮೂಕ್‌ರ ಚಾರ್‌ನೋ ತ್‌ಟುವ ಮಾತ್ರ. ಅನ್ನನೆ ಬಟ್ಟೆನ ಬಾವುಟಕ್ಕಾಯಿತ್ ಕಂಬತ್‌ರ ಕೂಡಿಕ್ ಕೆಟ್ಟ್‌ನಕ ಅದ್ ಗಾಳಿಕ್ ಪಾರಿಕಳಿಪ. ಜನಡ ಗೌರವಕ್ ಪಾತ್ರ ಆಪ. ಸ್ವಾರ್ಥ ಜೀವನ ತನ್ನಷ್ಟಕ್ ತಾನ್. ಸಮಾಜಕ್ಕಾಯಿತ್ ಮಾಡುವ ಕೆಲಸ ತೇನ್‌ನೆನ್ನಕೆ. ಇಞ್ಞೊಬ್ಬಂಡ ಬಾಳ್‌ಕ್ ಬೊಳಿಕಾಟುವವು ಆ ಬೊಳಿನ ಮುಚ್ಚಿಯವ ಕೈಯ್ಯುಲೆ. ನಿಸ್ವಾರ್ಥ ಸೇವೆನುಂಡ್ ಮನ, ಮನೆ, ಲೋಕ, ಎಲ್ಲವೂ ಬೊಳಿಕಾಂಬ.

## ಅದೃಷ್ಟ

ಅದೃಷ್ಟ ಎಣ್ಣುವದ್ ಇಲ್ಲೆ. ಉಂಡೇಂಗೂ ಧೈರ್ಯಶಾಲಿಯಾಯಿತ್ ತಾಂಡ ಕರ್ಮ ಮಾಡುವವಂಗ್ ಅದ್ ಅನ್ವಯ ಆಪ್‌ಲೆ. ಲೋಕತಾಪ ಪ್ರತೀ ಕಾರ್ಯಕ್ಕೂ ಕಾರಣ ಉಂಡ್. ಕಾರಣ ಇಲ್ಲತೆ ಕಾರ್ಯ ಇಲ್ಲೆ. ಕಾರ್ಯತ್‌ರ ಕಾರಣ ಮನುಷ್ಯಂಗ್ ಗೊತ್ತಾಪಕ ಅದ್ ಇನ್ನನಾಚಿ, ಅನ್ನನಾಚಿ ಎಣ್ಣುವ, ತಾಂಡ ಕರ್ಮಕ್ ಕಾರಣ ಗೊತ್ತಾಕತ ಪೋಚೇಂಗಿ ಅದ್‌ನ ಅದೃಷ್ಟ

ಎಣ್ಣುವ. ಮನುಷ್ಯ ತಾಂಗ್‌ತಾನೇ ಮಾಡಿಯಂಡ ಒರ್ ಪಾಳ್ ವಿಶ್ವಾಸ, "ಅದೃಷ್ಟ." ಅದೃಷ್ಟ ಉಳ್ಳೆನ್ನಿಕೆ ಆಡ್‌ಂದ್ ಮುಂಡತೆ ಕೈ ಕೆಟ್ಟಿ ಅಳಪಕ್ಕಯ್ಯುವಾ ? ಅನ್ನನಾಚೇಂಗಿ ಸರ್ವನಾಶ. ನೈಪವಂಗ್ ಅದೃಷ್ಟ ಒಲಿಯುವ. ಅದೃಷ್ಟ ಎಣ್ಣಿಯೆಂಡ್ ಮುಂಡತೆ ಅಳ್‌ಪವಂಗ್ ಅದೃಷ್ಟ ಇಲ್ಲೆ. ನೈಪವಂಡ ಕೈಲ್ ನೈಪುರ ಭಾಗ್ಯ. ಸಮಯಕ್ ಸೆರಿಯಾಯಿತ್ ನೈಪವಂಗ್, ಸಂದರ್ಭ ನೋಟಿಯಂಡ್ ಕಾರ್ಯ ಅರಿವವಂಗ್ ಅದೃಷ್ಟ ತಾನಾಯಿತೇ ಒಲಿಯುವ.

## ಎಲ್ಲಾತೂ ಪ್ರಯೋಜನ ಉಂಡ್

ಅವಂಡವಂಡ ಶಕ್ತಿ, ಯೋಗ್ಯತೆನ ಅವನವನೇ ಅರಿಂಜವ ಶಕ್ತಿ ಮನುಷ್ಯಂಗಿರಂಡು. ತಾಂಡ ಶಕ್ತಿಕ್, ಯೋಗ್ಯತೆಕ್ ಮೀರ್‌ನ ಆಸೆಲ್ ಬೋಂಡಿಯಚ್ಚಕ್ ದುಃಖ ಬರತಿರ. ತಾಂಡ ಶರೀರ ಶಕ್ತಿ, ಪಡಿಪುಶಕ್ತಿ, ಪಣಶಕ್ತಿರ ಇತಿಮಿತಿನ ಅರಿಂಜಿತ್ ಜೀವನ ಮಾಡುವವನೇ ಬುದ್ಧಿವಂತ. ಅವನ ಜಾಣ ಎಣ್ಣಲು, ಎಲ್ಲಾರೂ ವಿವೇಕಾನಂದಂಗಳಾಪಕಯ್ಯುಲೆ. ಗಾಂಧಿ ಆಪಕ್ಕಯ್ಯುಲೆ. ಅನ್ನನ್ನಾಂಡೂದಾನಕ ಶ್ರದ್ಧೆರ ಪೂರ್ಣ ಪ್ರಯತ್ನ ಬೋಂಡು. ಗಾಳಿಮರ ಎತ್ತರಕ್ ಬೊಳಿವ, ಚೆರಿಯ ಚೆರಿಯ ಗಿಡಕ್ ಅಚ್ಚಕ್ ಎತ್ತರ ಬೊಳಿವ ಕಯ್ಯುಲೆ. ಆಚೇಂಗ್ಯೂ ಚೆರಿಯ ಗಿಡತ್‌ಲ್ ಪ್ರಯೋಜನ ಇಲ್ಲೇಂದ್ ಎಣ್ಣುವ ಕಯ್ಯ. ಬಲ್ಯದೂ ಬೋಂಡು ಚೆರಿಯದೂ ಬೋಂಡು. ನೆಲತ್‌ಬೊಳೆವ ಪಚ್ಚೆ ಪಿಲ್ಲೂ ಪ್ರಯೋಜನಕ್ ಉಂಡ್. ಪಿಲ್ಲೇ ಆಡ್. ಚೆರಿಯಚೆರಿಯ ಗಿಡವೇ ಆಡ್ ಬಲ್ಯಮರವೇ ಆಡ್ ತಾಂಡತಾಂಡ ಶಕ್ತಿಲ್ ಪರಿಪೂರ್ಣವಾಯಿತ್, ಮಿನ್ನಿಚೇಂಗಿ ಲೋಕಕ್‌ನಲ್ಲದ್. ಪ್ರಯೋಜನವಿಲ್ಲತ ವಸ್ತು ಏದೂ ಇಲ್ಲೆ.

# ಪಳೆಯಾನೇ ಗೇನಮಾಡುವಕ್ಕಾಗ

ಚೆರಿಯ ಮಕ್ಕಳಾಯಿತ್ ಕಳಿಚಕಳಿ, ಪಟ್ಟ ಆನಂದ, ಪೋಡಿ ಇಲ್ಲತೆ ಕೂಟಾಕತೆ ಕಳಿಚಕಳಿ ಎಲ್ಲಾ ಪೋಚಿಂದ್ ಅದೇ ನಲ್ಲದಿಂಜತ್‌ಂದ್ ಗೇನ ಮಾಡುವ ಕಾಲವೇ ಯೌವ್ವನ. ಯೌವನತ್‌ರ ತೀಟೆ, ಉತ್ಸಾಹ ಆನಂದ ಬಪ್ಪಂಜಿ ಅದೂ ಪೋಯಿರುವ. ಬಂದಿತ್ ಪೋನಾಂಗೆಲ್ಲಾ ಬೇಜಾರ ಪಟ್ಟಂಡಿಪ್ಪಕ್ಕಾಗ. ಪೋನದ್ ಬಪ್ಪುಲೆ. ಉಳ್ಳದ್ ಇಪ್ಪ್‌ಲೆ. ತಕ್ಕ್‌ಲ್, ಕಾರ್ಯತ್ ಪೋನ ಮಾನ, ತೂಟ್‌ಂಗಳಕ್ ಪೋನ ಚಾವು, ಪೊಣ್ಣ್ ಮಕ್ಕಕ್ ಕೊಡ್‌ತ ದುಡ್ಡ್ ವಾಪಾಸ್ ಬಂದದುಂಡಾ ? ಅನ್ನನೆ ಕಯಿಂಜಿಪೋನ ಬಾಲ್ಯ, ಯೌವನ ತಿರಿತ್ ಬಪ್ಪ್‌ಲೆ. ಬರತಾನ ಗೇನ ಮಾಡುವಕ್ಕಾಗ. ಮಾನ, ಮರ್ಯಾದೆ, ರೀತಿ ನೀತಿಲ್, ಯೋಗ್ಯ ರೀತಿಲ್ ಬದ್‌ಕಿ ಬಾಳ್‌ನವಂಡ ಬಾಲ್ಯ, ಯೌವನ, ಮುದಿತನ ಪೂವಾಯಿತ್, ಮುಡಿಯಾಯಿತ್, ಕಾಯಾಯಿತ್, ಅಲ್ಲಿಂಜಿ ಮೊದ್‌ರಾನ ಪಣ್ಣ್‌ನೆನ್ನಕೆ ಪೂರ್ಣ ಆನಂದತಿಪ್ಪ. ಪ್ರತಿಯೋರ್ ಅವಸ್ಥೆಲೂ ಇಂಞೋರ್ ಅಪಸ್ತರ ಪರಿಪೂರ್ಣತೆ ಇಂಜಿತೇ ಇಪ್ಪ. ಅಂದೇಕ್ ಅದ್ ಸುಖ, ಇಂದೇಕ್ ಇದೇ ಸುಖ. ಪಳೆಯಾನೇ ಗೇನ ಮಾಡಿಯಂಡಿಪ್ಪದ್ ಸೆರಿಯಿಲ್ಲ.

# ಸುಖ ದುಃಖ ಒಂದೇ

ಕಣ್ಣೀರ್ ಬಂದ ಕಣ್ಣ್, ದುಃಖತ್‌ನ ಮರೆವನ್ನಕೆ ಮಾಡುವ. ನೊಂಬಲತ್ ನರಳ್‌ನ ಹೃದಯ (ತೊಂಬೆ) ನೊಂಬಲತ್‌ನ ಮರೆಪ್‌ಚಿಡುವ. ಅನ್ನನೆ ಸುಖ, ದುಃಖ ತಾಂಡ ಪ್ರಭಾವತ್‌ನ ನಂಗಡಲ್ಲಿ ಶಾಶ್ವತ ಇಪ್ಪನ್ನಕೆ ಮಾಡುಲೆ. ಸುಖವೂ ಕಾಲ ಕಯಿಂಜನ್ನಕೆ ಮಾಜಿಪೋಪ; ದುಃಖ ಎಣ್ಣುವಗಾಯವೂ ಮಾಜಿ ಪೋಪ. ಆನಗುಂಡ್ ಸುಖ ದುಃಖತ್‌ನ ನಂಗ

ಸಾಮಾನ್ಯವಾಯಿತ್ ಕಾಂಬಕ್ ಪಡಿಕಂಡು. ನಂಗ ದುಃಖತ್ ಪೊರಮೆ ಪೋಚೇಂಗಿ ಕಾಡ್‌ಲ್ ಕಾಂಬ ಪೂವು, ಒಕ್ಕುವ ನೀರ್, ಪಕ್ಷಿಯಿಡ ಕೂತ್ ಅಥವಾ ನಂಗ ಕೆಯ್ಯುವ ಗುದ್ದಲಿ ಪಣಿ ಇದೆಲ್ಲಾ ನಂಗಕ್ ಧೈರ್ಯ ತಕ್ಕು. ದುಃಖತ್‌ನ ಮರೆಪನ್ನೆಕೆ ಮಾಡುವ. ಆನಗುಂಡ್ ನಂಗ ನಿಂದ ಮರ, ಅನ್‌ಂಗತೆ ಇಪ್ಪಕಲ್ಲ್ ಬಂಡೆ, ಒಕ್ಕುವ ನೀರ್, ಕಾಯುವ ಬೆದ್, ಬೂವ ಮಳೆನ್ನುಂಡ್ ನಂಗಡ ಬಾಳ್‌ಕ್ ಅರ್ಥ ಮಾಡಿಯವಂಡು. ಮನಸ್ಸ್‌ನ ಅನುಭವತ್ ಪಣ್ಣ್‌ಮಾಡಿಯಂಡವಂಗ್ ಸುಖವೂ ಒಂದೇ ದುಃಖವೂ ಒಂದೇ.

## ಧೈರ್ಯ ಮುಖ್ಯ

ಪಣ ಕಳಂದಂಡವಂಗ್ ಅಚ್ಚ್‌ಕ್ ಮಟ್ಟಿಗೆ ನಷ್ಟ. ಅದ್‌ನ ದುಂಬ್‌ಚಿಟ್ಟುವ ಸಾಧ್ಯತೆ ಉಂಡ್. ಆರೋಗ್ಯ ನಷ್ಟ ಆನಕ ಆದ್‌ನೋ ತಿರಿತ್ ಪಡೆಯಲು. ತಾಂಡ ಒಡಹುಟ್ಟ್‌ನವು ಚತ್ತಕ ದುಂಬ್‌ಚಿಡುವ ಕಯ್ಯತ ನಷ್ಟ. ಆಚೇಂಗಿ ಅದ್‌ನ ಮರೆಪಂಜಿ ಬದ್‌ಕಲು. ಮನುಷ್ಯ ತಾಂಡ ಬದ್‌ಕ್‌ಲ್ ಧೈರ್ಯ, ಧೃತಿ ಕಳಂದಕ ಅವಂಡ ಬಾಳೇ ಪಾಳ್. ಅಂತಯಿಂಗಕ್ ಇಹ ಪರ ಸುಖ ಎಣ್ಣುವದ್ ಕ್‌ಟ್ಟುಲೆ, ಧೈರ್ಯ ಇಲ್ಲತವಂಡ ಜೀವಮಾನ ಸಾರ್ಥಕ ಜೀವಮಾನ ಅಲ್ಲ.

"ಪೋಡಿ ಎಣ್ಣುವದ್ ಇಲ್ಲತಿಪ್ಪದೇ ಸರ್ವತತ್ವ, ಧರ್ಮ, ವೇದಾಂತತ್‌ರ ತಿರ್" ಎಣ್ಣಿತ್ ಸ್ವಾಮಿ ವಿವೇಕಾನಂದ. ಇದೇ ಸರ್ವ ಸಿದ್ಧಾಂತ. ಪ್ರತೀ ಮೊಟ್ಟ್‌ಲೂ ಬೊತ್ತಿಯಂಡ್ ನಡ್‌ಪಂವ ಬೂವದ್ ನೇರ್. ಧೈರ್ಯ ಇಲ್ಲತಲ್ಲಿ ಬುದ್ಧಿ ಕೆಲಸಕ್ ಬಪ್ಪ್‌ಲೆ.

## ಶಾಂತಿ ಸುಖ

ಜೀವಮಾನತ್‌ರ ಒರೋರಂದ್ ಸಂದರ್ಭತ್ ಇಡೀ ಲೋಕವೇ

ನಂಗಕ್ ವಿರೋಧಿ ಆಯಿತ್ ಕಾಂಬ. ನಂಗ ಪರೆವ ತಕ್ಕ್ ಅಪಾರ್ಥ ಆನೆನ್ನಕೆ ಆಪ. ಜನ ನಂಗಡಲ್ಲಿಂಜಿ ದೂರ ಪೋಪ. ನಂಗ ಮಿಂಞಕ್ ಪೋಪಾನ ಸಹಿಸತವೂ ಇಪ್ಪ. ಜನಕ್ ಬೋಂಡತ ಪಿಂಞ ನಾನೆನ್ನಂಗ್ ಬದ್‌ಕಂಡಿಯೆಂದ್ ಗೇನವೂ ಬಪ್ಪ. ನಂಗ ಮುಂಡತುಂಡೇಂಗ್ಯೂ, ತೆಳಿಚತೇಂಗ್ಯೂ ತಪ್ಪ್ ಅಭಿಪ್ರಾಯಬಪ್ಪ. ಮೂಡ್‌ಲ್ ನಿರಾಶೆ, ಮನಸ್ಸ್‌ಕ್ ಮೋಡ ಕವುಂಜೆನ್ನಕೆ ಆಪ. ಇದೋರ್ ಪರೀಕ್ಷೆ ಸಮಯ. ಇಚ್ಚಕಾಂಗ್ ಧೈರ್ಯ ಕಳಂದವ ಕಯ್ಯ್. ಇದೇ ಲೋಕ ನನ್ನ ಕೈಬುಟ್ಟತ್ ಎಣ್ಣನೆನೆಕೆ ಬಪ್ಪ ಸಮಯ. ನಂಗಡ ಗುರಿನ ಬುಡತೆ ಧೈರ್ಯತ್ ಮಿಂಞಕ್ ವೊಟ್ಟ್‌ಡುವ ಸಮಯ. ದಾರೇಂಗಿ ಹೊಗಳಡ್ ಅಲ್ಲೇಂಗಿ ತೆಗಳಡ್, ಅವಮಾನ ಮಾಡಡ್ ತಾನ್ ಮಾತ್ರ ತಾಂಡ ಅಭಿಪ್ರಾಯ ಪೋಲೆ, ತಾಂಗ್‌ನಲ್ಲದ್‌ಂದ್ ಕಂಡೆನ್ನಕೆ ಬಾವದೇ ಶಾಂತಿ, ಸುಖ.

## ಜ್ಞಾನಿಯ ಲಕ್ಷಕ್ಕೊಬ್ಬೊ

ಅಡ್ಡಬಟ್ಟೆ, ವೋಸ, ಕುಟಿಲತನತ್‌ಲ್ ಅಧಿಕಾರಕ್ ಬಪ್ಪದ್ ಕಷ್ಟಅಲ್ಲ. ನೀತಿಕೆಟ್ಟ ರಸ್ತೆಲ್ ಬೋಂಡಿಯೆಚ್ಚಕ್ ಸಿರಿಸಂಪತ್ತ್ ಮಾಡ್‌ವದೂ ಸಾಧ್ಯ ಇಲ್ಲತ್ತಿಲ್ಲೆ. ಆಚೇಂಗಿ ಜ್ಞಾನ ಸಂಪಾದನೆಕ್ ಸತತ ಪ್ರಯತ್ನ ಬೋಂಡು. ಜ್ಞಾನ ಸಂಪಾದನೆಕ್ ಅಡ್ಡಬಟ್ಟೆ ಇಲ್ಲೆ. ಮೋಸ, ಲಂಚ ಕುಟಿಲತನ ಇಲ್ಲೆ. ಸಿರಿವಂತನೇ ಆಡ್ ಗರೀಬನೇ ಆಡ್ ಸಮಾನಾಯಿತ್ ಜ್ಞಾನದೇವಿರ ಕೃಪೆನ ಪಡಿಯೊಂಡು. ಜ್ಞಾನತ್ ಸಿರಿವಂತಂಗ್ ಪಟ್ಟ ಇಲ್ಲೆ. ಅಧಿಕಾರಸ್ಥ ಎಣ್ಣಿಯೆಂಡ್ ಕೊಡಿಲ್ ವೇದಿಕೆ ಇಲ್ಲೆ. ಜ್ಞಾನಿಯಾನವು ಪ್ರತೀಯೊಬ್ಬನೂ ಈ ಜೀವನ ಎಣ್ಣುವ ಮಾರ್ಗತ್ ಅನುಭವಿಚಿಟ್ಟ ಕಷ್ಟ, ನಿಷ್ಠುರ, ಸಹಿಸಿಯೆಂಡ್ ಅವಂಡ ಜ್ಞಾನ ಎಣ್ಣುವ ಕಣ್ಣ್‌ನ ತೊರಪಕ್ ಸಹಾಯ ಆಪ. ಜ್ಞಾನತ್‌ರ ಮಾರ್ಗ ಇಕ್ಕಟ್ಟಾಯಿತುಳ್ಳಾಂಗ್ ಜ್ಞಾನಿಯ ಲಕ್ಷಕ್ಕೊಬ್ಬೊ.

# ಇನ್ನನ್ನಿರಂಡು

ಸಹಿಸುವಕಯ್ಯತ ಪೊಯಿತ್, ಗೇನ ಮಾಡುವ ಕಯ್ಯತ ಎದೆ ನೊಂಬಲ, ಎದ್ದಿತ್ ನಿಪ್ಪಕೈಯ್ಯತಂತಾ ಪರಿಸ್ಥಿತಿ ಜಾಸ್ತಿಯಾಯಿತ್ ಬಪ್ಪ ನಂಗಡ ಸ್ವಂತ ಜನತ್‌ನ್ನುಂಡ್. ನಂಗಕ್ ಜೋಡಿಯಾನಯಿನ್ನುಂಡೇ ನಂಗಕ್ ಕಷ್ಟ ತೊಂದರೆ ಬಪ್ಪ. ಆನಗುಂಡ್ ಎಚ್ಚಕ್ಕೇ ಪಕ್ಕತುಳ್ಳವು ಆಡ್, ಸ್ವಂತಜನಳೇ ಆಡ್ ವಿಪರೀತ ಆತ್ಮೀಯತೆ (ಬೆಂದೂರ್ತ)ನಲ್ಲದಲ್ಲ, ನಂಗಡಲ್ಲಿ ಬುದ್ಧಿ, ಜ್ಞಾನ ಬೊಳಿಯೆಂಡಿಕೆ ಪ್ರಪಂಚತ್‌ರ ಕೂಡೆ ಆಡಿ ಚೋತಿತ್ ಚಿಕ್ಕಂಡು. ಚೋತ್‌ಚಿಕ್ಕ್‌ನ ಅನುಭವತ್‌ನ ಒಬ್ಬನೇ ಒಬ್ಬನಾಯಿತ್ ಕರ್‌ಕಿಯವಂಡು. ಕಾಯಿಲೆಕ್ ಎನ್ನನೆ ಮದ್ದ್ ಅವಶ್ಯವೋ ಅನ್ನನೇ ಮನಸ್ಸ್ ಬೊಳಿಯೆಂಡಿಕೆ ಏಕಾಂತತೆ ಅತೀ ಮುಖ್ಯ. ನಂಗ ಲೋಕತ್ ರೊಳ್‌ಲ್ ಒಂದಾಯಿ ಮುಳಿತೂ ಇಕ್ಕಂಡು, ಅದಿಂಜ ದೂರತೂ ಇಕ್ಕಂಡು, ಲಾಭ ನಷ್ಟತ್‌ನ ಪರಿಶೀಲನೆಯೂ ಮಾಡಂಡು. ನಂಗ ಲೋಕತ್ ಎನ್ನನಿರಂಡೂಂದ್ ಎಣ್ಣಿಕ ಮುಟ್ಟ್‌ನೆನ್ನಕೆ, ಮುಟ್ಟತೆ, ಮುಟ್ಟಿಯೂ ಮುಟ್ಟತೆನ್ನಕೆ ಇರಂಡು. ಅಂದಕೇ ನಂಗಡ ಜೀವನ. ವಿಪರೀತವಾಯಿತ್ ಏದ್‌ನೋ ಅಂಟ್‌ಚಿಟ್ಟವಕ್ಕಾಗ.

# ನಲ್ಲ ಭಾವನೆ ಬೋಂಡು

ಗುಲಾಬಿ ಪೂವು ಎಚ್ಚಕ್ ಚಾಯಿ, ಎಚ್ಚಕ್ ಕೋಮಲ, ಮನಸ್ಸ್‌ಕ್ ಎಚ್ಚಕ್ ಕುಷಿ. ಆಂಡ ಕೂಡೆ ನಂಗಕ್ ನೊಂಬಲ ತಪ್ಪ ಮುಳ್ಳೂ ಉಂಡ್. ಅನ್ನನೆ ನಂಗಡ ಜೀವಮಾನತ್ ತೆಳಿ, ಹಾಸ್ಯ, ಆನಂದ ಉಂಡ್. ಆಂಡಕೂಡೇ ದುಃಖ, ಸಂತಾಪ, ಕಷ್ಟ ಸಹ ಉಂಡ್. ಉಲಗತ್ ಏದೇ ಜೀಮಾನತ್ ಕಷ್ಟ ಇಲ್ಲತೆ ಇಲ್ಲೆ. ಏದೂ ಬರೀ ಸುಖತೇ ಇಪ್ಪನ್ನಕೆ ಇಲ್ಲೆ. ಪ್ರತೀ ಒಬ್ಬಂಡ ಜೀವಮಾನತ್ ಕಷ್ಟ ಸುಖ ಇಂಜಿತ್ತೇ ಇಪ್ಪ. ಇರಂಡು. ತಾಂಡ ಕಷ್ಟತ್‌ನ

ಪಾಲ್ ಮಾಡಿಯವು ಉಂಡೇಂಗಿ ಸುಲಭ ಆಪ. ಅನ್ನನೇ ಸುಖಿಪಡುವಕ ಕೂಟ್‌ಕಾರ ಉಂಡೇಂಗಿ ಸುಖಿ ಜಾಸ್ತಿ ಆಪ. ಆನಗುಂಡ್ ಕಷ್ಟಸುಖತ್ ಭಾಗಿಯಾಪದ್ ಎಲ್ಲಾಕ್ಕೂ ನಲ್ಲದ್. ಒಬ್ಬ ಚತ್ತ ಪಿಂಞ ಅವಂಡ ಗುಣತ್‌ನ ಹೊಗಳಿತ್ ಪ್ರಯೋಜನ ಇಲ್ಲೆ. ಜೀವತ್ತಿಪ್ಪಕ ಸಹಾಯ ಮಾಡ್‌ನಾನ ಅವಂಗೇ ಎಣ್ಣಿತ್ ಹೊಗಳಂಡು. ಹೊಗಳತ ಪೋನಕೋ ಅವಂಗ್ ಎಣ್ಣಂಡು. ನಿರಾಶೆ ಅತೃಪ್ತಿ ದುಂಬ್‌ನ ಈ ಲೋಕತ್ ನಂಗಡಲ್ಲಿ ನಲ್ಲ ಭಾವನೆ ಯಿಂಜಕ ನಂಗಕ್ ಒರ್ ಶಕ್ತಿ ದುಂಬ್‌ನನ್ನೆಕೆ.

## ಕಾರ್ಯ ಚಾಯೋಡೆ ನಡಕಂಡು

ನಂಗಕ್ ಮುಂಡತೆ ಇಪ್ಪಕ್ಕೈಯ್ಯುಲೆ, ಎನ್ನಾಚೇಂಗೋರ್ ಕೆಲಸ ಮಾಡಿಯಿಂಡಿರಂಡು. ಏದೇಂಗೋರ್ ಕೆಲಸ ಕಾರ್ಯ ಸುರುಮಾಡುವಕ ಸುರೂಲ್ ನಂಗ ನಂಗಡಲ್ಲಿಯೇ ಈ ಮೂಂದ್ ಪ್ರಶ್ನೆನ ಇಟ್ಟವಂಡು. 1. ಈ ಕೆಲಸ ಕಾರ್ಯ ಅವಶ್ಯ ಉಂಡಾ ? 2. ಇದ್‌ಲ್ ಸತ್ಯಾಂಶ ಉಂಡಾ ? 3.ಇಂಞೊಬ್ಬಂಗ್ ಇದ್‌ಲ್ ಕೇಡ್ ಉಂಡಾ ? ಇದ್‌ಂಗ್ ಉತ್ತರ ನಂಗಡ ಹೃದಯ ತಕ್ಕಂಡು. ಹೃದಯತ್‌ರ ತಕ್ಕ್‌ನೆನ್ನೆಕೆ ಕಾರ್ಯಕ್ಕ್‌ಳಿವಂಡು. ಅನ್ನನೆ ಎಣ್ಣಿಯಂಡ್ ನಂಗಕ್ ಕಾಂಬಂತ ವೋಸ, ವಿಶ್ವಾಸಘಾತುಕತನತ್‌ನ ಎಣ್ಣಿವಕ್ಕಾಗಾಂದಲ್ಲ. ಇಂಞೊಬ್ಬಂಗ್ ನೊಂಬಲಾಪಾಂದ್ ಮೋಸ, ವಂಚನೆನ ಮುಚ್ಚಿ ಬೆಪ್ಪಕ್ಕಾಗ. ಚಲ ದುಂಬ್‌ನ ಕರ್‌ಪುಣ್ಣ್‌ನ ಒಡ್‌ಪಂಜಿ ಆಂಡ ಚಲತ್‌ನ ಪೊರಮೆ ಎಡ್‌ತಿತೇ ಎಡ್‌ಪನ್ನೆಕೆ ಅನ್ಯಾಯ, ಅನಾಚಾರ, ಕಪಟ ಇದ್‌ನೆಲ್ಲಾ ಬೊಳಿಪಡ್‌ತುವಂಡು. ಆಚೇಂಗಿ ಇಂತಾ ಕೆಲಸ ಕಾರ್ಯ ಮಾಡುವಕ ಚಾಯೋಡೆ ಮೆತ್ತನೆ ಮಾಡಂಡು. ನೊಂಬಲ್‌ಚಿಡುವಕ್ಕಾಗ.

## ಇಞ್ಞೊಬ್ಬಂಡ ಮೀದ ನಲ್ಲ ಅಭಿಪ್ರಾಯ ಇರಡ್

ನಾನ್ ನಲ್ಲ ವ್ಯಕ್ತಿ, ಬಾಕಿ ಜನಕ್ಕಿಂಜಿ ಮೇಲ್, ನಾನ್ ತಪ್ಪುಮಾಡುಲೆ ಎಣ್ಣಿಯಂಡ್ ಆತ್ಮತೃಪ್ತಿ ಪಡುವವೂ ಉಂಡ್. ನನ್ನ ಬುಟ್ಟಿತ್ ಬಾಕಿ ಉಳ್ಳವು ಕೆಟ್ಟಯಿಂಗ, ಅನ್ಯಾಯ ಮಾಡುವವು. ಮೋಸಮಾಡುವವು ಎಣ್ಣಿಯಂಡ್ ಜನಳ ದೂರಿಯಂಡಿಪ್ಪವೂ ಉಂಡ್. ಎಚ್ಚಕೇ ನಲ್ಲವಂಡಲ್ಲಿಯೂ ಕೆಟ್ಟದ್ ಎಣ್ಣುವದ್ ಉಂಡ್. ವಿಪರೀತ ಕೆಟ್ಟವಂಡಲ್ಲಿಯೂ ನಲ್ಲದ್ ಇಲ್ಲತೆ ಇಪ್ಪ್‌ಲೆ. ನಲ್ಲವಂಡಲ್ಲಿ ಕೆಟ್ಟದೂ ಉಂಡ್, ಕೆಟ್ಟವಂಡಲ್ಲಿ ನಲ್ಲದೂ ಉಂಡ್ ಎಣ್ಣುವ ಸತ್ಯತ್‌ನ ಅರಿವವು ಕಮ್ಮಿ. ತಪ್ಪು ಮಾಡತಂವ ದೇವ ಒಬ್ಬನೇ! ಅನ್ನನೇ ತಾಂಡಲ್ಲಿಯೂ ಕೆಟ್ಟದ್ ಉಂಡ್, ಇಞ್ಞೊಬ್ಬಂ ಡಲ್ಲಿಯೂ ನಲ್ಲದುಂಡ್. ಇನ್ನನ್ನಿಪ್ಪಕ ಇಞ್ಞೊಬ್ಬನ 'ಕೆಟ್ಟಂವ' ಎಣ್ಣಿಯಂಡ್ ದೂರಿಯಂಡಿಪ್ಪಕ್ಕಾಗ. ಇಂಞೊಬ್ಬಂಡ ಮೇಲೆ ತಪ್ಪಭಿಪ್ರಾಯ ಬೆಪ್ಪಕ್ಕಾಗ. ಕಂಡಾಕ್ಷಣ ಓರ್ ಅಭಿಪ್ರಾಯಕ್ ಬಪ್ಪದ್ ತಪ್ಪು.

## ಮರೆವು

ಮರಂದ್ ಪೋಪದ್ ಇಲ್ಲೇಂಗಿ ಮರೆವು ಮನುಷ್ಯಂಗ್ ಓರ್ ವರ. ಮರೆವುರ ಪ್ರಯೋಜನತ್‌ನ ನಂಗ ಪಡಿಕಂಡು. ಲೋಕತ್‌ನೇ ಮರಂದಿತ್ ಕಳಿಪದ್ ನಲ್ಲದಲ್ಲ. ಆಚೇಂಗಿ ನಂಗ ಇಞ್ಞೊಬ್ಬಂಗ್ ಸಹಾಯ ಮಾಡ್‌ನಾನ ಅಕ್ಕ ಮರೆವಂಡು. ಇಞ್ಞೊಬ್ಬ ನಂಗಳ ಹೊಗಳಿಟಾಕ್ಷಣ ಅದ್‌ನ ಅಲ್ಲಿಯೇ ಮರೆವಂಡು ದಾಡೇಂಗಿರ ವಿಚಾರತ್ ಆರೋಪ, ಅಪವಾದ ಕೇಟಕ ಮರೆವಂಡು. ನಂಗಕ್ ಕ್‌ಟ್ಟ್‌ನ ದೂಷಣೆ, ತಿರಸ್ಕಾರತ್‌ನೋ ಮರೆವಂಡು. ಇಂತಾನೆಲ್ಲಾ ಮರ್‌ಪದ್ ನಲ್ಲಾಮೆರ ಬಟ್ಟೆ. ಅನ್ನನೆ ಮರಕತೇ ಇಪ್ಪಂತ ಸಂಗತಿಯೂ ಉಂಡ್. ನಂಗಕ್ ಕ್‌ಟ್ಟ್‌ನ ಸಹಾಯ, ಇಞ್ಞೊಬ್ಬಂಗ್ ಕ್‌ಟ್ಟ್‌ನ ಗೌರವ

ಇಂತಾನೆಲ್ಲಾ ಮರೆಪಕ್ಕಾಗ. ಮಾಡ್‌ನ ಪ್ರತಿಜ್ಞೆ ಮರೆಪಕ್ಕಾಗ, ಎಡ್‌ತಂಡ ಸಾಲ ಮರ್‌ಪಕ್ಕಾಗ. ಇನ್ನನೆ ಮರೆವು, ಬೆಚ್ಚಂಡಕ ನಂಗಕ್ ಸುಖ ಜಾಸ್ತಿ.

## ಪ್ರತಿಫಲ ಬೋಂಡ

ಒಂಟೆರ ತಡಿಲ್ ಆಂಡ ಡುಬ್ಬ ಎತ್ತರತ್ತುಂಡ್ ಡುಬ್ಬ ಅಚ್ಚಕ್ ಎತ್ತರ ಉಂಡೇಂಗೂ ಆಂಡ ಮೇಲೆ ಒಂದಾನೋ ಬೆಪ್ಪ ಕೆಯ್ಯುಲೆ. ಡುಬ್ಬ ಮನುಷ್ಯಂಗ್ ಪ್ರಯೋಜನ ಇಲ್ಲೆ. ಅನ್ನನೆ ಪ್ರತೀಯೊಂದಾತು ಪ್ರಯೋಜನ ಪಡೆವಕ್ಕಾಗಾಂದ್ ಇದ್ ಎಣ್ಣುವ. ಆಚೇಂಗಿ ಒಂಟೆರ ಡುಬ್ಬ ಆಂಡ ಜೀವಮಾನಕ್ ಪೇರ್ತ್ ಮುಖ್ಯ. ಇನ್ನನೆ ನಂಗಡ ನಡತೆಯೂ ಇಕ್ಕಂಡು. ನಂಗ ಕೊಡ್‌ಪ ದಾನ, ಮಾಡುವ ಸಹಾಯ ಒಂಟೆರ ಡುಬ್ಬತ್‌ರನ್ನೆಕೆ ನಂಗಡ ಜೀವನಕ್ ಅವಶ್ಯ. ದಾನ ಕೊಡ್‌ಪಾತ್ ನಂಗಕ್ ಲಾಭ ಬರಂಡೂಂದ್ ಆಸೆ ಆಗ. ದಾನ ನಂಗಡ ಆತ್ಮ ಶುದ್ಧಿಕ್ಕಾಯಿತ್. ಅಲ್ಲತೆ ದಾನ ಕೇಟಂಡವಂಡ ಉದ್ಧಾರಕ್ಕಾಯಿತ್ತಲ್ಲ. ಏದೇ ದೃಷ್ಟಿಲೂ ಅಹಂಕಾರ ಆಗ. ಅಹಂಕಾರ ನಂಗಡ ಕೇಡ್‌ಕ್ ಕಾರಣ. ಓರ್ ಭಿಕ್ಷುಕ ಭಿಕ್ಷೆ ಕೇಟಂಡ ಪಿಞ್ಞ ಭಿಕ್ಷೆ ಕೊಡ್‌ತವನ ಹೊಗ್‌ಳೊಂಡೂಂದಿಲ್ಲೆ. ಅನ್ನನೆ ಗೇನ ಮಾಡಿವದೂ ತಪ್ಪ್. ಪ್ರತೀ ಒಂದಾತೂ ಪ್ರತಿಫಲ ಅಪೇಕ್ಷೆ ಮಾಡವಕ್ಕಾಗ. ಪ್ರತಿಫಲ ಗೇನತ್ ದಾನ ಕೊಡ್‌ಪದ್ ಸುಖ, ಶಾಂತಿಕ್ ನಲ್ಲದಲ್ಲ.

## ಚೆನ್ನಂಗ್ ಕುರ್‌ಡ್ ಕಣ್ಣ್‌ಬೋಂಡು

ನಂಗಡಲ್ಲಿ ಎಚ್ಚಕ್ ದುಷ್ಟತನ ಇಲ್ಲೆ ! ನಂಗಡಲ್ಲಿ ಎಚ್ಚಕ್ ತಪ್ಪ್ ಇಲ್ಲೆ ! ಇದೆಲ್ಲಾ ಗೊತ್ತಿಂಜಿತೂ ನಂಗ ನಂಗಳ ಪ್ರೀತಿಚಿಟ್ಟವ. ನಂಗ ನಂಗಕ್ಕಾಯಿತ್ ಎಂತ ಮಾಡುವಕೂ ತಯಾರಾಪ. ಪರಿಪೂರ್ಣತೆ ಇಲ್ಲತೆ,

ಬಲ ಇಲ್ಲತೆ, ಕಿಚ್ಚಿ, ದ್ವೇಷ ದುಂಬಿತುಳ್ಳ ನಂಗಳ ನಂಗ ಪ್ರೀತಿ ಮಾಡುವಕ, ತಪ್ಪುಳ್ಳ ಬಲ ಇಲ್ಲತೆ ಉಳ್ಳ ಬೋರೆ ಜನಳ ಪ್ರೀತಿ ಮಾಡುವ ಸಾಧ್ಯತೆಯೂ ಉಂಡ್. ತೊಂದರೆ ಇಲ್ಲತಂವ ಈ ಲೋಕತ್ ದಾರೂ ಇಲ್ಲೆ. ನ್ಯೂನತೆ ಇಲ್ಲತ ಸ್ನೇಹಿತ ಬೋಂಡಿಕೆ ನಂಗ ಒಂಟಿಯಾಯಿತೇ ಇರಂಡು. ಜನಡಲ್ಲಿ ತಪ್ಪು ಉಂಡೇಂಗೂ, ಅದ್‌ನ ಕಂಡಕೂೞ ಸ್ನೇಹಿತಂಗ ಎಣ್ಣ್‌ಕ ಚೆನ್ನಮಟ್ಟಿಕೆ ಕಂಡಿತೂ ಕಾಣತನ್ನೆಕೆ ಇರಂಡಿಯಾಪ. ನಂಗಡ ಈ ತಪ್ಪು ಉಂಡೇಂಗೂ ನಂಗಡ ಮೇಲೆ ನಂಗಕ್ ಪ್ರೀತಿ, ಮೋಹ ಇಪ್ಪಬ್ಚಕ್ ಕುರುಡಂಗಾಪ. ಅನ್ನನೆ ಇಞ್ಞೊಬ್ಬಂಡ ತಪ್ಪು, ನ್ಯೂನತೆರ ವಿಚಾರತೂ ಚೆನ್ನ ಮಟ್ಟಿಗೆ ಕುರ್‌ಡ್ ಕಣ್ಣ್ ಇಪ್ಪದ್ ನಲ್ಲದ್. ಅತ್ಯವಶ್ಯ ಕೂಡಾ.

## ಸುಖಕ್ ಕಾರಣ ಪ್ರೀತಿ

ಪ್ರೀತಿ, ಮಮತೆ ಲೋಕತ್‌ರ ಸಾರ, ಶಕ್ತಿ. ಪ್ರೀತಿ ಪ್ರೇಮ ಇಲ್ಲತ ಜೀವನ, ಕುಟುಂಬ ಸಾರ ಇಲ್ಲತದ್. ಪ್ರೀತಿ ಪ್ರೇಮ ಇಲ್ಲತ ದೇಶ ಓರ್ ತೂಟ್‌ಂಗಳ. ಚುಮ್ಮಿ ಕುಞಿ ಅವ್ವಂಡ ಪ್ರೀತಿ, ಮಮತೆನ್ನುಂಡ್ ಬೋಳೆವ. ಮನುಷ್ಯಂಡ ಜೀವನ ಬೊರೀ ಪ್ರೀತಿ ಮಮತೆನ್ನುಂಡೇ ಸಾಧ್ಯ. ಮನುಷ್ಯನೇ ಅಲ್ಲ ಉಲಗತ್‌ರ ಪ್ರಾಣಿ, ಪಕ್ಷಿ, ಕೂಡ ಪ್ರೀತಿ ಮಮತೆಕ್ಕಾಯಿತ್ ಪೇಚಾಡುವ. ಎತ್ತ್‌ಡ ಮೇಲ್‌ನ ಕೈಲ್ ಮಿನ್‌ಕಿತ್ ತ್‌ೞಂಡ್‌ನಕ ಅದ್ ಕಣ್ಣ್ ಮುಚ್ಚಿತ್ ಕುಶಿ ಪಡುವ, ತೆಳ್‌ಚಂಡ್ ವಿನಯತ್ ನಾಯಿನ ಪೆದ ಪುಡಿಚಿ ಕಾಕ್‌ನಕ ಅದ್ ಕುಶೀಲ್ ಬಾಲ್ ಆಟಿಯಂಡ್ ತಾಂಡ ಕುಶಿನ ಕಾಟುವ. ಪ್ರಪಂಚತ್ ಮನುಷ್ಯ, ಪ್ರಾಣಿ, ಪಕ್ಷಿ ಎಲ್ಲಾ ಪ್ರೀತಿಕ್ ಮಂಡೆ ಕುಂಬ್‌ಡುವ. ಲೋಕತ್ ನಂಗಡ ಜೀವನಚಕ್ರ ನಯ ವಿನಯತ್ ಸುತ್ತ್ಂಡಿಕೆ ಮಮತೆ, ಪ್ರೀತಿರ ಎಣ್ಣೆ ಪ್ರತೀ ಹೃದಯತ್ ಧಾರಾಳವಾಯಿತ್ ಒಕ್ಕಂಡು. ಅನ್ನನ್ನಾಚೇಂಗಿ ನಂಗಡ

ಜೀವನವೇ ಅಲ್ಲ. ಸರ್ವ ಜೀವಿಯಡ ಜೀವನ ಸುಖಕರ ಆಪ. ಪ್ರೀತಿಯೇ ಸುಖಕ್ ಕಾರಣ.

## ಗೇನ ಮಾಡಿ

ನಂಗಡ ಮನಸ್ಸ್‌ಕ್ ಮುದ ತಪ್ಪಂತ ಪಾಟ್‌ನ ಓರ್ ಪಾಟ್‌ಕಾರ ಪಾಡಿತ್ ನಿಪ್ಪ್‌ಚಿಟ್ಟತೇಂಗೂ ಆ ಸಂಗೀತತ್‌ರ ಸ್ವರ ನಂಗಡ ಮನಸ್ಸ್‌ಲಿಪ್ಪ. ಸುವಾಸನೆ ತಪ್ಪ ಮಲ್ಲಿಗೆ ಪೂವ್ ಕ್ಷಣತ್ ಬಾಡಿ ಪೋಚೇಂಗೂ ಪೂವ್‌ರ ಸುವಾಸನೆನ ನಂಗ ಗೇನ ಮಾಡಿಯವಲು. ಅನ್ನನೆ ಓರ್ ಮನುಷ್ಯ ತಾನ್ ಜೀವತಿಪ್ಪಕ ತಾಂಡ ಜೀವಮಾನತ್ ಮಾಡ್‌ನ ನಲ್ಲ ಕೆಲಸಕಾರ್ಯ ಪ್ರೀತಿ, ಸದ್ಗುಣತ್ ಎಲ್ಲಾಕೂ ಬೋಂಡಿಯವನಾಪ. ಅಂತವ ಚತ್ತ್ ಪೋನಕಲೂ ಅಂವ ಮಾಡ್‌ನ ನಲ್ಲಾಮೆನ ನಂಗ ಮರೆವುಲೆ. ನಲ್ಲವಂಡ ನಲ್ಲ ಕೆಲಸತ್‌ನನ್ನಕೇ ಕೆಟ್ಟವಂಡ ಕೆಟ್ಟಗುಣ, ಕೆಲಸ, ಅದೂ ನಂಗಕ್ ಮರೆವಕಯ್ಯುಲೆ.  ಪ್ರಖ್ಯಾತಿನನ್ನಕೆ ಅಪಖ್ಯಾತಿ ಕೂಡ. ಹೋಮತ್‌ರ ವಾಸನೆನನ್ನಕೇ ಚುಟ್ಟಾಂಡ ವಾಸನೆ ಕೂಡ. ನಲ್ಲದಾಡ್ ಕೆಟ್ಟದಾಡ್. ಜನಡ ಮನಸ್ಸ್‌ಲ್ ಶಾಶ್ವತ. ಆನಗುಂಡ್ ನಂಗ ಗೇನ ಮಾಡಂಡು, ನಲ್ಲದ್ ಮಾಡಂಡಿಯದಾ, ಕೆಟ್ಟದ್ ಮಾಡಂಡಿಯದಾ ?

## ಗುಣ ಬಲಿಯಾಪಕಾಗ

ಮಳ್‌ಂಜಿಕ್ ಅಂಟಿ ಪೋನ ಒಲ್‌ಂಜಿ ಪಾರುವಕಯ್ಯತೆ ಅಲ್ಲಿಯೆ ಚಾವ. ಪಣಕ್ ಅಂಟಿಯಂಡ ಮನುಷ್ಯಂಡ ಜೀವವೂ ಅನ್ನನೆ. ಬುಡ್‌ಗಡೆ ಇಲ್ಲೆ. ಪಣತ್‌ನೇ ಪುಡ್‌ಚವಂಡ ಮನಸ್ಸ್‌ಕ್ ಬೋರೆ ಏದೂ ವಿಚಾರ ಬಪ್ಪ್‌ಲೆ. ತಾಂಡ ಪಣ ಸಂಪತ್‌ರ ನಲ್ಲ ಪ್ರಯೋಜನ ಗೊತ್ತಿಲ್ಲತವಂಡ ಬಾಳ್ ಬೀವದಿಲ್ಲೆ. ಪಣರಾಶಿ ಕಂಡ್ ನಲ್ಲಜನ ಕೀಂಜಿಪೋಪ. ಪಣತ್‌ರ

ಪುಚ್ಚಿವುಳ್ಳವಂಗ್ ನೀತಿ, ನೇಮತ್‌ರ ಮಹತ್ವ ಗೊತ್ತಾಪುಲೆ. ಜೀವನಕ್, ಜೀವಮಾನಕ್, ಬದ್‌ಕಿ ಬಾಳುವಕ್ ಬೋಂಡಿಯಚ್ಚಕ್ ಪಣ, ಅನುಕೂಲ ಬೋಂಡುವೇ ಬೋಂಡು. ಪಣತ್‌ರ ಪ್ರಯೋಜನ, ನಲ್ಲ ಕಾರ್ಬಾರ್ ಮುಖ್ಯ. ಪಣ ನಲ್ಲಾಂಗ್ ಕರ್ಚಾಯಂಡಿಕ್ಕಂಡು ಬೆವರ್ ಮೇಲ್‌ಲ್ ಒಕ್ಕಿಯಂಡಿರಂಡು. ಅದ್ ನಿಂದ್ ಪೋಚೇಂಗಿ ಕಷ್ಟ ಉಂಡ್. ಪಣ ಕೊಡ್‌ತಿತ್ ಎಡ್‌ಪ ಕಯ್ಯತ ವಸ್ತುವೂ ಉಂಡ್. ಅದೇ ಗುಣ, ಪಣ ಕೊಡ್‌ತಿತ್ ಎಡ್‌ತವಂತದ್ ಉಂಡೇಂಗೂ ಕ್ರಯ ಕೊಡ್‌ತಕೊ ಕ್‌ಟ್ಟತಂತಾನ ಬಲಿ ಕೊಡ್‌ಪಕ್ಕಾಗ. ಪಣ ಬಲ್ಯದಲ್ಲ, ಗುಣ ಬಲ್ಯದ್.

## ಆದರ್ಶ ಬಾಳ್ ನಲ್ಲದ್

ಮರ ಆಕಾಶ ಎತ್ತರಕ್ ಬೊಳ್‌ಂದ್ ನಿಕ್ಕು. ಇರ್‌ನೂರ್ ಮುನ್ನೂರ್ ಕಾಲ ಬದ್‌ಕು. ಇಚ್ಚಕ್ಕಾಚೇಂಗೂ ಒರ್‌ದಿನ ಒಣಂಗಿ ತೋಣೆಯಾಯಿತ್ ಬುದ್ಧಿತ್ ಮಣ್ಣ್‌ಪಾಲಾಪ. ಅಂದಕ ಈ ಇರ್‌ನೂರ್ ಮುನ್ನೂರ್ ಕಾಲ ಬದ್‌ಕಿತ್ ಮಾಡ್‌ನ ಸಾಧನೆ ಎಂತ ? ಬಲ್ಯತನ ಎಂತ ? ಆಚೇಂಗಿ ಸುವಾಸನೆ ದುಂಬ್‌ನ ಓರ್ ಪೂವ್ ಪೊಲಾಕ ತೆಳಿಚಂಡ್ ಬೀರುವ, ಸುವಾಸನೆನ ತಪ್ಪ, ತಾಂಡ ಚಾಯಿ, ಚಂದ, ಸುವಾಸನೆನ ಸುತ್ತಲೂ ಹರಡುವ ಜನ ಕುಶಿಪಡುವ, ಚೂಡಿಯವ. ಮರತ್‌ರ ಬಾಳ್ ಎಚ್ಚಕೋ ಕಾಲ ಪೂವ್‌ರ ಬಾಳ್ ಒರ್ ದಿನವೂ ಇಪ್ಪಕ್ಕಿಲ್ಲೆ. ಆಚೇಂಗಿ ಪೂವ್‌ರ ಬಾಳ್ ಓರ್ ಸಾಧನರೆ ಬಾಳ್. ಅನ್ನನೇ ಮನುಷ್ಯ ತಾಂಡ ಒರೇ ದಿನತ್‌ರ ಬಾಳಾಚೇಂಗೂ ಪೂವ್‌ರ ಕಂಪು ತಂಪುನನ್ನಕೆ ಅಮರವಾಯಿತ್ತಿಕ್ಕಂಡು. ಜೀವನತ್‌ರ ಗುರಿ ನೂರ್ ಕಾಲ ಬದುಕುಲೆ. ಬಾಳಿ ಬದ್‌ಕ್‌ನಚ್ಚಕ್ ದಿನ ಓರ್ ಆದರ್ಶ ಜೀವಿಯಾಯಿತ್ ಬಾವಂಡು.

## ಪೆದ ಪಾಳ್ ಮಾಡುವಂವ ಕ್ರೂರಿ

ಕಪ್ಪದ್, ಸುಲಿಗೆ, ಮೋಸ ಎಲ್ಲಾ ಕೆಟ್ಟಬಾಲ್‌ಂದ್ ಎಲ್ಲಾಕೂ ಗೊತ್ತ್. ಓರ್ ದೃಷ್ಟಿಲ್ ನೋಟ್‌ನಕ ಕಳ್ಳತನತ್ ಒಬ್ಬಂಗ್ ನಷ್ಟ ಆಚೇಂಗೂ, ಇಞ್ಞೊಬ್ಬಂಗ್ ಲಾಭ. ಆಚೇಂಗಿ ಒಬ್ಬ ಇಞ್ಞೊಬ್ಬಂಡ ಪೆದಕ್, ನಲ್ಲರಿಕೆಕ್ ಕೆಟ್ಟಪೆದ ಮಾಡುವದ್ ಪ್ರಯತ್ನ ಪಡುವದ್ ಕೊಲೆ, ಸುಲಿಗೆಕಾರಕ್ಕಂಜಿ ಹೀನ. ಕೆಟ್ಟಪೆದ ಎಡ್‌ತವಂಗ್ ಜೀವಮಾನ ಇಡೀ ಕೆಟ್ಟಪೆದ ನಿಪ್ಪ. ಕಾರಣ ಆನವಂಗ್ ಏದ್ ಲಾಭವೂ ಇಲ್ಲೆ. ನಂಗಳ ದರೋಡೆ ಮಾಡಿತ್ ಕೋತಿಯಂಡ್ ಪೋಪದ್ ಓರ್ ಭಯಂಕರ. ಪಣ, ಐಶ್ವರ್ಯಕ್ಕಂಜಿ ಬೆಲೆವುಳ್ಳ ಮಾನ, ಮರ್ಯಾದಿ, ಕೀರ್ತಿಕ್ ಮಸಿ ತೇಪ ಕಾರ್ಯ. ಆನಗುಂಡ್ ಜೋಬ್ ಕಪ್ಪವನ ಸಹಿಸಲು, ಮರ್ಯಾದೆ, ಮಾನ ಪಾಳ್ ಮಾಡುವವನ ಸಹಿಸುವಕ್ಕಾಗ.

## ಪಣಕ್ಕಂಜಿ ಪೆದ ಬಲ್ಯದ್

ನಂಗ ಬದ್‌ಕಿತ್ತಿಪ್ಪಲ್ಲಿ ಕೆತ್ತನೆ ನಲ್ಲವೂಂದ್ ಎಣ್ಣ್‌ಚಿಟ್ಟವ ಕೈಯ್ಯತಂತ ಗರೀಬತನತ್ ದಾರೂ ಪುಟ್ಟಿತ್ತಿಪ್ಪ್‌ಲೆ. ಕೈಕಾಲ್ ಗಟ್ಟಿವುಳ್ಳವು ಗರೀಬಳಲ್ಲ. ಗರೀಬತನ ಸ್ವಾಭಾವಿಕ. ಕೊಳಕ್ ಬಡತನ ಬಕ್ಕು, ಮೇಲ್‌ರ ಬಟ್ಟೆಕ್ ಬಡತನ ಬಕ್ಕು, ಇಪ್ಪಕ್ ಮನೆಕ್ ಬಡತನ ಇಕ್ಕು. ಆಚೇಂಗಿ ಮನುಷ್ಯಂಡ ನಾವುಕ್ ಬಡತನ ಉಂಡಾ ? ನಾವು ಏದ್ ಕಷ್ಟತೂ ಸತ್ಯಪರೆವಲು, ಎಂತಾ ದುಃಖತೂ ಪ್ರೇಮತ್‌ರ ತಕ್ಕ್ ಪರೆವಲು. ಪಣಕಾಸಿಲ್ಲತವು ಜೀವನ ದೃಷ್ಟಿಲ್ ಗರೀಬ ನೇರಾಯಿತಿಕ್ಕು. ಆಚೇಂಗಿ ನೀತಿ-ಗುಣ ಇಲ್ಲತಂವ ಗರೀಬಗಿಞ್ಞಿ ಗರೀಬ. ವ್ಯವಹಾರ ದೃಷ್ಟಿಲ್ ಗರೀಬನಾನಕೋ ನೈತಿಕ ದೃಷ್ಟಿ (ನೀತಿ ನಿಯಮ)ಲ್ ಅಂವ ಶ್ರೀಮಂತನೇ. ಈ ಸಾಧನೆ ಎಲ್ಲಾಕೂ ಉಂಡ್, ಇದೇ

ಜೀವನತ್‌ರ ನಲ್ಲ ಫಲತ್‌ರ ಜೀವನಕ್ ಸಾಧನೆ. ನಾವುರ ಗುಣ ಮನುಷ್ಯತ್ವಕ್ ನಲ್ಲ ಪಣ.

## ತೆಳಿರ ಭೀರ್ಯ

ಬೆವರ್‌ನ ತಡಿಕ್ ತಂಪುಗಾಳಿ ಆನಂದ ತಪ್ಪ. ಬೀಂದ ಪೂವ್‌ಕ್ ಅಲಂಕಾರ ತಪ್ಪ. ವಿನಯ ಬಲ್ಯ ಅಧಿಕಾರಿಕ್ ನಲ್ಲದ್ ಮಾಡುವ. ಅನ್ನನೆ ತೆಳಿ ಎಣ್ಣುವದ್ ಬಾಳ್‌ರ ಸುಖತ್‌ನ ಮೆಚ್ಚಿಚಿಡುವ. ತೆಳಿಯೋರ್ ಚೆರಿಯ ಗುಣಾಂದ್ ತಾತ್ಸಾರ ಮಾಡುವವೂ ಉಂಡ್. ತೆಳಿ ಜೀವನತ್ ಮಾಡುವ ಕೆಲಸ ಅಚ್ಚಿಚ್ಚಕ್ಕಲ್ಲ ಗಿಡತ್‌ರ ಬೊಳಚೆಕ್ ಸೂರ್ಯಂಡ ಕಿರಣವುಳ್ಳನ್ನಕೆ ಜೀವನಕ್ ತೆಳಿ, ತೆಳಿ ಮೂಡ್ ಎಲ್ಲಾನೋ ಗೆಲ್ಲುವ. ಚೆರಿಯ ಅಣು ಎಣ್ಣುವದ್ ಪೆರಿಯ ಸಾಧನೆ ಮಾಡುವ. ಮುಚ್ಚ್‌ನ ಪಡಿ ಕೂಡ ತೆಳಿನ್ನುಂಡ್ ತೊರಪ. ತೆಳಿರ ಶಕ್ತಿನ ಅಳ್‌ಪ ಕೈಯ್ಯಲೆ. ತೆಳಿನ್ನುಂಡ್ ದುಃಖತ್‌ನ ಮರೆವಲು. ತೆಳಿನ್ನುಂಡ್ ಕಟ್ಟೆಯಿಂಡಿಂಜ ಮೂಡ್ ಸಡ್‌ಲ ಆಪ. ಪುಡಿಚ ಪುಡಿ ಸಡಲ ಆಪ. ತೆಳಿನ ನಂಗಡ ಜೀವಮಾನತ್‌ರ ಜೊತೆಕ್ಕಾರ ಮಾಡಿಯೆಂಡತೇಂಗಿ ಜೀವನ ಆನಂದ ಆಪ.

## ತೃಪ್ತಿ ಎಲ್ಲಿ ಉಂಡ್ ?

ಜೀವಮಾನತ್‌ರ ಗುರಿ ಸುಖತ್‌ನ ತೇಡುವದ್. ಪ್ರತೀಯೊಬ್ಬನೂ ಸುಖತ್‌ನ ಬಯಂದವವು. ಚಾಯಿಲ್ ಸುಖಾಂದ್ ಆಂಡಬಯ್ಯ, ಐಶ್ವರ್ಯಲ್ ಸುಖಾಂದ್ ಆಂಡ ಬಯ್ಯ, ಅಧಿಕಾರತ್ ಸುಖಾಂದ್ ಆಂಡಬಯ್ಯ, ಕೀರ್ತಿ ಪೆದತ್ ಸುಖಾಂದ್ ಆಂಡಬಯ್ಯ. ಇಂತಾ ಸುಖತ್‌ರ ಬಯ್ಯ ಬಯ್ಯ ಕಳಿಪಾನಗುಂಡ್ ನಂಗಡ ಸುಖ ಬಯ್ಯಲಾಯಿತೇ ಪೋಪ. ಇದ್‌ಲೆಲ್ಲಾ ಸುಖ ಇಲ್ಲೇಂದ್ ಗೇನ ಬಕ್ಕಣೆ ಚಾವ ವಯಸ್ಸ್ ಬಪ್ಪ. ಅತೃಪ್ತಿಲೇ ಚಾವದೂ ಉಂಡ್. ಈ ಮನುಷ್ಯ ಕಥೆ ಪುಟ್ಟ್‌ನಲ್ಲಿಂಜಿ ನಡಂದ್

ಬಂದದ್. ಸುಖ ದುಃಖ ಓರ್ ಚಕ್ರ ಉರ್‌ಂಡುವೆನ್ನಕೆ. ಸುಖಕ್ ಬಟ್ಟೆ ಸುಲಭ. ಪೊನ್ನ್‌ನ ತೇಡಿಯಂಡ್ ಭೂಮಿ ರೊಳ್‌ಕ್ ಇಳ್‌ಂಜೆನ್ನೆಕೆ, ಮುತ್ತ್ ರತ್ನಕ್ಕಾಯಿತ್ ಸಮುದ್ರತೊಳ್‌ಕ್ ಮುಜುವನ್ನನೆ ಕಷ್ಟ ಇಲ್ಲೆ. ಶಿಸ್ತ್‌ರ ಜೀವನ, ಸಹಾಯ ಮಾಡುವ ಜೀವನ, ತಾಂಡ ಕೆಲಸತ್‌ನ ಯೋಗ್ಯವಾಯಿತ್ ಮಾಡಿತ್‌ಪ, ಕಂಡದ್ದೆಲ್ಲಾ ಬೋಂಡು ಎಣ್ಣುವಾನ ಬುಡುವ ಸಮಾಜ ಸಂಬಂಧ, ವ್ಯಕ್ತಿ ವ್ಯಕ್ತಿಲ್ ಸ್ನೇಹ ಇದೇ ತೃಪ್ತಿ, ಇದೇ ಸುಖ ಶಾಶ್ವತ.

## ಇರ್‌ಟ್‌ರ ಬಟ್ಟೆ

ಎಲ್ಲಿಕೂ ಎತ್ತುವಕ್ಕಾಗ, ಏದ್ ಗುರಿನೋ ಮುಟ್ಟುವಕ್ಕಾಗಾಂದಾನಕ ರಾಜಕಾರಿಣಿ ಆಂಡು. ಜನಡ ಬಯ್ಯತೇ ಇರಂಡು. ಜನಡ ಅಭಿಮತ್‌ನನ್ನೆಕೆ ನಡ್‌ಪಿ ಎಣ್ಣುವದ್ ಓರ್ ಪುಚ್ಚಿಕಲ್ಪನೆ. ಪ್ರತೀಯೊಬ್ಬಂಗೂ ಬೋರೆ ಬೋರೆ ಮೂಡ್ ಇಪ್ಪನ್ನೆಕೆ ಅಭಿಪ್ರಾಯವೂ ಬೋರೆ ಬೋರೆ. ಜನಡ ಬೋರೆ ಬೋರೆ ಅಭಿಪ್ರಾಯತ್‌ನ ಅನುಕರಣೆಕ್ ಪ್ರಯತ್ನ ಪಡುವದ್ ನಂಗಳ ಎಲ್ಲಾಗುರಿಕೂ ಮುಟ್ಟ್‌ಚಿಡುಲೆ. ಅನಗುಂಡ್ ತಾಂಡ ಸ್ವಂತ ಬುದ್ಧಿ, ಪೊನ್ನ್ ಬುದ್ಧಿ, ಎಣ್ಣುವ. ಜನಡ ತಕ್ಕ್ ತರಾವರಿ ಬಟ್ಟೆ ಉಳ್ಳೆನ್ನಕೆ. ಎಲ್ಲಾ ಬಟ್ಟೆಲ್ ಒಬ್ಬ ನಡ್‌ಪ ಕಯ್ಯುಲೆ. ಮನುಷ್ಯ ಪೆರ್ಥ್ ಸ್ವಾರ್ಥಿ ಅನಗುಂಡ್ ತಾಂಡ ನಲ್ಲಾನ ಗೇನ ಮಾಡಿಯೆಂಡೇ ತಕ್ಕ್‌ಪರೆವ. ಬಲ್ಯಯೆಂಡ ಇಂತಾ ತಕ್ಕೇ ಲೋಕಾಭಿಪ್ರಾಯ ಆಯಿಪೋಪ. ಇನ್ನತ ಲೋಕಾಭಿಪ್ರಾಯತ್ ನನ್ನಕೆ ನಡ್‌ಪದ್ ಕರ್ತಬಾವುಲ್ ಕಾಡ್‌ರೊಳ್‌ಲ್ ಬಟ್ಟೆ ತೇಡಿಯಂಡ್ ನಡ್‌ಪನ್ನೆಕೆ ಆಪ. ಸ್ವಂತ ಕೆಲಸ, ನಲ್ಲ ಕೆಲಸ, ತಾಂಡ ಕೆಲಸ, ತಾಂಡ ಸ್ವಂತ ಅಭಿಪ್ರಾಯತೇ ಇರಂಡು.

## ಕರ್ಮ ಮಾಡಿಯೊಂಡಿರಂಡು

ಪೊನ್ನಾಚೇಂಗೂ ಸದಾ ಉಪಯೋಗ ಮಾಡತ ಪೋಚೇಂಗಿ ತಾಂಡ

ಕಾಂತಿನ ಚೆನ್ನಮಟ್ಟ್ಗೆ ಕಳ್‌ಂದವ. ಎಚ್ಚಕೇ ಗೆಟ್ಟಿಯಾನ ಇರ್‌ಂಬಾಡ್ ಉಪಯೋಗ ಮಾಡತೇ ಬೆಚ್ಚಕ ಕಿಲ್‌ಂಬ್ ಪುಡಿಪ. ಅನ್ನನೆ ಎಚ್ಚಕೇ ವಿದ್ಯಾವಂತನಾಡ್, ಬುದ್ಧಿವಂತನಾಡ್, ಚುರುಕ್‌ಕಾರನಾಡ್ ಅಂವ ಸೋಮಾರಿ ಆಚೇಂಗಿ ಅಂವ ಮೂಲೆ ಕೂಡಿತ್ ಪೊದ ಇಲ್ಲತೆ ಅಧೋಗತಿಕ್ ಬೂವ. ನಂಗಡಲ್ಲಿ ಚುರುಕ್ ಬುದ್ದಿರ ಜನ ದುಂಬಾ ಉಂಡ್. ಒಂದಾತ್ ಪತ್ತಿರುವದ್ ವಿಷಯತ್‌ನ ಅರಿಂಜವ ಬುದ್ಧಿವಂತಂಗಳೂ ಇಕ್ಕು. ಆಚೇಂಗಿ ಅವು ಸದಾ ಸೋಮಾರಿಯಾಚೇಂಗಿ ಅವಂಡ ಪಡಿಪು ವ್ಯರ್ಥ. ಸಮಯ ಅರ್‌ಂಜಿತ್, ಬುದ್ಧಿ ಉಪಯೋಗ ಮಾಡಿತ್ ಜನಕ್ ನಲ್ಲವನಾಯಿತ್ ಬದ್‌ಕುವವನೇ ಕರ್ಮಯೋಗಿ. ಲೋಕತ್ ಏದ್ ಪಡಿಪೂ ತಾಂಡ ಕರ್ಮತ್‌ರ ಮೇಲೆ ತಾಂಡ ಕರ್ಮತ್ತುಂಡ್.

## ಪಣಿಲ್ ಆಲೋಚನೆ ಇರಂಡು

ನಲ್ಲದಾ ಕೆಟ್ಟದಾ ಎಣ್ಣುವ ಆಲೋಚನೆಯಿಲ್ಲತ ಪಣಿ, ಕಾಲ ಸ್ಥಿತಿನ ಅರಿಯತ ಪಣಿ ಪಾಳ್ ಪಣಿ. ನಲ್ಲ ಬೇನಿಲ್ ನೀರಿಲ್ಲತೆ ಬೇಲ್ ನಡ್‌ಪಾತ್ ಎಂತ ಪ್ರಯೋಜನ ? ಎಂತ ಲಾಭ ? ಓರ್ ಉರ್‌ಪಿಯತ್ ಆಪ ಪಣಿನ ಪತ್ತ್‌ಉರ್‌ಪಿಯ ಖರ್ಚಿಮಾಡುವದ್ ಬುದ್ಧಿವಂತಿಕೆಯಾ ? ಸುಲಭತಾಪಾಂಗ್ ಮಂಡೆ ಪೊಜ್ಜಿ ಕಳಿಪ ಎನ್ನಂಗ್ ? ಶ್ರಮ ಎಚ್ಚಕ್ ಬೋಂಡು ವೋ ಅಚ್ಚಕ್ಕಾನೇ ಖರ್ಚಿ ಮಾಡಂಡು. ಮನುಷ್ಯ ಚೆಡಿ ಮಾಡಿಯಂಡ್ ಮೂಡ್ ಕರ್ಪ್‌ಚಿಟ್ಟಂಡ್ ಕಳಿಪಕ ಅವಂಡ ತಡಿಲುಳ್ಳ ನುಪ್ಪತ್ತ್‌ನಾಲ್ ಸ್ನಾಯು ಕೆಲಸ ಮಾಡುವಚ್ಚಕ್ ಶಕ್ತಿ ಪಾಳಾಪ. ಇದ್‌ಲ್ ಬಪ್ಪಲಾಭ ಎಂತ ? ವಿರೋಧ, ಜಗಳ. ಆಂಡ ಬದಲ್ ಬುದ್ಧಿವಂತಿಕೆಲ್, ತೆಳಿ ಮೂಡ್‌ಲ್ ಕೆಲಸ ಮಾಡುವಕ ಬರೀ ಪದಿಮೂಂದ್ ಸ್ನಾಯು ಮಾತ್ರ ಕೆಲಸ ಮಾಡುವ. ನಂಗಡ ಶಕ್ತಿ ಮಿಂಚುವ. ಆಂಡ ಪ್ರತಿಫಲ - ಸ್ನೇಹ, ಪ್ರೀತಿ. ಆನಗುಂಡ್ ಪಣಿಲ್ ನಲ್ಲ

ಆಲೋಚನೆ ಇರಂಡು. ಇಲ್ಲೇಂಗಿ ಒಡ್ಂದ ಕುಡಿಕೆಲ್ ನೀರ್ ದುಂಬ್‌ಚಿಟ್ಟನ್ನಕೆ.

## ನೈಪು ಬೋಂಡು

ಸಮಧಾನ, ಸಹನೆ, ನೈಪು ಉಂಡೇಂಗಿ ಮನುಷ್ಯಂಗ್ ಅಸಾಧ್ಯ ಎಣ್ಣುವದೇ ಇಲ್ಲೆ. ಪುಟ್ಟ್‌ನಲ್ಲಿ ಮನುಷ್ಯ ಸಹಾಯ ಇಲ್ಲತೆ ಬುದ್ದಂಡಲ್ಲಿ ಬುದ್ಧಿತ್ತಿಪ್ಪ. ಆಚೇಂಗಿ ತಾಂಡ ಸ್ವಂತ ಸತತ ಪ್ರಯತ್ನತ್ ಉರ್ಂಡಾಡಿ, ಬುದ್ದಿತ್, ಎದ್ದಿತ್ ನಡ್‌ಪಕ್ ಪಡಿಪ. ತೊದಲಿಯಂಡ್ ತಪ್ಪು ತಪ್ಪು ಎಣ್ಣಿಯಂಡ್ ತಕ್ಕ್ ಪರೆವಕ್ ಪಡಿಪ. ಸತತ ಪ್ರಯತ್ನವೇ ಅವನ ಬೊಳ್‌ತುವ. ಇನ್ನನೆ ಚೆರ್‌ಜನೆ ಸುರು ಆಪಂಜಿ ಸತತ ಪ್ರಯತ್ನತ್ ಸಾರ್ಥಕತೆ ಪಡೆವ. ಮಳೆ ತುಳಿಯಾಯಿತ್ ಬೂವಂಜಿ ಪ್ರಳಯ ಮಾಡಿರುವ. ಒರೋರಂದ್ ಗಿಡ ಬೊಳಂದಂಡ್ ಬಲ್ಯ ಬಲ್ಯ ಕಾಡಾಪ. ಓರಂದ್ ವಾಕ್ಯ ಕೂಡ್‌ನಕ ಕಾದಂಬರಿ ಆಪ. ಓರೋರ್ ಮೊಟ್ಟ್‌ಟ್ಟಿಕ ಕೊಡಿಕೆತ್ತಲು. ಒಮ್ಮಕೇ ಕೊಡಿಕ್ ಪೋಪಕಯ್ಯುಲೆ. ಓರಂದೇ ಮೊಟ್ಟ್ ಇಟ್ಟಿತ್ ನಡ್ಂದಕ ಎಚ್ಚಕೋ ಮೈಲ್ ನಡಕಲು. ಅನ್ನನೆ ಸತತ ಯತ್ನ, ಸಮಧಾನ, ಸಹನೆಲ್ ಮಾತ್ರ ಮನುಷ್ಯ ಬಲ್ಯರಿಕೆಕ್ ಎತ್ತಲು.

## ಸತ್ಯವೇ ಜಯ

ಇಡೀ ಉಲಗತ್‌ನೇ ಕಮಂಜಿಯವಂತಾ ಇರ್‌ಟಾನಕೋ, ಆ ಇರ್‌ಟ್ ಮಿನ್ನ ಪುಳುರ ಬೊಳಕ್‌ನ ಕೆಡ್‌ತುವ ಕಯ್ಯಲೆ. ಎಚ್ಚಕೇ ಇರ್‌ಟ್ ಆಚೇಂಗೂ ಚೆರಿಯೋರ್ ಬೊಪ್ಪುರ ಕಿರಣತ್‌ನ ನಾಶ ಮಾಡುವ ಕಯ್ಯುವ. ಮೇರು ಪರ್ವತತ್ ಎತ್ತರತ್‌ರ ಅನ್ಯಾಯ, ಅನಾಚಾರ, ಅಕೃತ್ಯ, ಅಸತ್ಯ ಕೂಡಾ

ಚೆರಿಯೋರ್ ಸತ್ಯ ಎಣ್ಣುವ ಬೊಪ್ಪುನ ಮರೆ ಮಾಡುವ ಕಯ್ಯುಲೆ. ಸತ್ಯತ್‌ರ ಅಡಿಕಲ್ಲ್‌ಲ್ ನಿಂದ ನಲ್ಲ ಕೆಲಸ ನಲ್ಲ ಫಲ ತಪ್ಪದೇ ಅಲ್ಲತೆ ಆ ಫಸಲ್‌ನ ಏದೇ ತರತ ಪೊಟ್ಟ್‌ತಕ್ಕೂ ಸತ್ಯತ್‌ನ ನಾಶ ಮಾಡುವಕ್ಕಾಪ್‌ಲೆ. ಅಸತ್ಯತ್ ನಿಂದದೆಲ್ಲಾ ಪಾಳಾಪಂತದ್. ಆಂಗ್ ಉಳಿಕಾಲ ಇಲ್ಲೆ. ಚೆರಿಯೋರ್ ಕಲ್ಲ್‌ರ ಮೇಲೆ ಆಳೆತ್ತರಕೆತ್ತಣೆ ಬೂವಂಜಿ ಮುಚ್ಚಿಪೋಕು. ಕರೀತ್ ಒಕ್ಕಿಪೋಪ ಕೆತ್ತೆ ಇಂದಲ್ಲ ನಾಳೆ ಮಾಯ ಆಪ. ಕಡೇಕ್ ಗೇರಾನ ಕಲ್ಲೇ ಶಾಶ್ವತವಾಯಿತ್ತಿಪ್ಪ. ಅನ್ನನೇ ನೂರ್ ಪೊಟ್ಟ್ ಪರೆವಂಜಿ ಸತ್ಯತ್‌ನ ಮರೆವನ್ನೆಕೆ ಪ್ರಯತ್ನ ಪಡಲು ಆಚೇಂಗಿ ಸತ್ಯ ಸತ್ಯವಾಯಿತೇ ಉಳಿವ.

## ಅದೃಷ್ಟವಂತ

ನಲ್ಲಗುಣತ್‌ರ ಗಣಿಯಾನ ಅವ್ವ, ಆರೋಗ್ಯವುಳ್ಳ ತಡಿ, ಸದಾ ಕೆಲಸ ಮಾಡಂಡೂಂದ್ ಮನಸ್ಸ್, ಎಚ್ಚಕೇ ಕಷ್ಟಬಾತೇಂಗೂ ನಿಕ್ಕತ ಉತ್ಸಾಹ, ಎಂತೇಂಗಿ ಬರಡ್ ಗುರಿ ಮುಟ್ಟಿತೇ ಮುಟ್ಟುವಿ ಎಣ್ಣುವ ಧೃಡತೆ, ತೆಳಿಚಂಡಿಪ್ಪ ಸ್ವಭಾವ, ನಲ್ಲ ಗುರಿ ಇವೆಲ್ಲಾವುಳ್ಳ ಮನುಷ್ಯಂಗ್‌ಂಜಿ ಮೀತ ಅದೃಷ್ಟಶಾಲಿ ಲೋಕತ್ತಿಲ್ಲೆ. ಈ ಕೊಡಿರ ಎಲ್ಲಾ ಗುಣತ್‌ನೋ ನಂಗ ಪಡೆವಲು, ಆಚೇಂಗಿ ನಲ್ಲ ಗುಣವುಳ್ಳ ಅವ್ವನ ಪಡೆವದ್ ಮಾತ್ರ ನಂಗಡ ಕೈಲಿಲ್ಲೆ. ಬಾಕಿ ಉಳ್ಳಾನ ನಂಗ ನಂಗಡದಾಯಿತ್ ಮಾಡಿಯುವ ಶಕ್ತಿ ಉಂಡ್. ಆನಗುಂಡ್ ಅದೃಷ್ಟ ನಂಗಡ ಕೈರೊಳ್‌ಲಿಪ್ಪ ವಸ್ತು. ಸತತ ನಲ್ಲಾನ, ಕೆಟ್ಟಾನ ಆಲೋಚನೆ ಮಾಡುವಂವ, ನಲ್ಲ ಆಲೋಚನೆ ನನ್ನೆಕೆ ನಲ್ಲಾಮೆ ಉಳ್ಳಂವನ, ಸತತ ಎಚ್ಚರಕ್ ವರ್ತನೆ ಮಾಡುವವನ ಅದೃಷ್ಟ ತಾನಾಯಿತೇ ತೇಡಿಯಂಡ್ ಬಪ್ಪ. ಆರಾಂ ಕುರ್ಚಿಲ್ ವರಿಯಂಡ್ ಇಪ್ಪಂತಾ ಆಲಸ್ಯ ಸ್ವಭಾವಕಾರನ ಅದೃಷ್ಟ ತೇಡುಲೆ. ಅದೃಷ್ಟ ಎಣ್ಣುವಂಜಿ ಆಲಸ್ಯತ್ತಿಪ್ಪಕ್ಕಾಗ ನಲ್ಲ ನೈಪು ನೈಕಂಡು.

# ಬುದ್ದ ಪಲ್ಲ್ ಕಡಿಪ್ಲೆ

ಇದ್ ನಾಡ ಸ್ವಂತ ಜೀವನ. ನಾನ್ ಎನ್ನನೆಯೂ ಬದುಕುವಿ, ನನ್ನ ಕೇಪವು ದಾರ್ ? ಎಣ್ಣುವಂತ ಮನುಷ್ಯಂಗಳೂ ಉಂಡ್. ಮನುಷ್ಯ ಸಂಘ ಜೀವಿ. ಅವಂಡ ಸ್ವಭಾವ ಕೊರಿ, ಆಡ್, ಎತ್ತ್, ಆನೆನನ್ನೆಕ್ಕಲ್ಲತೆ ನರಿ, ಸಿಂಹಗಳನ್ನಕ್ಕೆಲ್ಲ. ತಾಂಡ ಆತ್ಮ ತೃಪ್ತಿಕ್ಕಾಯಿತ್, ಆತ್ಮತ್‌ನ ಹೊಂದಿಯಂಡ್ ಕೆಲಸ ಮಾಡಂಡೂಂದ್ ಎಣ್ಣುವದ್ ನೇರ್. ಮನುಷ್ಯ ತಾಂಡ ಆತ್ಮಕ್ ಹೊಂದಿಯಂಡ್ ನಡಪವನಾಚೇಂಗಿ ಅದ್ ಬಾಕಿ ಉಳ್ಳ ಆತ್ಮಕೂ ಸಮ್ಮತ ಆಪ, ಒರೇ ವ್ಯಕ್ತಿ ಆತ್ಮ ಪೂರಕವಾಯಿತ್ ಮಾಡ್‌ನ ಏದ್ ಕೆಲಸವೂ ಅವಂಡ ಕುಟುಂಬ, ಗ್ರಾಮ, ದೇಶಕ್ ಕೇಡಾಪಕಯ್ಯ-ಎನ್ನಂಗೆಣ್ಣಕ, ಒಂದ್ ಇಞ್ಞೊಂದಾನ ಹೊಂದಿಯಂಡಿಪ್ಪ. 'ಮನೆ' ಎಣ್ಣುವದ್ ಚೆರಿಯ ಬೊಳ್‌ಚ ಆನಕ, 'ಗ್ರಾಮ' ಎಣ್ಣುವದ್ ದೇವಸ್ಥಾನತ್‌ರ ಲಕ್ಷದೀಪ ಇಂಜನ್ನೆಕೆ. ಒಂದಾಂಡ ಬೊಳಕ್ ಇಞ್ಞೊಂದಾಂಗ್ ಪೂರಕವಾಯಿತ್ತಿರಂಡುವೇ ಹೊರತು ಮಾರಕ ಆಪಕ್ಕಾಗ. ಪೊಜ್ಜಿತೋ, ಬಲಚಿತೋ ಬುದ್ದ ಪಲ್ಲ್‌ನ ಎನ್ನನೆ ಕಡ್‌ಪ್‌ಚಿಡುವ ಕೈಯ್ಯುಲೆಯೋ ಅನ್ನನೇ ಸಮಾಜತ್‌ಂಜಿ ದೂರ ನಿಂದ ವ್ಯಕ್ತಿರ ಬಾಳ್ ಪ್ರಯೋಜನ ಆಪ್ಲೆ.

# ನೈಕಂಡು

ಮನುಷ್ಯಂಡ ತಡಿ ಚಾಯಿಲೂ, ಆರೋಗ್ಯತೂ, ಶಕ್ತಿ ದುಂಬಿತೂ ಇರಂಡಿಕೆ ತಡಿನ ಕಷ್ಟ ಪಡತಿಯೆಂಡ್ ನೈಕಂಡು. ಜ್ಞಾನ ಜಾಸ್ತಿಯಾಂಡಿಕೆ ನಿರೀಕ್ಷಣೆ ಮಾಡಿತ್ ಚಿಂತನೆ ಮಾಡಂಡು. ತಾನ್ ಆನಂದ ಪಡಂಡಿಕೆ ಇಞ್ಞೊಬ್ಬಂಗ್ ಸಹಾಯ ಮಾಡಂಡು. ಜನಕ್ ಬೋಂಡಿಯೋರ್ ಮನುಷ್ಯ ನಾಂಡಿಕೆ ತಾಂಡ ಸ್ವಾರ್ಥತ್‌ನ ತ್ಯಾಗ ಮಾಡಿತ್ ಜನಸೇವೆ ಮಾಡಂಡು. ಈ

ರೀತಿ ಪ್ರತೀ ಒಂದಾಂಗೂ ಸಂಬಂಧ, ಸಹಾಯ ಕಾರ್ಯ ಮಾಡತ ಪೋಚೇಂಗಿ ನಂಗಕ್ ಒರೂ ಪ್ರಯೋಜನ ಆಪುಲೆ. ಬೀಂದ ಪೂವ್‌ರ ಎಸಳ್‌ರ ಮೇಲೆ ಮಾತ್ರ ಮಂಜ್ ನಿಪ್ಪಂಜಿ ಅದ್‌ಂಗ್ ಕಾಂತಿ ಕೊಡ್‌ಪದಲ್ಲತೆ ಮೊಗ್ಗ್‌ರ ಮೇಲೆ ಮಂಜಿ ನಿಪ್ಪ್‌ಲೆ, ನಿಂದಕೋ ಕಾಂತಿ ಇಪ್ಪ್‌ಲೆ.

ಅದೇ ಪೋಲೆ ಮನುಷ್ಯನೂ ಕೂಡ ಸಂದರ್ಭಕ್ ಸೇರಿಯಾಯಿತ್ ನೈಕಂಡು. ಅದಿಲ್ಲತೆ, ತುರಂಡಿಯಂಡ್ ಅಳ್‌ತವಂಡ ಜೀವಮಾನ ಏದೋರ್ ಶೋಭೆನೋ ತಪ್ಪ್‌ಲೆ.

## ವಿಶ್ವಾಸ ಮುಖ್ಯ

ಪ್ರತೀಯೊಂದಾನೋ ಕಣ್ಣಾರೆ ಕಾಂಬಂಜಿ, ಕೆಮಿಯಾರೆ ಕೇಪಂಜಿ, ಕಾರಣ ಅರಿಂಜಿತೇ ನಾಡ ವರ್ತನೆ ಎಣ್ಣುವದ್ ಆಕತ ತಕ್ಕ್. ಮನುಷ್ಯಂಗ್ ವಿಶ್ವಾಸ, ನಂಬಿಕೆ ಬೋಂಡು. ವಿಶ್ವಾಸ ಇಲ್ಲೇಂಗಿ ಏದೊಂದಾನೋ ಸಾಧನೆ ಮಾಡುವ ಕಯ್ಯುಲೆ. ಸಂಶಯ ಎಕ್ಕಾಲೂ ಕೇಡ್‌ಕ್ ಬಟ್ಟೆ, ಕಣ್ಣ್‌ಕ್ ಕಾಂಬಾನ ಮಾತ್ರ ನಂಬುವೀಂದಾನಕ ನಂಗಡ ಪೆರಿಯೆಯಿನ, ಅಜ್ಜಪ್ಪಂಗಳ ನಂಗಕ್ ಕಾಂಬ ಕೈಯ್ಯುವಾ ? ಅಯಿನ ನಂಗ ಕಾಂಬ್‌ಲೆ ಎಣ್ಣಾಕ ಅವು ಇಂಜಿತ್ತಿಲ್ಲೇಂದ್ ಎಣ್ಣುವ ಕೈಯ್ಯುವಾ ? ಅವು ಇಂಜದ್ ನೇರ್ ಎಣ್ಣುವ ವಿಶ್ವಾಸ ಬೋಂಡು. ದಕ್ಷಿಣ ಧ್ರುವ, ಉತ್ತರ ಧ್ರುವ ನಂಗ ನೋಟಿತ್ತಿಲ್ಲೆ. ಅದ್ ಇಲ್ಲೇಂದ್ ಎಣ್ಣುವ ಕೈಯ್ಯುವಾ? ರೇಡಿಯೋ, ಟಿ.ವಿ., ಎನ್ನನೆ ಕೆಲಸ ಮಾಡುವಾಂದ್ ನಂಗಕ್ ಗೊತ್ತಿಲ್ಲೆ. ಆನುಂಡ್ ಅದ್ ನೇರಲ್ಲ ಎಣ್ಣುವಾ ? ಮನುಷ್ಯ ಮಾಡ್‌ನಾನೇ ನಂಗಕ್ ಅರಿಂಜವ ಕೈಯ್ಯುಲೆ, ಸೃಷ್ಟಿನ ಅರಿವದ್ ಸಾಧ್ಯ ಉಂಡಾ? ನಂಗ ನಂಗಡ ಗುರಿ ಮುಟ್ಟಂಡಿಕೆ ನಂಬಿಕೆ ಎಣ್ಣುವ ಮೊಟ್ಟ್ ಇಡತ ಪೋನಕ ನಂಗ ಎಲ್ಲಿಕೂ ಎತ್ತುವ ಕಯ್ಯುಲೆ.

# ಭಗವಂತಂಡ ಆರಾಧನೆ

ಧರ್ಮ, ವೇದಾಂತ, ಎಣ್ಣಕ ಪೂಜೆ, ಪ್ರಾರ್ಥನೆ, ಗಂಟೆ, ಜಾಗಟೆ, ಮೂಂದ್ ನಾಮ, ಜಡೆ, ಕೌಪೀನ ಅಲ್ಲ. ನಲ್ಲ ಭಾವನೆನ ಬೊಳ್‌ತಿತ್ ಮನುಷ್ಯಂಡ ಮಟ್ಟತ್‌ನ ಕೊಡಿಕ್ ಎಡ್‌ತ್ ನಿಪ್ಪ್‌ಚಿಡುವಕ್ ಸಹಾಯ ಆಪಂತದ್ದೆಲ್ಲಾ ಧರ್ಮ, ಪಿಞ್ಞ ವೇದಾಂತ. ನಲ್ಲ ವಿಚಾರತ್‌ರ ಪುಸ್ತಕ, ನಲ್ಲ ಭಾವನೆನ ಪ್ರೇರಣೆ ಮಾಡುವ ಚಿತ್ರ, ಭಾವಪೂರ್ವಕವಾನ ಸಂಗೀತ, ಕವಿತೆ ಸಹ ಧರ್ಮತ್‌ರ ಒರ್ ಭಾಗ. ಪೂಜೆ, ಪ್ರಾರ್ಥನೆ ಮಂದಿರ, ವಿಗ್ರಹ ಅಚ್ಚಿಕೇ ಅವಶ್ಯ, ನಲ್ಲ ಪುಸ್ತಕ, ನಲ್ಲ ಸಂಗೀತ, ನಲ್ಲ ಕವಿತೆ ಇಂತದ್. ಇದೆಲ್ಲಾ ಮನುಷ್ಯಂಡ ನೀತಿನ, ಸ್ವಾರ್ಥತೆನ ನಿವಾರಣೆ ಮಾಡುವದೆಲ್ಲಾ ವೇದಾಂತ. ಆನಗುಂಡ್ ಧರ್ಮದರ್ಶಿ, ಋಷಿಮುನಿನನ್ನೆಕೆ ಕಲಾಕಾರ, ಕವಿಯ ಸಹ. ಯುಗಧರ್ಮ ಎಣ್ಣಕ ಮಾನವಂಡ ನೈತಿಕತೆನ ಉದ್ಧಾರ ಮಾಡುವದ್ ಇಂತಾಂಗ್ ಸಹಾಯ ಆಪಂತದೆಲ್ಲಾ ಧರ್ಮ ಸಮ್ಮತ ಭಗವಂತಂಡ ಆರಾಧನೆ.

# ನಂಗಡ ಕರ್ಮಕ್ಷೇತ್ರ

ಈ ಲೋಕತ್ ಪುಟ್ಟ್‌ನ ನಂಗ ಈ ಮಹಿಮೆರ ಭೂಮಿಕ್ ಎಳಿಯಯಿಂಗಳಾಯಿ ತ್ತಿರಂಡು. ಉಲ್ಲಾಸ ತಪ್ಪ ತಂಗಾಳಿ, ಮೇಲ್‌ರ ರೋಮ ನಿಪ್ಪನ್ನಕೆ ಮಾಡುವ ನಿಸರ್ಗ ಸೌಂದರ್ಯ, ನಾವುಲ್ ನೀರ್ ಬಪ್ಪ್‌ಚಿಡುವಂತ ಪಣ್ಣ್‌ಫಲ, ಪಾಲ್, ನೈಯಿ, ತೇನ್, ಬೆಕ್ಕಿರ ಮೆತ್ತೆ ಇಂತಾನೆಲ್ಲಾ ಅನುಭವಿಚಿಡುವ ಮನುಷ್ಯ ಪುಣ್ಯಶಾಲಿ. ಭೂಮಿನ ಪ್ರಕೃತಿ ಎಣ್ಣುವ. ಈ ಪ್ರಕೃತಿಂಜಿ ಪಡೆವ ಸೌಭಾಗ್ಯಕ್ ನಂಗ ಪ್ರಕೃತಿಕ್ ಕೃತಜ್ಞಂಗಳಾಂಡು. ಪ್ರತಿ ದಿನ ಪೊಲಾಕ ಕಟ್ಟ್‌ಂಜಿ ಏವಕ ತಾಂಡ ಮಿಞ್ಞಲುಳ್ಳ ಭಾಗ್ಯರಾಶಿನ ಮನತ್ ನೆನತಿತ್ ಮೂಡ್‌ನ ಬೀವನ್ನಕೆ ಮಾಡಿಯಂಡ್, ಹೃದಯ ತೊರಂದಂಡ್

ಕುಶಿಲಿಪ್ಪಕ್ ಪಡಿಕಂಡು. ಇಂತಾ ಸೌಭಾಗ್ಯ ಪ್ರಕೃತಿರ ಕೊಡುಕೈರ ಪ್ರಪಂಚತ್ ತಾಂಡ ಕರ್ತವ್ಯ ಮಾಡುವ ಕರ್ತವ್ಯ ನಂಗಕ್ಕಿರಂಡು. ಇಂತಾ ಸೌಭಾಗ್ಯ ಸುಂದರ ಲೋಕತ್ ನಂಗ ಪುಟ್ಟಿತ್, ಬದ್‌ಕಿತ್ತಿಪ್ಪದೇ ಓರ್ ಭಾಗ್ಯ. ಈ ಭಾಗ್ಯರಾಶಿಯೇ ಮನುಷ್ಯಂಡ ಕರ್ಮಕ್ಷೇತ್ರ.

## ಆತ್ಮಾನಂದ

ನಾಡ ಕೆಲಸ ನಾನ್ ಮಾಡಿಯುವಿ. ನಾಡ ಕುಟುಂಬಕುಳ್ಳ ಸಂಪಾದನೆ ಮಾಡಿಯುವಿ. ನಾಡ ಪೊಣ್ಣ್ ಮಕ್ಕಳ ಚಾಯೋಡೆ ನೋಟಿಯುವಿ ಎಣ್ಣಿಯಂಡ್ ತೃಪ್ತಿ ಪಟ್ಟಿಕ ಪೋರ. ಇದೋರ್ ಸ್ವಾರ್ಥ ಜೀವನ, ಇದ್‌ಲ್ ಚೆನ್ನ ಸುಖ ಕಾಂಗು. ಆಚೇಂಗಿ ಸ್ವಾರ್ಥಕ್ಕೂ ಒರ್ ಮಿತಿ ಉಂಡ್. ನಂಗಕ್ ಸುಖ ಅಪಂತ ಸುಖ ಆಂಡಿಕೆ ಎಲ್ಲಾಕೂ ಸಮ್ಮಂಧ ಪಡುವನ್ನೆಕೆ ಏದೇಂಗೋರ್ ನಲ್ಲ ಕೆಲಸ ಮಾಡಿಯಂಡೇ ಇರಂಡು. ಏದೋರ್ ಫಲಾಪೇಕ್ಷೆಯಿಲ್ಲತೆ ಮಾಡುವ ನಲ್ಲ ಕೆಲಸತನುಂಡ್ ಸುಖ ಜಾಸ್ತಿ ಆಪ. ಮನುಷ್ಯ ಬೊರೀ ಓರ್ ಕುಟುಂಬಕ್ ಸಮ್ಮಂಧಪಟ್ಟ ವ್ಯಕ್ತಿ ಅಲ್ಲ. ಮನುಷ್ಯ ಇಡೀ ಪ್ರಪಂಚಕ್ ಅಡ್‌ಂಗ್‌ನ ವ್ಯಕ್ತಿ. ಪ್ರಪಂಚ ಎಣ್ಣುವ ಬಲ್ಯ ಸಂಸಾರತ್‌ರ ನಲ್ಲಾಮೆಕಾಯಿತ್ ತಾಂಡ ಪಾಲ್‌ರ ನಲ್ಲ ಕೆಲಸ ಮಾಡುವದ್ ನಂಗಕ್ ಆನಂದ ತಪ್ಪ. ಸಂಬಳ ಎಡ್‌ತವ ಕೆಲಸ, ಕರ್ತವ್ಯ ಸ್ವಾರ್ಥ. ಏದೋರ್ ಪ್ರತಿಫಲತ್‌ರ ಆಸೆಯಿಲ್ಲತೆ ಪ್ರೀತಿ ಪ್ರೇಮತ್ ಮಾಡುವ ಕೆಲಸತ್ ಕ್‌ಟ್ಟುವ ಆನಂದ, ವರ್ಣನೆ ಮಾಡುವಂತದ್ದಲ್ಲ. ಅನುಭವಿಚಿಡುವಂತದ್.

## ಞಾಣ

ಞಾಣ ಮನುಷ್ಯಂಗ್ ದೇವ ತಂದ ಅಮೂಲ್ಯ ಆಭರಣ. ಇದ್ ಎಲ್ಲಾಕೂ ಇಪ್ಪ, ಇರಂಡು. ಪೊಣ್ಣಾಳ್‌ಕ್ ಎಚ್ಚಕ್ಕಿರಂಡೋ ಅಚ್ಚಿಕೇ

ಆಣಾಳ್‌ಕೂ ಇರಂಡು. ಆಚೇಂಗಿ ಞಾಣ ಎಂತಲ್ಲಿರಂಡು, ಎಂತಾಂಗಿರಂಡು ಎಣ್ಣುವ ಜ್ಞಾನವೂ ಇರಂಡು. ತಾನ್ ಮಾಡುವ ಕರ್ತವ್ಯ ಕರ್ಮತ್‌ರ ಮೇಲೆ ಞಾಣ್‌ಚಿಟ್ಟವದ್ ಅಪರಾಧ. ಸುಮಾರ್ ನುಪ್ಪದ್ ವಯಸ್ಸ್‌ರ ಒಳ್‌ಲುಳ್ಳಯಿಂಗಕ್ ಞಾಣ ಇಲ್ಲೆ ಎಣ್ಣಕ ಅದೋರ್ ಆಶ್ಚರ್ಯವೇ ಸರಿ. ಞಾಣ ಇಲ್ಲತದ್ ಅಸಂಸ್ಕೃತ ಸ್ಥಿತಿನ ಕಾಟುವ. ನುಪ್ಪದ್ ವಯಸ್ಸ್‌ರೊಳ್‌ಲ್ ಞಾಣ ಇಲ್ಲತವು ಕಯ್ಯತ ನಾಪದ್ ದಾಟುವಕ ಸಹಿಸುವ ಸ್ವಭಾವಕಾರ ಆಯಿತ್ತಿಪ್ಪ. ಮನುಷ್ಯಂಡ ವ್ಯಕ್ತಿತ್ವ ಬೊಳ್‌ಚೆಕ್ ಞಾಣ ಜೀವರಸ ಇಂಜನ್ನಕೆ. ನಂಗಡ ನಲ್ಲ ಬೊಳ್‌ಚೆಕ್ ಞಾಣ ದುಂಬಾ ಸಹಾಯ ಆಪ.

## ಮಕ್ಕಡ ಸಹವಾಸ

ಮನುಷ್ಯ ದಾರೇ ಆಡ್, ಎಚ್ಚಕೇ ಬಲ್ಯವನಿರಡ್ ಬಲ್ಯ ಅಧಿಕಾರಿಯೇ ಇರಡ್ ಅವು ಮಕ್ಕಡ ಸಹವಾಸ ಬೆಚ್ಚವಂಡು. ಭಾರ ಆನ ಮನಸ್ಸ್‌ನ ಕುಶಿಪಡ್‌ತಿಯವಕ್ ಮಕ್ಕಡ ಸಹವಾಸ ನಲ್ಲದ್. ಲೋಕತ್ ಮಕ್ಕಡಚ್ಚಕ್ ಪವಿತ್ರವಾನ ವಸ್ತು ಏದೂ ಇಲ್ಲೆ. ಪ್ರಪಂಚತ್‌ರ ಸರ್ವ ಆಪ-ಪೋಪ ಪರಮಶಕ್ತಿರ ಕೈಯಿಂಜ ಬಪ್ಪ ಪುದಿಯ ರೂಪ ಮಕ್ಕ. ಆ ದಿವ್ಯ ಶಕ್ತಿಕ್, ಶಕ್ತಿರ ಪಕ್ಕ ಇಪ್ಪವುವೇ ಮಕ್ಕ. ಆಂಗಾಯಿತೇ ಬಲ್ಯವು ಮಕ್ಕಳ ದೇವಕ್ ಸಮಾನ ಎಣ್ಣುವ. ಮಕ್ಕಡ ಮುಗ್ದ ತೆಳಿ, ಕಪಟ ಇಲ್ಲತ ಪುಂಡ್‌ಕಳಿ, ಸ್ವಾರ್ಥ ಇಲ್ಲತ ಬಯಕೆ, ಇಂತೆಲ್ಲಾ ಗುಣ ಲೋಕತ್‌ನೇ, ಲೋಕಕೇ ಪುದಿಯದಾಯಿತ್ ಆನಂದ ದುಂಬ್‌ಚಿಡುವಾ, ಕಿಲುಂಬ್ ಪುಡಿಚ ನಂಗಡ ಹೃದಯತ್‌ನ ಚಾಯಿ ಕೊಟುವದೇ ಮಕ್ಕಡ ಸಹವಾಸ. ಮುದಕಡಲ್ಲಿಯೂ, 'ತಾನೂ ಮಕ್ಕ' ಎಣ್ಣುವ ಬಯಕೆನ ಜಾಸ್ತಿ ಮಾಡುವಂಜಿ ವಯಸ್ಸ್ ಕಮ್ಮಿಯಾನನ್ನೆಕೆ ಮಾಡುವ. ಚುಮ್ಮಿ ಮಕ್ಕಡ ಸಹವಾಸ ದೇವಡ ಸಹವಾಸ.

## ಆಸೆಕ್ ಶಾಂತಿ ಇಲ್ಲೆ

ತೂಟ್ಂಗಳಕ್ ತೃಪ್ತಿ ಎಣ್ಣುವದಿಲ್ಲೆ. ಎಚ್ಚಕ್ ಜನ ಚತ್ತೆತೇಂಗೂ ಅದ್ ಮದೀಂದ್ ಎಣ್ಣುಲೆ. ಮಕ್ಕಳಿಲ್ಲತ ಪೊಣ್ಣ್‌ಕೂ ಜೀವನತ್ ತೃಪ್ತಿ ಇಪ್ಪ್‌ಲೆ. ಕತ್ತುವ ತಿತ್ತ್‌ಕೂ ತೃಪ್ತಿ ಎಣ್ಣುವದಿಲ್ಲೆ. ಎಂತಾನೆಲ್ಲಾ ಅದ್ಂಗ್ ಇಟ್ಟಚ ಅದ್ ಇಞ್ಞ್ ಮೊರ್ಂದಂಡ್ ಕತ್ತುವ. ಇಞ್ಞ್ ಅತೃಪ್ತಿನೇ ಕಾಟುವ. ತೂಟ್ಂಗಳ, ತಿತ್ತ್, ಮಕ್ಕಳಿಲ್ಲತ ಪೊಮ್ಮಕ್ಕ ಇಯಂಗಕ್ ತೃಪ್ತಿ ಎಣ್ಣುವದ್ ಇಪ್ಪದೇ ಇಲ್ಲೆ. ಈ ಮೂಂದಾನೋ ಮೀರುವಂತದ್ ಮನುಷ್ಯಂಡ ಆಸೆ. ಆಸೆಕ್ ತೃಪ್ತಿಯೇ ಇಲ್ಲೆ. ಕೆಲ ಪೈಪ್‌ಲ್ಲಿಂಜವಂಗ್ ಕೂಳ್ ಕ್‌ಟ್ಟ್‌ನಕ ಅದ್‌ಲೂ ತೃಪ್ತಿ ಇಪ್ಪ್‌ಲೆ. ಕೆಲದುಂಬ್‌ನದೂ ಇಞ್ಞ್‌ೀರ್ ಆಸೆ ಬಪ್ಪ. ಆಸೆ ದುಂಬ್‌ನ ಮನಸ್ಸ್‌ಕ್ ಶಾಂತಿ ಇಪ್ಪ್‌ಲೆ. ಲೋಕತುಳ್ಳದೆಲ್ಲಾ ಬೋಂಡೂಂದ್ ಆಸೆ ದುಂಬ್‌ನಕ ಶಾಂತಿ ಎಲ್ಲಿ ? ಆಸೆ ದುಂಬ್‌ನ ಮನುಷ್ಯಂಡ ಜೀವನ ಸ್ಮಶಾನತ್‌ನನ್ನೆಕೆ ಅತೃಪ್ತಿ, ತಿತ್ತ್‌ನೆನ್ನೆಕೆ ಕತ್ತುವ ಬುದ್ಧಿ. ಆಸೆ ಎಣ್ಣುವದ್ ಮನುಷ್ಯನ ಜಿಂವತೇ ಚುಡುವ. ಆಸೆಕೂ ಮಿತಿ ಇರಂಡು.

## ಹೇಸಿಗೆ ಉಳ್ಳಲ್ಲಿ ವಲಂಜಿ

ಎಕ್ಕಾಲೂ ಬೋರೆಯೆಯಿಂಗಳ ದೂಷಣೆ ಮಾಡುವವಂಗೂ ಜೊತೆಕಾರ ಇಪ್ಪ. ಪೊಟ್ಟ್ ಪರೆವವಂಗೂ, ಪೊಟ್ಟ್‌ಕತೆ ಎಣ್ಣುವವಂಗೂ, ಕೆಟ್ಟ ಶಬ್ದ ಉಪಯೋಗ ಮಾಡುವಯಿಂಡ ಬಯ್ಯತ್ ಅವಂಡ ಸಿನೇತಂಗಡ ತಂಡವೇ ಇಪ್ಪ. ಅಧಿಕಾರ ಉಳ್ಳಲ್ಲಿ ಹಿಂಬಾಲಕಂಗಡ ಗುಂಪೇ ಇಪ್ಪ. ಪಣವುಳ್ಳವಂಡಲ್ಲಿ ಓಡಾಡುವಕ್ ಬೋಂಡಿಯ ಜನ ಇಪ್ಪ. ಆಚೇಂಗಿ ಶೀಲವುಳ್ಳವಂಡಲ್ಲಿ, ಕಪಟ ಇಲ್ಲತವಂಡಲ್ಲಿ, ಸತ್ಯ ಪರೆವಂಡಲ್ಲಿ, ಮೋಸ, ಕಪಟ, ಕುಟಿಲ ಬುದ್ಧಿ ಇಲ್ಲತವಂಡಲ್ಲಿ ಸಿನೇತಂಗ ಕಮ್ಮಿ ಇಪ್ಪ. ಅಂತಯಿಂಗಕ್ ಸಿನೇಹ ಕಮ್ಮಿ.

ಅಂತವು ಒಂಟಿಯಾಯಿತೇ ಇರಂಡಿಯಾಪ. ಈ ಲೋಕತ್‌ರ ವ್ಯವಹಾರವೇ ಅನ್ನನೆ. ಗಾಯವುಳ್ಳಲ್ಲಿ ಹೇಸಿಗೆ ಉಳ್ಳಲ್ಲಿ ವಲಂಜಿಯ ಮುತ್ತುವ, ಹೊಲಸ್ ದುಂಬಿತ್ ವಾಸನೆವುಳ್ಳಲ್ಲಿ ಕುರ್ಕ, ನಾಯಿಯ ಮುತ್ತುವ. ಶುದ್ಧವಾಯಿತುಳ್ಳ, ಏದೇ ವಿಧತ್ ಕೊಳಕ್ಕಿಲ್ಲತೆವುಳ್ಳಲ್ಲಿ ವಲಂಜಿಯಳೂ ಬಪ್ಪ್‌ಲೆ, ಕುರ್ಕ, ನಾಯಿಯಳೂ ಬಪ್ಪ್‌ಲೆ.

## ನಲ್ಲವಂಗ್ ಲೋಕವೇ ಮಠ

ನಲ್ಲವನಾಯಿತೇ ಇಕ್ಕಂಡೊಂದ್ ಕಷ್ಟಪಡುವವಂಗ್ ಪ್ರಪಂಚವೇ ಗುರುಮಠ. ಅಲ್ಲಿವುಳ್ಳ ಮರ-ಗಿಡ, ಪ್ರಾಣಿ-ಪಕ್ಷಿ ಇವೇ ಗುರು. ತೇನೊಲಂಜಿ ಸುತ್ತತ ಸ್ಥಳ ಇಲ್ಲೆ. ತೇನೊಲಂಜಿ ಬರೀ ಪೂವುಳ್ಳ ತೇನ್‌ನ ಮಾತ್ರ ಎಡ್‌ಪದಲ್ಲ. ಕೊಚ್ಚೆನೀರ್‌ಲೂ ತಾಂಗ್ ಬೋಂಡಿಯಾನ ಎಡ್‌ತಂಡ್, ತಾಂಡ ತಡಿರೊಳ್‌ಲ್ ಇಟ್ಟಂಡ್, ತಾಂಡ ವ್ಯಕ್ತಿತ್ವತ್‌ರ ಪರಿಷ್ಕಾರ ಕೊಡ್‌ಪಂಜಿ ತೇನ್, ಮೇಣ ಮಾಡಿತ್ ಬೆಪ್ಪ. ತೇನ್ ಮೇಣತ್ ಅಚ್ಚಕ್ ನಮ್ರತೆ ಉಂಡ್. ಅದ್‌ನ ಉರ್‌ಕಿತ್ ಕತ್ತ್‌ಚಿಟ್ಟಕ ಬೊಳಿ ಆಪ. ತೇನ್ ಶರೀರಕ್ ಶಕ್ತಿ ತಪ್ಪ. ಮದ್ದ್‌ಕೂ ಆಪ, ಓರ್ ತೇನೊಲ್‌ಂಜಿ ಕಷ್ಟಪಟ್ಟಿತ್, ಮೇಣ, ತೇನ್‌ನ ಕೂಟುವಂಜಿ, ಬೊಳಕ್‌ನೋ, ಮೊದ್‌ರತನೋ ತಪ್ಪಕ, ಮನುಷ್ಯನೂ ತಾಂಡ ನಲ್ಲ ವರ್ತನೆಲ್ ಜ್ಞಾನ ಎಣ್ಣುವ ಬೊಳಕ್, ಮೊದ್‌ರ ದುಂಬ್‌ನ ಪ್ರೀತಿನ ಇಞ್ಞೊಬ್ಬಂಗ್ ಕೊಡ್‌ತಕ ಈ ಲೋಕ ಸ್ವರ್ಗ ಆಕು.

## ಪ್ರೇಮಶಕ್ತಿ

ಪ್ರೇಮಕ್ಕುಳ್ಳ ಶಕ್ತಿ ಬೋರೇದ್‌ಂಗೂ ಇಲ್ಲೆ. ಇದ್‌ನರಿಂಜ ಮಹಾತ್ಮಗಾಂಧಿ ಕೂಡ ಶತ್ರುರ ಶಕ್ತಿನರಿವಂಜಿ ಶಸ್ತ್ರತ್‌ರ ಬದ್‌ಲ್ ಪ್ರೀತಿನೇ

ಶಸ್ತ್ರವಾಯಿತ್ ಪ್ರಯೋಗ ಮಾಡ್‌ಚಿ. ಏದ್‌ಂಗೂ ಬಗ್ಗತವನ ಪ್ರೀತಿಲ್ ಬಗ್ಗ್‌ಚಿಡಲು. ಕಾರಣ ಕೊಡ್‌ಪಂಜಿ ವಾದ ವಾಾಡ್‌ನಕ ಒಬ್ಬ ಕೆಮಿಕೊಡ್‌ಪಕ್ಕಿಲ್ಲೆ. ಬೊತ್ತ್‌ಚಿಟ್ಟಕ ಅವನೂ ಬೊತ್ತ್‌ಚಿಡು. ಕೋಲ್ ಎಡ್‌ತ್ ಪೊಜ್ಜಕ ಅಂವ ಕತ್ತಿ ಎಡ್‌ಕು. ಆಚೇಂಗಿ ಪ್ರೇಮ ಪ್ರಯೋಗ ಮಾಡ್‌ನಕ ಅವನೂ ಪ್ರೇಮತ್‌ಲೇ ಜವಾಬು ತಪ್ಪ. ಪ್ರೇಮಕ್ ಉತ್ತರ ಪ್ರೇಮ. ಪ್ರೇಮ ಸೂರ್ಯಂಡ ಎದಿಕೆ ವಿರೋಧವಾನ ಇರ್‌ಟ್ ನಿಪ್ಪ್‌ಲೆ. ಪ್ರೀತಿಕ್ ಕುಂಬ್‌ಡತಂವ ಕೋಟಿಲೂ ಒಬ್ಬ ಇಪ್ಪಕ್ಕಿಲ್ಲೆ. ಅನನ್ಯ ಪ್ರೇಮಕ್ ಪಡಿತೊರೆಕತ ಹೃದಯ ಇಲ್ಲೆ. ಪ್ರೀತಿ ಪ್ರೇಮವೇ ಬಾಳ್‌ಕ್ ಶಕ್ತಿ.

## ದುಃಖತ್‌ರ ಚಾವು

ಬಡತನ ಇಾಣಕೇಡಲ್ಲ. ಆಚೇಂಗಿ ಬಡತನ ಇಂಜಿತೂ ನೈಕತದ್ ಇಾಣಕೇಡ್. ಜವಾನನೋ, ಸೇವಕನೋ ಆಯಿತ್ತಿಪ್ಪದ್ ಇಾಣಕೇಡಲ್ಲ. ಅಂತಾ ಕೆಲಸತ್ ಸೆರಿಯಾನ ದಕ್ಷತೆ, ವಿಶ್ವಾಸ ಇಲ್ಲತಿಪ್ಪದ್ ಇಾಣಕೇಡ್. ವಯಸ್ಸ್, ಮುದಿತನ ವ್ಯಸನ ಪಡುವಂತದ್ದಲ್ಲ. ಆಚೇಂಗಿ ವಯಸ್ಸಕ್ ಸರಿಯಾನ ಅನುಭವ, ಜ್ಞಾನ ನಲ್ಲರಿಕೆ, ಬಾಳ್‌ಲ್ ಗೊತ್ತ್‌ಗುರಿ ಇಲ್ಲತೆ ಸುಮಾರ್‌ಕಾಲ ನಿಷ್ಫಲ ಜೀವನ ನಡತುವದ್ ವ್ಯಸನಕರ. ನಾನ್ ಚಾಯಿಕಾರನಲ್ಲ, ಆಕರ್ಷಕ ತಡಿತಾಂಗಿಲ್ಲೇಂದ್ ವ್ಯಸನ ಪಡುವ ಅವಶ್ಯಕತೆ ಇಲ್ಲೆ. ಆಚೇಂಗಿ ಪಣಿ ಕಯ್ಯುವ ಕೈಯ್ಯುತ, ರೋಗ ಉಳ್ಳ ತಡಿ ಉಂಡೇಂಗಿ ಬೇಜಾರ ಪಡಲು. ಚಾವು ಬಪ್ಪಾಂದ್ ಬೊತ್ತುವದಾಡ್, ಬೇಜಾರ ಮಾಡುವ ದಾಡ್ ಅನಾವಶ್ಯಕ. ಚಾವು ಎಕ್ಕಾಚೆಂಗೂ ಬಂದಿತೇ ಬಪ್ಪ. ನಂಗ ಲೋಕಕ್ ಹಿತ, ಲಾಭ ಮಾಡತೆ ನಲ್ಲ ಬಾಳ್ ಬಾವತೆ ಚಾವದ್ ದುಃಖಕರ.

# ಅನುಭವ ಅರಿಂಜಿ ಬಾವಂಡು

ಬುದ್ದಿ ಚುರ್‌ಕಾಯಿತುಳ್ಳವಂಗ್ ವ್ಯಸನ ತಪ್ಪ್‌ನದಲ್ಲ. ವಿಪರೀತ ಬಗ್ಗಿನಡ್‌ಪ್‌ವಂಗ್ ಪಣಿ ತಪ್ಪ್‌ನದಲ್ಲ. ಸ್ವಾಭಿಮಾನ ಇಲ್ಲತವಂಗ್ ಅವಮಾನ ತಪ್ಪ್‌ನದಲ್ಲ. ತಾಂಡ ಬುದ್ದಿ, ಕಳಿ, ತೆಳಿರ ಮೀದ ಪುಡ್‌ತ ಇಲ್ಲ ತವಂಗ್ ಗಂಡಾಂತರ ತಪ್ಪ್‌ನದಲ್ಲ. ಅನ್ನನೇ ಕೂತ್‌ಟ್ಟಂಡ್ ತಕ್ಕ್ ಪರೆವವಂಗ್ ನ್ಯಾಯ ಕ್‌ಟ್ಟುವದಿಲ್ಲೆ. ವಿಪರೀತ ಆಸೆವುಳ್ಳವನ್ನುಂಡ್ ನಲ್ಲ ಕೆಲಸ ಆಪ್‌ಲೆ. ಬಾಯಿಕ್ ಬಂದೆನ್ನಕೆ ಪರೆವವಂಗ್ ಸ್ಥಿರತೆ ಇಪ್ಪ್‌ಲೆ. ತಡಿಕ್ ಸುಖ, ಗೌರವ ಕೊಡ್‌ಪವಂಡಲ್ಲಿ ಸಂಸ್ಕೃತಿ ಇಪ್ಪ್‌ಲೆ. ಕನ್ನಡಿರ ಮಿಞ್ಞಲ್ ನಿಂದಂಡ್ ತಾಂಡ ನೋಟ, ಮಾಟ, ಸೌಂದರ್ಯ ಚಾಯಿನ ಪ್ರೀತಿ ಮಾಡುವವಂಡಲ್ಲಿ ನೀತಿ ನಿಯಮ ಇಪ್ಪ್‌ಲೆ. ತಾಂಡ ಜ್ಞಾನ ಕುಶಲತೆಲೇ ತಾನೇ ಕುಪಿಪಟ್ಟವ ವಿದ್ಯೆ ಪಡ್‌ಚಂವ ವಿಶ್ವಾಸಾರ್ಹನಾಪ್‌ಲೆ. ಎಲ್ಲಾ ತರತ್‌ರ ಅನುಭವತ್‌ನ ಅರ್‌ಂಜಿತ್ ಬದ್‌ಕುವವನೇ ನೇರಾನ ಮನುಷ್ಯತ್ವ ಉಳ್ಳಂವ.

# ನೇರಾನ ಸಾಹಿತ್ಯ

ಸಾಹಿತ್ಯಕ್ಕುಳ ಶಕ್ತಿಕ್ ಮಿತಿ ಇಲ್ಲೆ. ಅದ್ ಕುಪಿರ ವಿಷಯ ವರ್ಣನೆ ಮಾಡಿತ್ ಅರಿಚಿಡಲು. ದುಃಖತ್‌ರ ವಿವರಣೆ ತಪ್ಪಂಜಿ ಕಣ್ಣೀರ್ ಬರತುವಲು. ವೈರಾಗ್ಯ ತಕ್ಕ್‌ಪರೆವಂಜಿ ಸಂಸಾರತ್ತಿಂಜಿ ದೂರ ಮಾಡಲು. ಪ್ರೀತಿ, ಪ್ರೇಮ ವರ್ಣನೆ ಮಾಡಿತ್ ಕಣ್ಣ್‌ಕ್ ಕಾಂತಿ ದುಂಬ್‌ಚಿಡಲು. ಪೋಡಿನ ವಿಚಾರ ಮಾಡಿತ್ ತಡಿನ ಬೊರಪನ್ನಕೆ ಮಾಡಲು. ಚೆಡಿಲ್ ಉದ್ರೇಕ ಮಾಡಿತ್ ಪಕ್ಕತ್ತುಳ್ಳ ಆಯುಧ ಎಡ್‌ಪನ್ನಕೆ ಮಾಡಲು. ಅನ್ಯಾಯ, ಅನಾಚಾರತ್‌ರ ಎಳ್ತ್‌ಲ್ ಒಬ್ಬನ ಕೆಲಸ ಮಾಡುವನ್ನಕೆ ಮಾಡಲು. ನಲ್ಲ ತತ್ವ ವಿವರಣೆ ಕೊಡ್‌ಪಂಜಿ ಒಬ್ಬನ ಎತ್ತರಕ್ ಎಡ್‌ತ ಪೋಲು ಅನ್ನನೆ ಹೃದಯತ್‌ನ

ಕುಷಿಪಡ್‌ತಿತ್ ಮನಸ್ಸ್‌ನ ತಂಪು ಮಾಡಲು; ಆಸೆ ನಿರಾಸೆಲ್ ಮನುಷ್ಯನ ನಲ್ಲ ಸಾಹಿತಿಯಾಯಿತ್ ಮಾಡಲು. ಸಾಹಿತ್ಯ ಬುದ್ದಿರ ಕಳಿಯಲ್ಲ. ಹೃದಯತ್‌ರ ಮಿಡಿತ. ನಲ್ಲ ಸಾಹಿತ್ಯವೇ ನಲ್ಲ ಜೀವನ.

## ಮೆಚ್ಚಿಗೆಯೇ ಕಷ್ಟ ತಪ್ಪ

ಬೋಂಡಿಯ ಸಂಪಾದನೆ ಇಪ್ಪಕ ಉಳಿತಾಯ ಮಾಡತವು, ಸಂಪಾದನೆ ಕಮ್ಮಿ ಆನಕ ಕಷ್ಟ ಪಡುವ. ಚೆರ್‌ಪತ್ ಸೆರಿಯಾಯಿತ್ ಓದತೆ, ಜ್ಞಾನ ಸಂಪಾದನೆ ಮಾಡತಪೋಚೇಂಗಿ ಮಿಞ್ಞ ಜ್ಞಾನಕ್ಕಾಯಿತ್ ವ್ಯಸನ ಪಡುವಕ್ಕಾಪ. ಕಳ್ಳ್ ಕುಡ್‌ಚಿತ್ ಅಮಲೇರಿತ್ ತಾರಾಮಾರ ಕಳಿಚವ ಅಮಲ್ ಬುಟ್ಟಪಿಞ್ಞ ವ್ಯಸನ ಪಡುವ. ನಾಕ್ ನಲ್ಲ ಆರೋಗ್ಯ ಉಂಡ್, ನಾನ್ ಆರೋಗ್ಯವಂತ ಎಣ್ಣಿತ್ ಸೆರಿಯಾಯಿತ್, ವರತೆ, ಉಂಗತೆ, ವಿಶ್ರಾಂತಿ ಎಡ್‌ಕತೆ ಕಳಿಪವು ಕಷ್ಟಕಾಲತ್ ಕಟ್ಟ್‌ಪತ್ತ್‌ನಕ ಪರಿತಾಪ ಪಡಂಡಿಯಾಪ. ಆನಗುಂಡ್ ಜೀವಮಾನತ್ ಬಪ್ಪ ಸುಖ, ದುಃಖ, ಕಷ್ಟ-ನಷ್ಟ, ಅಗ್ನಿ ಪರೀಕ್ಷೆ *ಎಲ್ಲಾ ನಂಗಡ ವರ್ತನೆನ ಹೊಂದಿಯಂಡಿಪ್ಪ. ಜೀವನತ್ ಪೆರ್ತ್ ಬೊತ್ತುವ ವಸ್ತುಲ್ ಕಷ್ಟ ಬಪ್ಪ್‌ಲೆ. ನಂಗ ಪೆರ್ತ್ ಕೊದಿಪ ವಸ್ತುಂಜೇ ಜಾಸ್ತಿ ಕಷ್ಟ ಬಪ್ಪ. ಕಳ್ಳಕಾಕಂಡ, ದರೋಡೆಕಾರಡ ಎಚ್ಚರ ನಂಗಕ್ಕಿಪ್ಪ. ಆಚೇಂಗಿ ನಂಗ ಪೆರ್ತ್ ಪಕ್ಕತವು, ಸಭ್ಯಂಗ ಎಣ್ಣಿತ್ ಕಳಿಪಯಿನಗುಂಡ್ ನಂಗಕ್ ಹಾನಿ ಜಾಸ್ತಿ.

## ನಲ್ಲ ಸಹವಾಸ ಬೋಂಡು

ನೆರೆಮನೆಕಾರ ಪಣಕಾರನಾನಲ್ಲಿ ನಂಗಕೂ ಅವನನ್ನೆಕೆ ಸಿರಿವಂತ ನ್ನಾಂಡೂಂದ್ ಆಸೆ ಪುಟ್ಟುವ. ನಲ್ಲ ಆರೋಗ್ಯ ಇಂಜಂಡ್ ಬಲವಾಯಿ ತುಳ್ಳವಂಡ ಕೂಡೆ ಕಳಿಪಕ ನಾಕೂ ಇವನನ್ನೆಕೆ ಆರೋಗ್ಯ ಬೆಚ್ಚವಂಡೂಂದಾಪ.

ಅನ್ನನೆ ನಲ್ಲಯಿಂಡ ಜೊತೆಲೇ ಇಪ್ಪ. ಕೆಟ್ಟವಂಗೂ ನಲ್ಲವನಾಪ ಗೇನ. ಅನ್ನನೇ ದುಷ್ಟಡ ಜತೆಲೇ ಕಳಿಪ ನಲ್ಲವನೂ ಕೆಟ್ಟ್‌ಪೋಪ ಸಂದರ್ಭ ಇಲ್ಲತ್ತಿಲ್ಲೆ. ಇದ್‌ಂಗ್ ಸಹವಾಸ ದೋಷ ಎಣ್ಣುವ. ನಲ್ಲ ಬಟ್ಟೆ ಇಟ್ಟಂಡ್ ಕೊಳಕ್ ಬಟ್ಟೆಕ್ಕಾರಡ ಕೂಡೆ ಕೊಳಕ್ ಜಾಗತ್ ಕಳಿಚಕ ಬಟ್ಟೆಯೂ ಕೊಳಕಾಪ. ಅನ್ನನೇ ಪವಿತ್ರ ಮನಸ್ಸ್‌ಕಾರ ದುರ್ಮಾರ್ಗಿಯಡ ಕೂಡೆ ಕೂಡ್‌ನಕ ತಾಂಡ ನಲ್ಲರಿಮೆನ ಕಳಂದವ. ಪ್ರತೀಯೊಂದು ಕೂಡ ಸಂಗ, ಸಹವಾಸತ್‌ನನ್ನಕೆ ಆಪ. ಎಕ್ಕಲೂ ನಲ್ಲ ಜನಡ ಸಹವಾಸವೇ ನಲ್ಲದ್.

## ಬುದ್ಧಿ ಬಪ್ಪಲ್ಲಿಕೆತ್ತನೆ ಎಚ್ಚರ ಬೋಂಡು

ಪುಟ್ಟ್‌ನ ಮನುಷ್ಯಂಗ್ ಒಂದಲ್ಲ ಓರ್ ವ್ಯಸನ ಇಂಜಿತೇ ಇಪ್ಪ. ಚೆನ್ನಂಗಾಳ್‌ಕ್ ಪಣಕಾಸ್‌ರ ಚಿಂತೆ ಆಂಡ ನಿವಾರಣೆಕ್ ನಾನಾ ರೀತಿರ ಯೋಚನೆರ ಚಿಂತೆ ಆನಕ ಚೆನ್ನಂಗಾಳ್‌ಕ್ ಆರಾಂರ ಭೋಗ ಲಾಲಸೆ, ಆಂಡ ಸಾಧನೆಕ್ಕಾಯಿತ್ ನಾನಾ ಚಿಂತೆ. ಈ ಲೋಕತ್ ಬದ್‌ಕುವಯಿಂಗಕ್ ಬರೀ ದಂಡೇ ರಸ್ತೆ. ಒಂದ್ ನೀತಿ ಮಾರ್ಗ, ಇಞ್ಞೊಂದ್ ಅನೀತಿ ಮಾರ್ಗ. ಅನೀತಿ ಮಾರ್ಗತ್ ಆಕರ್ಷಣೆ ಜಾಸ್ತಿ. ಈ ಆಕರ್ಷಣೆಯೇ ಆಸೆ, ಕ್ರೌರ್ಯ, ಕೆಟ್ಟನೀತಿ, ಕೆಟ್ಟ ಆಡಂಬರತ್ ರತ್ತಟಿ ಬಲಿಪ. ಅದೆಲ್ಲಾ ಓರ್ ಕೆಟ್ಟರೋಗ. ಇದ್ ಕೆಟ್ಟ ಸಹವಾಸತ್ ಬಪ್ಪದ್. ಆನಗುಂಡ್ ಕಷ್ಟ ತಪ್ಪ್‌ನದಲ್ಲ. ಬೊಳೆಯತ ಚುಮ್ಮಿಯಡ ಬುದ್ಧಿ ಬೊಳೆವಾಂಗ್‌ಂಜಿ ಮಿಂಞ್ಞ ಕೆಟ್ಟ ಸಹವಾಸತ್ ಕೆಣ್‌ಂಜಿತ್ ಬಟ್ಟೆ ತಪ್ಪುವ. ತಿರಿ ಬೊಳ್‌ಚತ್‌ನ ಗಾಳಿ ಕೆಡ್‌ತಿರುವ ಕಾಡ್‌ರ ತಿತ್ತ್‌ಕ್ ಗಾಳಿಯೇ ಆಧಾರ. ಬುದ್ಧಿ ಬಪ್ಪಲ್ಲಿಕೆತ್ತನೆ ಚುಮ್ಮಿಯಳ ಎಚ್ಚರ ಎಡ್‌ಕಂಡು.

## ಅತೃಪ್ತಿ ರೋಗ

ಮನುಷ್ಯ ಬದ್‌ಕುವಕ್ ಉಪ್ಪರಿಗೆರ ಅರಮನೆ ಆಂಡೂಂದಿಲ್ಲೆ.

ಪೊನ್ನ್‌ರ ಬಟ್ಟಲತ್ ಉಂಗಂಡೂಂದಿಲ್ಲೆ. ಸುಖ, ಆನಂದ, ಪೊನ್ನ್ ಉಳ್ಳಂದ್ ನಂಗಡ ಭ್ರಾಂತಿ, ಪೊನ್ನ್‌ರ ಬಟ್ಟಿತ್ ಉಂಡ ತೃಪ್ತಿ, ಎಲಕಂಡತ್ ಉಂಡಕೋಕ್‌ಟ್ಟುವ. ದುಂಬ್‌ನ ಪಣಕಾರ ಬಡತನ ನಲ್ಲದ್‌ಂದ್ ಗೇನ ಮಾಡುವ. ಗರೀಬಳೇ ಸುಖಿಯಾಂದ್ ಎಣ್ಣುವ. ಗರೀಬನೂ ಶ್ರೀಮಂತಿಕೆ ಯೋಗ್ಯ ಅಲ್ಲಾಂದೆಣ್ಣುವ. ಈ ದಂಡೂ ದೃಷ್ಟಿ ತಪ್ಪ್. ಬಡತನ ನಲ್ಲದೂ ಅಲ್ಲ. ಸಿರಿತನ ಅಪರಾಧವೂ ಅಲ್ಲ. ವಿಚಾರ ಅರ್‌ಂಜ ಜ್ಞಾನಿಕ್ ದಂಡಾತೂ ಸುಖ ಉಂಡ್. ತಾಂಡ ಪೊಟ್ಟೆಕ್ ತಾನ್ ಕೂಳ್ ಕಂಡ್‌ಪುಡಿಕತಂವಂಡ ಬಡತನ ಕ್ಷಮೆ ಮಾಡುವಂತದ್ದಲ್ಲ. ಅನ್ನನೆ ಲೋಕತ್‌ನೇ ಮರೆವ ಸಿರಿತನವೂ ನಲ್ಲದಲ್ಲ. ಗುಡಿಸ್‌ಲ್‌ಂಜಿ ಒರ್ ರೋಗಿನ ಅರಮನೆಕ್ ಕಡ್‌ತ್‌ಚಿಟ್ಟಿಕ ರೋಗವಾಸಿ ಆಯಿರುಲೆ. ರೋಗ ಶರೀರತ್ತಿಪ್ಪಲ್ಲಿ ಕೆತ್ತನೆ ಏದ್ ಜಾಗೋ ಕೂಳ್‌ತಪ್ಪ್‌ಲೆ. ಅತೃಪ್ತಿ ಎಣ್ಣುವ ರೋಗ ಉಳ್ಳವಂಗ್ ಬಡತನ, ಸಿರಿತನ ದಂಡೂ ಒಂದೇ !

## ಒಬ್ಬ ಒಬ್ಬಂಗ್ ಆಧಾರ

ಪಟ್ಟಾಳಕಾರಡ ಜೀವನಗುರಿ ಯುದ್ಧ. ವಕೀಲಂಗ್ ಜನಡ ಜಗಳತ್‌ನ ಗುಂಡ್ ಜೀವನ. ವೈದ್ಯ ನಾನಂವಂಗ್ ಜನಡ ಅನಾರೋಗ್ಯತ್ ಬಾಳ್. ವ್ಯಾಪಾರಿ ತಿಳಿಗೇಡಿಯಡ ಅಜ್ಞಾನತ್ತಿಂಜಿ ಪಣ ಮಾಡುವ. ಬಿರುಗಾಳಿ, ಕಾತ್ ಮಳೆಲ್ ಮನೆ-ಮಠ ಬುದ್ದಿತ್ ನಷ್ಟ ಆನಕ ಮನೆ ಕಟ್ಟುವ ಇಂಜಿನಿಯರ್ ಕಂಟ್ರಾಕ್ಟರ್‌ಕ್ ಪುತ್ತರಿ. ಇನ್ನನೆ ಒಬ್ಬಂಡ ನಷ್ಟ, ವ್ಯಸನ ಇಞ್ಞೊಬ್ಬಂಗ್ ಲಾಭ ತಪ್ಪ. ಪ್ರಪಂಚತ್ ಒಬ್ಬೊನೊಬ್ಬನ ಆಧಾರ ಮಾಡಿಯೆಂಡೇ ಜೀವನ. ಇದ್ ತಪ್ಪಲ್ಲ. ಆಚೇಂಗಿ ತಾಂಡ ಸ್ವಾರ್ಥಕ್ಕಾಯಿತ್ ಇಂಞ್ಞೊಬ್ಬಂಡ ಕಷ್ಟಕಾಲತ್‌ನ ಉಪಯೋಗ ಮಾಡಿಯವದ್ ಪಾಪಕಾರ್ಯ. ಪ್ರಪಂಚವೇ

ಪೋರಾಟತ್‌ರ ಪಡೆಭೂಮಿ. ಓರ್ ಮೂಳೆಕ್ ನಾಯಿಯ ಕಡ್‌ಚಬೂವ. ಅನ್ನನೆ ಅಧಿಕಾರ ಸಂಪತ್ತ್‌ಕ್ಕಾಯಿತ್ ಮನುಷ್ಯನೂ ಕಡ್‌ಚಬೂವ. ಇಂತಾ ಜನ ದಾರೂ ಮಹಾತ್ಮನಾನವು ಇಲ್ಲೆ.

## ನೀತಿ ಬೋಂಡು

ಸೊನ್ನೆಕ್ ಬೆಲ್ಲೆ ಇಲ್ಲೆ. ನೂರಾರ್ ಸೊನ್ನೆನ ಒಂದಾನ ಪಿಞ್ಞ ಒಂದಾಯಿತ್ ಎಚ್ಚಕ್ ಎಳ್‌ದ್ದಿಚೆಂಗೂ ಅದ್‌ಂಗ್ ಬೆಲೆ ಬಪ್ಪ್‌ಲೆ. ಸೊನ್ನೆಕ್ ಬೆಲೆ ಬರಂಡಿಕೆ ಅದ್‌ಂಗ್ ಆಧಾರ ಆಯಿತ್ ಏದೇಂಗೋರ್ ಅಂಕೆ ಇರಂಡು. ಅಂಕೆ 1 ಎಳ್‌ದಿತ್ ಆಂಗ್ ಸೊನ್ನೆ ಕೂಟಿಚೇಂಗಿ ಸೊನ್ನೆರ ಬೆಲೆ ಸೇರಿಯಂಡೇ ಪೋಪ. ಅದ್‌ನೇ ಇಞ್ಞೋರ್ ವಿಧತ್ ಎಣ್ಣಲು. ನೀರ್ ಇಂಜಕ, ಅದ್ ಕುಡಿಪಕೂ, ಕುಳಿಪಕೂ, ಕತ್ತುವಕೂ ಆಪ. ನೀರಿಲ್ಲತೆ ಪೋನಕ ಏದ್ ಸೋಪು, ಪುಳ್‌ಂಗೋಡ್, ಚೇರಿ ಉಂಡೇಂಗೂ ಮೇಲ್‌ನ ಉದ್ದುವ ಕೈಯ್ಯುಲೆ. ನೀರಿಲ್ಲತೆ ಕುಳಿಪ ಕೈಯ್ಯುಲೆ. ಅನ್ನನೆ ಮನುಷ್ಯಂಡಲ್ಲಿ 'ನೀತಿ' ಒಂದ್ ಇಲ್ಲೇಂಗಿ ಅವಂಡ ಏದ್ ವಿದ್ಯೆಯೂ ಪ್ರಯೋಜನ ಆಪ್‌ಲೆ. ನೀತಿ ಉಳ್ಳ ಮನುಷ್ಯಂಡ ಹೃದಯ ಶುದ್ದಿಲ್ ನಲ್ಲಕಾರ್ಯ ಆಪದೇ ಅಲ್ಲತೆ ಮನುಷ್ಯಂಡ ಮನುಷ್ಯತ್ವ ವೃದ್ಧಿ, ಶಾಂತಿ, ಸಿದ್ಧಿಯೂ ಆಪ. ಮನುಷ್ಯಂಗ್ ಮುಖ್ಯ ನೀತಿ ಬೋಂಡು.

## ಸಾಧನೆ ಬೋಂಡು

ತೇನ್‌ರ ಮೇಲೆ ಆಸೆಲ್ ತೇನ್ ಕೊಯ್ಯುವಕ್ ಪೋಕುವ, ತೇನೊಲಂಜಿನ್ನುಂಡ್ ಕಡಿಪ್‌ಚಿಟ್ಟುವಕೂ ತಯಾರಿಕಂಡು. ಇಲ್ಲೇಂಗಿ ತೇನೊಲಂಜಿ ಕಡಿಕತನ್ನಕೆ ಎಚ್ಚರ ಎಡ್‌ತವಂಡು. ತೇನ್ ಬೋಂಡು, ತೇನೊಲಂಜಿನ ಕಾಂಬಕ ಬೊತ್ತುವಕ್ಕಾಗ, ಎಣ್ಣುವವಂಗ್ ತೇನ್ ಕ್‌ಟ್ಟುಲೆ,

ತಾಂಗ್ ಖ್ಯಾತಿ ಬೋಂಡು, ತಾನ್ ಎಲ್ಲಾಡ ಕೈಂಜೂ ನಲ್ಲಂವ ಎಣ್ಣ್‌ಚಿಟ್ಟುವಂಡು; ಬಲ್ಯತರತ್‌ರ ಜೀವಮಾನ ಕೈಕಂಡು ಎಣ್ಣುವ ಆಸೆ ಉಂಡೇಂಗಿ ಅದ್‌ಂಗ್ ಸರಿಯಾನ ಸಾಧನೆ ಮಾಡಂಡು, ಸಾಧನೆಲ್ ಬಪ್ಪಕಷ್ಟತ್‌ನೆಲ್ಲಾ ನೀಸಿಯವಂಡು. ಎಣ್ಣೆಕುರುನ ಜಜ್ಜಿತ್ ಕಾಚ್‌ನಕ ಎಣ್ಣೆ ಕ್‌ಟ್ಟುವ. ಎಣ್ಣೆ ಬೋಂಡು ಎಣ್ಣಕ ಅದ್‌ನ ಕಾಚುವಕೂ ತಯಾರಿರಂಡು. ಬಾಳ್‌ಕ್ ಜೀವಾಳತ್ ಗೆಲ್ಲುವ ರಸ ಸಮಯ ಬೋಂಡಿಕಿ ಕಷ್ಟ-ನಿಷ್ಠುರ, ಪೊಯಿತ್-ಕುತ್ತ್, ಕುಟ್ಟ್ ಇದ್‌ನೆಲ್ಲಾ ಸಹಿಸಿಯಂಡ್, ನೀಕಿಯಂಡ್ ಮಿಂಞಕ್ ನುಗ್ಗಂಡು.

## ಸಂಶಯ ಮನುಷ್ಯಂಡ ಶತ್ರು

ಸಂಶಯ ಮನುಷ್ಯಂಡ ಭಯಂಕರ ಶತ್ರು. ಸಂಶಯ ಸ್ವಭಾವ ಉಳ್ಳಂವ ದುರಾದೃಷ್ಟವಂತ. ಪ್ರತೀಯೊಂದಾನೋ ಸಂಶಯತ್ ಕಾಂಬಂವ ತಾಂಡ ಆತ್ಮ ವಿಶ್ವಾಸ ಕಳಂದವ. ಅವಂಗ್ ಪ್ರಪಂಚವೇ ಜೈಲ್ ಆಯಿಪೋಪ. ಸಂಶಯಕಾರಂಗ್, ಮಿತ್ರತ್ವ ಬೆಂದು ಚಾಚೆಕಾರಡಲ್ಲಿಯೂ ಸಂಶಯ ಬೆಂದು ಬುಡತ್ತ್‌ನೇ ಪಾಳ್ ಮಾಡಿರುವ. ಸಂಶಯವುಳ್ಳವಂಡಲ್ಲಿ ಪೋಡಿದುಂಬಿತ್ತಿಪ್ಪ ಅವಂಡ ಜೀವನ ಮುಳ್ಳ್‌ರ ಮೇಲೆ ಬುದ್ದಂಡನ್ನೆಕೆ ಆಪ. ಕೆಲಸ ಮಾಡುವದಾ, ಬೋಂಡವಾ ಎಣ್ಣುವ ಸಂಶಯಬಾತೇಂಗಿ ಮನಸ್ಸ್‌ಕ್ ನೆಮ್ಮದಿ ಇಪ್ಪ್ಲೆ. ಅಹಂಕಾರ, ಅಹಂಭಾವ ಉಳ್ಳವಂಗ್ ಕಣ್ಣ್ಂಜಿತೂ ಕಾಂಗತನ್ನೆಕೆ ಆಪ. ಅಜ್ಞಾನಿಕ್ ಅಕ್ಕಿಪೊಡಿ, ಬೂದಿರ ವ್ಯತ್ಯಾಸ ಗೊತ್ತಾಪ್‌ಲೆ. ಅವಂಗ್ ಕೇರ್‌ಕಂಡಕೋ ಪಾಂಬುನ ಕಂಡನ್ನೆಕೆ ಆಕು. ಸಂಶಯ ಉಳ್ಳಂವ ಸಂಶಯ ಪಿಶಾಚಿ ಆಪದೂ ಉಂಡ್. ಸಂಶಯಕಾರಂಗ್ ಈ ಲೋಕತ್ ಸುಃಖವೂ ಇಲ್ಲೆ ಪರಲೋಕ ಸದ್ಗತಿಯೂ ಇಪ್ಪಕ್ಕಿಲ್ಲೆ.

# ಗೌರವ ಎಲ್ಲಿ ?

ಪಟ್ಟಾಳಕ್ ಕೂಡಿತ್ ಕೀರ್ತಿ ಪಡೆವದ್, ಬಲ್ಯ ಚಾಕರಿ ಮಾಡಿತ್ ಪೆದ ಎಡ್‌ಪದ್, ಪೆದಪ್ಪೋನ ನ್ಯಾಯಧೀಶನಾಪದ್, ವರಕವಿ ಎಣ್ಣ್‌ಚಿಟ್ಟವದ್, ಬಲ್ಯ ಶಿಲ್ಪಿಂದ್ ಎಣ್ಣ್‌ಚಿಟ್ಟವದ್, ಪೆದಎಡ್‌ಪಂತಾ ಸಂಶೋಧನೆಕಾರನಾಪದ್ ಎಲ್ಲಾ ಸಾಮಾನ್ಯ ವಿಷಯ. ಅದದ್ ಸ್ಥಾನತ್ ಅದದಂಗ್ ಗೌರವ. ಆಚೇಂಗಿ ಇದೆಲ್ಲಾ ಒರೋರ್ ದಿಕ್ಕ್‌ಲ್ ಮಾತ್ರ ಪೆದ ಎಡ್‌ಪ. ಇದೆಲ್ಲಾ ಎಲ್ಲಾಬರಿರ ಪ್ರಗತಿ ಅಲ್ಲ. ಸರ್ವತೋಮುಖ ಪ್ರಗತಿಯೆಣ್ಣುವದೊಂದ್ ಅದ್ ಮನುಷ್ಯಂಡ್ ವ್ಯಕ್ತಿತ್ವ ವಿಕಾಸ ಆಂಡು. ನಲ್ಲ ಅಪ್ಪ, ಒಡಿಯ, ಪೊಣ್ಣ್, ಮೋಂವ, ಮೋವ ಯಜಮಾನ, ಆಳಾಯಿತ್ ಜೀವನ ಮಾಡುವವು ನೇರಾಯಿತೂ ಗೌರವಸ್ಥಂಗ. ಒರ್ ವರ್ಗತ್ ಸ್ವಾರ್ಥ, ಕೀರ್ತಿ ಉಂಡೇಂಗಿ ದಂಡನೆ ವರ್ಗತ್ ಎಲ್ಲಾ ರೀತಿರ ಅಭಿವೃದ್ಧಿ ಅಡಂಗಿತ್.

# ಸಾಧನೆಕಾರಂಗ್ ಮಾತ್ರ ಸಫಲತೆ

ಜ್ಞಾನ ಎಣ್ಣುವದ್ ಬಲ್ಯ ಮೇರು ಕುಂದ್ ಉಳ್ಳನ್ನೆಕೆ. ಆಂಡ ಕೊಡಿಕ್ ಪತ್ತುವಕ್ ಎಲ್ಲಾರೂ ಪ್ರಯತ್ನ ಪಡುವ. ಹಿಮಾಲಯಕ್ ಪತ್ತಿತ್ ಕೊಡೀಲ್ ನಿಪ್ಪಕ್ ಎಚ್ಚಕ್ಕಾಳ್ಲೋ ಪ್ರಯತ್ನ ಪಟ್ಟಿತ್. ಇಂದೂ ಪಟ್ಟಂಡೇ ಉಂಡ್. ದಾರೋ ಒಂದ್ ದಂಡ್ ತೇನಸಿಂಗ, ಹಿಲ್ಲರಿ ನಂತವು ಕೊಡಿಕ್ಕೆತ್ತ್‌ಚಿ. ಕಾರಣ ಸ್ವಶಕ್ತಿ, ಎತ್ತುವೀಂದೆಣ್ಣುವ ನಿಷ್ಠೆ. ಅನ್ನನೆ ನಂಗಡ ಜ್ಞಾನಯಾತ್ರೆ. ಓದುವಕ್ ಎಳದುವಕ್ ಗೊತ್ತುಳ್ಳವು, ಚಾಯೋಡೆ ನಲ್ಲ ರೀತಿಲ್ ತಕ್ಕ್ ಪರೆವವು ಎಲ್ಲಾ ಆದರ್ಶ ನಾಗರೀಕಂಗಳಾಪ್‌ಲೆ. ಜ್ಞಾನತ್‌ರ ವಿಷಯ ತಕ್ಕ್‌ಪರೆವವು ಪ್ರಯತ್ನ ಪಡುವವು ಜ್ಞಾನಿಯಳಾಪ್‌ಲೆ. ಆಚೇಂಗಿ ಕರ್ಮ ಮಾಡುವ ಬಟ್ಟೆ, ತಾಂಡ ಕರ್ತವ್ಯ ತೊರಂದ ರಸ್ತೆ ಉಳ್ಳನ್ನೆಕೆ. ಅಲ್ಲಿ ದಾರೂ ತಿರ್‌ಗಾಡಲು ಅನ್ನನೆ

ದೇವಸ್ಥಾನ, ಜ್ಞಾನ ಮಂದಿರತ್ ಎಲ್ಲರೂ ಪ್ರಾರ್ಥನೆ ಮಾಡಲು. ಆಚೇಂಗಿ ಸಾಧನೆ ಮಾಡ್‌ನ ಫಲ ಚೆನ್ನಂಗಾಳ್‌ಕ್ ಮಾತ್ರ.

## ಅನುಭವತ್‌ನ ಅನುಭವಿಚಿಡಂಡು

ಜ್ಞಾನ ಜ್ಯೋತಿರ ದರ್ಶನಕ್ ಗುರುರ ಉಪದೇಶ ಒರ್ ಸಹಾಯ ಮಾತ್ರ. ಗುರುರ ಸಹಾಯ ಪಡ್‌ಂದಂದ್ ತಾನೇ ಸ್ವತಃ ಸಾಧನೆ ಮಾಡಂಡು. ತಾಂಡ ಮನಸ್ಸ್‌ಲ್ ಆಲೋಚನೆ ಮಾಡಿತ್ ಅರಿಂಜಂಡ್ ಆಡಂನ್ನಕೆ ನಡಕತ ಪೋಚೇಂಗಿ ಗುರುರ ಉಪದೇಶ ಕಲ್ಲ್‌ರ ಮೇಲೆ ನೀರ್ ಬೂಕ್‌ನನ್ನಕೆ. ಒಳ್‌ಕ್ ಪೋಪುಲೆ. ಚಂದ್ರಂಡ ವಿವರಣೆನ ದಾರ್ ಎನ್ನನೆ ಮಾಡ್‌ಚೇಂಗೂ ನಂಗ ಸ್ವತಃ ನೋಟ್‌ನೆನ್ನೆಕ್ಕಾಪ್‌ಲೆ. ಒರ್‌ಮಾಂಗೆ ಪಣ್ಣ್‌ನ ಒಬ್ಬ ತಿಂದಂಡ್ ಈ ಪಣ್ಣ್ ಚಾಯಿಂಡ್‌ಂದ್ ಎಣ್ಣಕ ನಂಗಕ್ ಆ ಚಾಯಿಗೊತ್ತಾಪ. ಮಾಂಗೆರ ರಸ ಅರಿಯಂಡಿಕೆ ಅದ್‌ನ ತಿಂಗಂಡು. ಅಕ್ಕಿ ನಾವುಕ್ ಚೋದ್ ಗೊತ್ತಾಪ. ಒಬ್ಬಂಡ ಭೋಧನೆ, ವಿವರಣೆ ಒರ್ ಬಟ್ಟೆಕಾಟುವ ಮಾತ್ರ. ಬಟ್ಟೆಲೇ ನಡಪದ್ ಮಾತ್ರ ನಂಗಳೇ ನಡಕಂಡು. ಅದೇ ಅನುಭವ. ಅನುಭವತ್‌ನ ಅನುಭವಿಚಿಡಂಡು.

## ಅಜ್ಞಾನ - ಜ್ಞಾನ

ಅಜ್ಞಾನ ಎಣ್ಣುಪದ್ ಪೊರಮೆ ಉಳ್ಳ ವಸ್ತು ಅಲ್ಲ. ಅದ್ ತಾಂಡ ಮನಸ್ಸ್‌ರೊಳ್‌ಲುಳ್ಳದ್. ತಾಂಡಲ್ಲಿ ಉಳ್ಳ ಅಜ್ಞಾನತ್‌ನ ದೂರ ಮಾಡ್‌ನಕ ಅಂಥವಂಗ್ ಎಲ್ಲಿಯೂ ಅಜ್ಞಾನ ಕಾಂಬ್‌ಲೆ. ಮನಸ್ಸಕ್ ಮುಚ್ಚ್‌ನ ಮುಸುಕೇ ಅಜ್ಞಾನ. ಇಂತಾ ಮುಸ್‌ಕ್‌ರ ಕಾರಣ ನಂಗ ನೋಟುವದ್, ಗೇನ ಮಾಡುವದ್ ಎಲ್ಲಾ ತೆಳಿಂಗಿತ್ತಿಪ್ಪ್‌ಲೆ. ಧೂಳ್ ದುಂಬ್‌ನ ಕನ್ನಡಿಲ್ ನಂಗಡ

ಮೂಡ್ ಚಾಯಿಲ್ ಕಾಂಬ್‌ಲೆ ಕನ್ನಡಿಲ್ ಮೂಡ್ ಚಾಯಿಲೆ ಕಾಂಗಂಡಿಕೆ ಕನ್ನಡಿ ಶುದ್ಧವಾಯಿತ್ತಿರಂಡು. ಬೊಳ್‌ಚ ಚಾಯೋಡೆ ಕಾಂಗಂಡಿಕೆ ಅದ್‌ಂಡ ಕನ್ನಡಿ ಚಾಯಿಲಿರಂಡು. ಕನ್ನಡಿ ಅಥವಾ ಚಿಮ್ಮುಣಿ ಸ್ವಚ್ಛವಾಯಿತ್ತಿಂಜಕ ಬೊಳಿಜಾಸ್ತಿ. ತಾಂಡ ಹೃದಯ, ಕಾಮ, ಕ್ರೋಧ, ಮೋಹ, ಮದ ಎಣ್ಣುವ ಕಲ್ಮಶ ಇಲ್ಲತೆ ಶುದ್ಧವಾಯಿತ್ತುಂಡೇಂಗಿ ಅಂತಾ ಹೃದಯತ್ ಜ್ಞಾನ, ನಲ್ಲ ಭಾವನೆ ಮಾತ್ರ ಪೊರಬೂವ.

## ಮನಸ್ಸೇ ಕಾರಣ

ಚಾಯಿಚಂದವುಳ್ಳ ನೀಲಾಕಾಶಕ್ ಮೋಡ ಕವಂಜುವಾಂಗ್ ಗಾಳಿಯೇ ಕಾರಣ. ಮೋಡ ಚದ್‌ರ್‌ಚೇಂಗಿ ಆಕಾಶ ಶುಭ್ರ. ಅದ್‌ಂಗೂ ಗಾಳಿಯೇ ಕಾರಣ. ಇದೇ ರೀತಿ ಮನುಷ್ಯಂಡ ಮನಸ್ಸ್‌ರ ಬಂಧನ, ಬುಡ್‌ಗಡೆಕ್ ಕಾರಣ ಮನಸ್ಸ್. ನಾನಾ ರೀತಿರ ಆಸೆ-ಆಕಾಂಕ್ಷೆ, ಭೋಗ-ವಿಲಾಸ ಪುಟ್ಟ್‌ಚಿಟ್ಟಿತ್ ಬಂಧನ ಮಾಡುವದೂ ಮನಸ್ಸೇ. ಅದೇ ಮನಸ್ಸ್ ಸ್ವಾರ್ಥ, ವಿಷಯ ಸುಖತ್ ಬೇಜಾರ ಪಡತುವಂಜಿ ಒಂದೂ ಬೋಂಡಾ ಎಣ್ಣುವ ಪರಿಸ್ಥಿತಿನೋ ತಪ್ಪ. ನಂಗ ನಂಗಡ ಮನಸ್ಸ್‌ನ ಏದ್ ಬರಿಕ್ ಇಡುವೋ, ಎನ್ನನೆ ಬುಡುವೋ ಅನ್ನನೇ ನಂಗ ಆಪ. ಮನಸ್ಸೇ ನಂಗಡ ಉನ್ನತಿಕೂ ಅವನತಿಕೂ ಕಾರಣ.

## ಎಲ್ಲಿಯೂ ತಕ್ಕ್ ತಪ್ಪೊಕ್ಕಾಗ

ಲೋಕತ್ ನಡಪ ಜೀವನ, ಕಾರ್ಯ, ಕರ್ಮತ್‌ನ ಸೂರ್ಯ ನೋಟಿಯೆಂಡುಂಡೇಂಗೂ ಸೂರ್ಯ ಅದ್‌ಲ್ ಪಾಲ್‌ದಾರನಲ್ಲ. ದುಷ್ಟನೂ, ಶಿಷ್ಟನೂ ಅವಂಡ ದೃಷ್ಟಿಲ್ ಒಂದೇ ದಾರ್ ಎನ್ನನೇ ಇರಡ್ ಅವಂಡ ಬೊಳಿ

ಎಲ್ಲಾಕೂ ಒರೇ ತರ. ದಾರ್ ಎನ್ನನೆ ಎಣ್ಣುವ ವಿವೇಚನೆ ಸೂರ್ಯಂಗಿಲ್ಲೆ. ಅವಂಡ ಕರ್ತವ್ಯ ಬೊಳಿ ಕೊಡ್‌ಪದ್ ಮಾತ್ರ. ಇದೇ ತತ್ವ, ತಿತ್ತ್‌ಕ್, ಬೇವು ಚಿಡುವದ್ ಆಂಡ ಕರ್ತವ್ಯ. ಕೂಳ್‌ನೀರಾಡ್, ತೊಪ್ಪು-ಸದೆ ಆಡ್ ಎಲ್ಲಾನೋ ಬೇವುಚಿಡುವ. ಮನುಷ್ಯನೂ ಈ ತರ ಜೀವನ ಪಡಿಕಂಡು. ತಾಂಡ ಗುಣ ನಡತೆಲ್ ಎಲ್ಲಾರ್‌ನೋ ಒಂದಾಯಿತ್ ಕಾಂಗಂಡು ಬೆಂದು ಬಳಗ ಇರಡ್, ಪರಿಚಯವುಳ್ಳವನಿರಡ್ ಇಲ್ಲತವನಿರಡ್, ಸುಖ, ದುಃಖ, ಕಷ್ಟ ಇರಡ್ ಎಲ್ಲಡಲ್ಲಿಯೂ ಎಕ್ಕಾಲೂ ತಾಂಡ ತೂಕ ತಪ್ಪತ್ತೆನ್ನೆಕೆ ಇಪ್ಪಕ್ ಪ್ರಯತ್ನಪಡಂಡು.

## ದಿವ್ಯ ಚಕ್ಷು

ಜೀವನ ಎಣ್ಣಕ ಕೂಳ್, ಬಟ್ಟೆ, ಮನೆ ಇನ್ನತ ಅನುಕೂಲತೆನೆಲ್ಲಾ ಮಾಡಿಯವದ್ ಮಾತ್ರ ಎಣ್ಣುವದ್ ಪಾದಿಸತ್ಯ. ಜೀವನ ಎಣ್ಣ್‌ನ ಬೊಳಚ್ಚಿ. ಈ ಬೊಳಚ್ಚಿ ಒರೇ ಬರಿಲ್ ಆನಕ ಪೋರ. ಎಲ್ಲಾ ಬರಿಯಾ ಬೊಳಚ್ಚಿ ಆಂಡು. ಕೂಳ್, ಬಟ್ಟೆ, ಮನೆರ ಅನುಕೂಲ ತಾಂಡ ತಡಿನ ಬೊಳತು. ಆಂಡ ಕೂಡೆ ಬುದ್ಧಿಯೂ ಬೊಳೆವಂಡು. ಹೃದಯ ವಿಶಾಲ ಆಂಡು. ಇದ್‌ಲ್ ಒಂದ್ ಬೊಳಂದಿತ್ ಇಂಞೊಂದ್ ಬೊಳೆಯತ ಪೋನಕ ಪೂರ್ತಿ ಮನುಷ್ಯ ಎಣ್ಣುವ ಕೈಯ್ಯುಲೆ. ತನ್ನ ತಾನ್ ರಕ್ಷಣೆ ಮಾಡಿಯವದ್ ಮಾತ್ರ ಜೀವನ ಅಲ್ಲ. ಇಂಞೊಬ್ಬಂಡ ವಿಷಯತೂ ನಂಗಕ್ ದೃಷ್ಟಿ ಬೋಂಡು. ಕನ್ನಡಿ ನೋಟುವವಂಗ್ ಕನ್ನಡಿಲ್ ತಾಂಡ ಪ್ರತಿಬಿಂಬ ಮಾತ್ರ ಕಾಂಬ. ಆಚೇಂಗಿ ಕಣ್ಣ್‌ಕೇ ಕನ್ನಡಿಯಿಟ್ಟಂಡ್ ನೋಟ್‌ನಕ ಇಡೀ ಜಗತ್ತೇ ಕಾಂಬ. ಆನಗುಂಡ್ ನಂಗಡ ಜೀವನ ಮೂಡ್ ನೋಟುವ ಕನ್ನಡಿಯೆನ್ನೆಕೆ ಆಪಕಾಗ, ಬದ್‌ಲ್ ಲೋಕತ್‌ನೇ ನೋಟುವ ದಿವ್ಯ ಚಕ್ಷುವಾಯಿತ್ ಮಾಡಿಯವಂಡು.

## ನಿಷ್ಠೆಕ್ ಕಷ್ಟ ಇಲ್ಲೆ

ತಾಂಗ್ ಸರಿಯಾಯಿತ್ ಕಂಡಾನ ಮನಸ್ಸ್‌ಟ್ಟಿತ್ ಮಾಡುವದೇ ಗೆಲ್ಲುವ ಲಕ್ಷಣ. ಅನ್ನನೇ ಪೂರ್ತಿ ಮನಸ್ಸ್‌ಟಿತ್ ಮಾಡ್‌ನದೆಲ್ಲಾ ನಲ್ಲದಾಯಿತ್ ಕಾಂಬ. ಒರೇ ನಿಷ್ಠೆಲ್, ಮೌನ ಪ್ರಾರ್ಥನೆಲ್ ಮನಸ್ಸ್‌ಲುಳ್ಳಕಾಟ ಪೋಪಂಜಿ ಪುದಿಯ ಧೈರ್ಯ ಬಪ್ಪನ್ನಕೆ ಅನನ್ಯ ವಿಶ್ವಾಸತ್, ಕರ್ತವ್ಯ ನಿಷ್ಠೆಲ್ ಮಾಡ್‌ನ ಕೆಲಸ ನಂಗಕ್ ಆಯಾಸ ತಕ್ಕತೆ ನಲ್ಲ ಫಲ ತಪ್ಪ. ಸಂಶಯ ಪಿಂಞ ಪೋಡಿರ ಬುದ್ಧಿ ಎಲ್ಲಿಯೂ ಪಾಳ್. ಚಿಲ್‌ಂಗ್ ಮಳೆಲ್ ನೆಲಂದಕ ಶೀತ, ನೇಡಿ ಆಕು. ಆಚೇಂಗಿ ಒಕ್ಕುವ ನೀರ್‌ಲ್ ಕುಳಿಚಕ ತಡಿಕ್ ಆರೋಗ್ಯ. ಅನ್ನನೆ ಪೋಡಿ ಹೃದಯತ್ ಅನಾಹುತ, ಮನಸ್ಸ್‌ಟ್ಟಿತ್, ಧೈರ್ಯತ್ ಮಾಡ್‌ನ ಕಾರ್ಯ ನಲ್ಲದಾಪ.

## ಆಕು, ಆಗ ಜೀವನ ಬೆಲೆ

ಜೀವನ ಎಣ್ಣುವದ್ ಎಲ್ಲಾನೋ ಎದ್‌ಪ್‌ಟ್ಟಂಡ್ ಮಾಡುವ ಪೋರಾಟ ಅಲ್ಲ. ಎಲ್ಲಾನೋ ಸ್ವಾಗತ ಎಣ್ಣಿಯಂಡ್ ಮಂಡೆ ಕುಂಬ್‌ಡುವ ಪೋಡಿಕಳಿಯೂ ಅಲ್ಲ. ಕೆಟ್ಟಾಂಗ್ ಕೂಡತೆ, ನಲ್ಲಾನ ಬುಡತೆ ಎಕ್ಕಲೂ ಸಮತೂಕತ್ ನಿಪ್ಪಂತ ಬುದ್ಧಿವಂತಿಕೆ ಬೋಂಡು. ಕೆಟ್ಟದ್, ಕೆಟ್ಟಾಂಗ್ ಎಕ್ಕಲೂ 'ಆಗ' ಎಣ್ಣುವದ್ ನಲ್ಲ ಲಕ್ಷಣ. ಅನ್ನನೆ ನಲ್ಲಾನ ಸ್ವಾಗತ ಮಾಡಿತ್ 'ಆಕು' ಎಣ್ಣುವದ್ ನಲ್ಲ ಲಕ್ಷಣ. ಆನಗುಂಡ್ 'ಆಗ' ಪಿಂಞ 'ಆಕು' ಎಣ್ಣುವ ದಂಡ್ ಶಬ್ಧತ್‌ರ ನಲ್ಲ ಉಪಯೋಗತೇ ನಂಗಡ ಜೀವನಕ್ ಒರ್ ಬೆಲೆ, ಸಾರ್ಥಕತೆ ನಿಂದಿತ್. ಕೆಟ್ಟಾನ ಗುರುತ್ ಮಾಡಿತ್ ವಿರೋಧ ಮಾಡುವದೇ ವಿದ್ಯೆ. ನಲ್ಲಾನ ಅರಿವಂಜಿ ಸ್ವಾಗತ ಬಯಂದುವದೇ ಸಂಸ್ಕೃತಿ. ಆನಗುಂಡ್ ಅಕ್ಷರ ಜ್ಞಾನ ಇಲ್ಲೇಂಗೂ ನಲ್ಲಾಮೆ. ಕೆಟ್ಟಾಮನೆ ಗುರುತ್

ಮಾಡಿತ್ ಬಾವವನೇ ಜ್ಞಾನಿ ಎಣ್ಣ್‌ಚಿಟ್ಟುವ. ಕೆಟ್ಟಾನ 'ಆಗ' ಎಣ್ಣುವದೇ ಸ್ವರ್ಗಕ್ ಬಟ್ಟೆ.

## ಎಲ್ಲಾತೂ ನಲ್ಲಾನೇ ತೇಡ್

ನಂಗ ನಂಗಡ ಕರ್ತವ್ಯ ಮಾಡುವಕ ಎಚ್ಚಕೋಕುರಿ ತಪ್ಪು ಮಾಡುವ. ಆಚೇಂಗಿ ನಂಗ ಮಾಡ್‌ನ ತಪ್ಪುರ ವಿಷಯತ್ ನಂಗ ಮಾಫ್ ಮಾಡಿಯವ. ಆನಕ ಬೋರೆದಾಕೇಂಗಿ ಅಂತ ತಪ್ಪು ಮಾಡ್‌ನಕ ನಂಗ ಮಾಫ್ ಮಾಡುವಕ್ ಮಡಿಪ. ನಂಗಡ ಮನಸ್ಸ್‌ಕ್, ಯೋಚನೆಕ್ ವಿರೋಧವಾಯಿತ್ ನಂಗಕ್ ಅರಿಯತೇ ನಂಗಡ ಕೈ ತಪ್ಪುವ, ಕಾಲ್ ಬೋಂಡತ ರಸ್ತೆಲ್ ಕಾಲ್‌ಡು ಅದೇ ರೀತಿ ಇಂಞಿಒಬ್ಬನೂ ಅವಂಗರಿಂಜಿತೋ ಅರಿಯತೆಯೋ ತಪ್ಪುಮಾಡು. ಅಂತ ಸಂದರ್ಬತ್ ನಂಗ ನಂಗಳ ಎನ್ನನೆ ಕಾಂಬೋ ಅನ್ನನೇ ನಂಗ ಇಂಞಿಒಬ್ಬನೋ ಕಾಂಗಂಡು. ಎಲ್ಲಾನೋ ಕೈತಪ್ಪ್‌ನದ್, ಕಾಲ್‌ಜಾರ್‌ನದ್‌ಂದ್ ನಂಗ ನಂಗಡಲ್ಲಿಯೇ ಅರಿಂಜವಂಡು. ಪ್ರೀತಿ, ಪ್ರೇಮ ನಂಗಡಲ್ಲಿ ಉಂಡೇಂಗಿ ಎಂತಾ ತಪ್ಪೂ ಕ್ಷಮೆ ಮಾಡುವಂತದ್. ಅದಿಲ್ಲತ ಪೋಚೇಂಗಿ ನಂಗಡ ದೃಷ್ಟಿಕ್ ಕಂಡದ್ದೆಲ್ಲಾ ತಪ್ಪಾಯಿತೇ ಕಾಂಬ. ಆನಗುಂಡ್ ಎಲ್ಲಾತೂ ನಲ್ಲಾನೇ ತೇಡಿತ್ ಆಂಜವಂತ ಮನೋಭಾವ ಬೊಳತಿಯವದ್ ನಲ್ಲದ್.

## ಪಾಲ್‌ಟ್ಟುವದ್ ನಲ್ಲದ್

ಮನುಷ್ಯ ಪುಟ್ಟುವಕ ಬೆತ್ತಲೆಯಾಯಿತ್ ಬರೀಕೈಲ್ ಪುಟ್ಟುವ. ಅನ್ನನೇ ಬರೀ ಕೈಲ್ ಚಾವ. ಎಚ್ಚಕೇ ಪೊನ್ನ್, ಬೊಳ್ಳಿ, ಪಣ, ಬೆಲೆಬಾಳುವ ವಜ್ರ, ರತ್ನ ಉಂಡೇಂಗೂ ಚಾವಕ್ ಎಲ್ಲಾನೋ ಬುಟ್ಟಿತೇ ಪೋಂಡು.

ಮನುಷ್ಯ ತಾಂಡ ಪುಟ್ಟ್ ಚಾವುರ ಮಧ್ಯ ಎಚ್ಚಕೋ ವಸ್ತುನ ತಾಂಡದ್‌ಂದೂ, ತಾಂಗೆಂದೂ, ತಾನ್ ಕೂಡಿಟ್ಟವ, ಬೋಂಡಿಯ ಪಣ ಸಂಪಾದನೆ ಮಾಡಿತ್ ಪಣಕ್ಕಾರ ಎಣ್ಣಿಚಿಟ್ಟವ. ಅಧಿಕಾರ ಕುರ್ಚಿಲಳತಂಡ್ ತಾನ್ ಬಲ್ಯವ ಎಣ್ಣ್‌ಚಿಟ್ಟವ. ಜ್ಞಾನ ಸಂಪಾದನೆ ಮಾಡಿಯಂಡ್ ಸರ್ವಜ್ಞ ಎಣ್ಣ್‌ಚಿಟ್ಟವ. ಇನ್ನನೆ ತಾಂಗ್ ಉಂಡ್, ಬಾಕಿ ಉಳ್ಳಯಿಂಗಕ್ ಇಲ್ಲೆ ಎಣ್ಣುವ ಮನಸ್ಸ್ ಚೆರಿಯ ದೃಷ್ಟಿ. ಎಲ್ಲಾನೋ ಇಲ್ಲಿಯೇ ಬುಟ್ಟಿತ್ ಪೋಂಡೂಂದಾನಗುಂಡ್ ಉಳ್ಳಾನ ಇಲ್ಲತಯಿಂಗಡ ಕೂಡೆ ಹಂಚಿಯವದ್ ನಲ್ಲದ್. ಅದೇ ಬಲ್ಯರಿಕೆ, ಜಾಣತನ, ಪ್ರಪಂಚಉಳ್ಳ ನಂಗಡ ಅಲ್ಲ. ನಂಗಳುಂಡ್ ಆನದಲ್ಲ. ಅದ್ ಎಲ್ಲಾಡೋ ಹಕ್ಕ್. ಎಲ್ಲಾಕೂ ಹಕ್ಕ್ ಆನಾನ ನಾಡದ್‌ಂದ್ ಕೂಟಿಯಂಡ್ ಬೀಗ ಇಟ್ಟವದ್ ಬುದ್ದಿವಂತಿಗೆ ಅಲ್ಲ.

## ಪೊನ್ನ್‌ಕ್ಕಿಂಜಿ ನಲ್ಲ ತಕ್ಕ್ ನಲ್ಲದ್

ನಂಗ ನಂಗಡ ಪ್ರತೀದ್ದಿನತ್‌ರ ಜೀವನತ್ ಎಚ್ಚಕೋ ತರಾವರಿ ರೀತಿರ ಜಿಪುಣಂಗಳ ಕಾಂಬ. ಇಂಞೊಬ್ಬಂಗ್ ಸಹಾಯ ಮಾಡುವದಿರಡ್, ಅಥವಾ ಇಂಞೊಬ್ಬಂಗಾಯಿತ್ ಖರ್ಚಿ ಮಾಡುವದಿರಡ್ ತಾಂಡ ನಲ್ಲಾಂಗೂ ಖರ್ಚ್ ಮಾಡತೆ, ಪೊಟ್ಟೆ, ಬಟ್ಟೆ ಕಟ್ಟಿಯೆಂಡ್ ಸಂಪಾದನೆ ಮಾಡುವವೂ ಉಂಡ್. ಇಂತಾ ಜಿಪುಣಂಗ ಸಾಮಾನ್ಯ. ಆಚೇಂಗಿ ಇಂಞೊಬ್ಬಂಡನಲ್ಲ ಗುಣತ್‌ನ ಕಾಂಬಂಜಿ ಮೆಚ್ಚತ, ನಲ್ಲಾನ ಕಾಂಬಂಜಿ ಆಂಡ ವಿಷಯತ್ ಬಾಯ್ಬಿಡತ ಜಿಪುಣಂಗಿಂಜಿ ಬಲ್ಯಜಿಪುಣ, ಕಷ್ಟತುಳ್ಳಯಿನ ಕಂಡಿತ್, ದುಃಖ ಸಂತಾಪತ್ ಬಳಲುವಯಿನ ಕಂಡಿತ್ ಒರ್ ಸಮಾಧಾನ ಎಣ್ಣತಂತವು ಕಮ್ಮಿ ಜಿಪುಣಂಗಳಲ್ಲ. ನಂಗಡ ನಾವು ಇಂಞೊಬ್ಬಂಡ ಆನಂದ, ಸುಖತ್‌ನ ಬೊಳತುವಂಜಿ, ಧೈರ್ಯ ಕೊಡ್‌ಕತ ಪೋಚೇಂಗಿ ಅಂತಯಿಂಡ ಜೀವನ

ವ್ಯರ್ಥ. ಕಷ್ಟಕಾಲತ್ ಪೊನ್ನ್‌ಕೊಡ್‌ಪಾಂಗಿಞ, ನಾಲ್ ಧೈರ್ಯ ತಕ್ಕ್ ಪರೆವಂಜಿ ಧೈರ್ಯ ಕೊಡ್‌ಪದ್ ಎಲ್ಲಾಂಗಿಂಜಿ ನಲ್ಲದ್.

## ಅನುಭವತ್ ಅಮೃತ ಉಂಡ್

ಇಂದೇತ ನಂಗಡ ಪರಿಸ್ಥಿತಿಕ್ ನಂಗ ನಿನ್ನಾಂದ್ ಮಾಡ್‌ನ ಕರ್ಮಕಾರಣ. ಇಂದ್ ಮಾಡುವ ಕೆಲಸ, ಕರ್ಮ, ನಡತೆ, ಶ್ರಮ ನಾಳೆರ ಭವಿಷ್ಯಕ್ ಕಾರಣ. ನಂಗಡ ಇಂದೇತ ಸ್ಥಿತಿಕೂ, ನಾಳೆ ಬಪ್ಪ ಸ್ಥಿತಿಕೂ ನಂಗಳೇ ಕಾರಣ. ನಂಗಡ ಉನ್ನತಿ, ಅವನತಿ, ಬಂಧನ-ಬುಡ್‌ಗಡೆ ನಂಗಡ ಕೈಲೇ ಉಂಡ್. ಬಾಯಾರ್‌ನಲ್ಲಿ ಕಣತರೆನ ಬಗ್ಗಿ ನೋಟ್‌ನಕ ಬಾಯಾರಿಕೆ ಪೋಪದುಂಡಾ? ಓದಿತ್ ದುಂಬಾ ವಿಷಯ ಕೂಟಿಯಂಡಕ ನಂಗಡ ಅಜ್ಞಾನ ಪೋಪದುಂಡಾ? ಆನಗುಂಡ್ ಅರಿಂಜಾನ ಕಾರ್ಯರೂಪತ್ ಅನುಭವಿಚಿಡಂಡು. ಅನುಭವತ್ ಅಮೃತ ಉಂಡ್. ಜಾರಿಪೋಕು, ತಪ್ಪಾಯಿಪೋಕು ಎಣ್ಣಿಯಂಡ್ ಮೊಟ್ಟ್ ಇಡತೆ ಅಳತಕ ಪ್ರಯೋಜನ ಎನ್ನ್ ? ತಪ್ಪುಮಾಡಿತ್ ಅದ್‌ಲ್ಲಿಂಜಿ ಅನುಭವ ಪಡೆಯತ ಪೋನಕ ನಂಗಡಲ್ಲಿ ಮನುಷತ್ವ ಬೊಳೆಯುಲೆ. ನಂಗಕ್ ನಲ್ಲ ಭವಿಷ್ಯ ಬೋಂಡಿಕಿ ಇಂದ್ ನಂಗ ನಲ್ಲದಾಯಿತ್ ಬಾವಂಡು. ನೈಚಿತ್, ಬಿತ್ತಿತ್, ಬೊಳತ್‌ಚೇಂಗಿ ನಲ್ಲ ಬೊಳೆ.

## ತ್ಯಾಗ, ಪ್ರೇಮವೇ ಬಲ

ಲೋಕತ್ ಲಕ್ಷಾಂತರ ರಾಜಂಗ ಆಳ್‌ಚಿ, ಪೋಚಿ. ಅವು ಎಲ್ಲಾ ತಾಂಡ ಅಧಿಕಾರತ್‌ನ ಅಯಿಂಡಯಿಂಡ ರಾಜ್ಯತ್ ಮಾತ್ರ ಮಾಡ್‌ಚಿ. ಚೆನ್ನಂಗ್ ರಾಜಂಗಡ ಅಚ್ಚಕೂ ಇಂಜಿತ್ತಿಪ್ಪಕ್ಕಿಲ್ಲೆ. ಅಂತಾ ಒರ್ ರಾಜ್ಯತ್‌ರ ರಾಜಂಡ ಮೋಂವ ಬುದ್ದನಾಯಿತ್ ಇಂದೂ ತಾಂಗ್ ಪೂಜೆ ಮಾಡ್‌ಚಿಟ್ಟಂಡ್

ಉಂಡ್. ನೂರಾರ್ ವೀರ ರಾಜಪುತ್ರಂಗ ಆಯಿಪೋಚೇಂಗೂ ಈ ರಾಜ್ಯ ಬುಟ್ಟಿತ್ ಪೋನವನ ಪೂಜುವಕ್ ಕಾರಣ ಎನ್ನ್ ? ಒರ್ ಆಚಾರಿ ಪಣಿಕ್ಕಾರಂಡ ಮೋಂವ ಏಸು ಕ್ರಿಸ್ತ ಎಣ್ಣೆಚಿಟ್ಟಂದ್ ಪೂಜ್‌ಚಿಟ್ಟಿಂಡುಂಡ್. ಒರ್ ಬನಿಯಂಡ ಮೋಂವ ಮಹತ್ಮಾಗಾಂಧಿ ಆಚಿ. ಕುಟುಂಬ ಘನತೆ ಅಪ್ಪಂಡ ಬಲ್ಯರಿಕೆ, ಪಣತ್ತ್‌ರ ಶಕ್ತಿ ಉಳ್ಳವೊಬ್ಬರೂ ಇನ್ನನೆ ಪೂಜೆ ಮಾಡ್‌ಚಿಟವಚ್ಚಕ್ಕಾಯಿಲೆ ಚತ್ತಪಿಂಞ್ಞೂ ಚಿರಂಜೀವಿಯಾಯಿತ್ ಮಾಡುವ ಶಕ್ತಿ, ಗರೀಬ ನಾಚೇಂಗೂ ಎಲ್ಲಾಡ ಕೈಂಜಿ ಪೂಜಿಚಿಟ್ಟಂವು ತಾಂಡ ಘನತೆ, ಗೌರವತ್‌ನ ತಾಂಡ ತ್ಯಾಗ ಫಲತ್ತಿಂಜಿ ಪಡ್‌ಂದತ್. ಇಂಞ್ಞೂಬ್ಬಂಗಾಯಿತ್ ತಾಂಡ ಪ್ರೀತಿನ ಅರ್ಪಣೆ ಮಾಡ್‌ನ ಫಲ. ಪ್ರೀತಿ, ತ್ಯಾಗ ಎಣ್ಣುವದ್ ಚತ್ತತ್ತೇಂಗೂ ಬದುಕಿತ್ತಿಪ್ಪನ್ನೆಕೆ ಮಾಡುವ ಅಮೃತ.

## ಮನೆಯೇ ಗರ್ಭಗುಡಿ

ಧರ್ಮ, ವೇದಾಂತ ಎಣ್ಣೆಯಂಡ್ ಮಂದಿರ, ದೇವಸ್ಥಾನತ್‌ನ ತೇಡಿ ನಡಕಂಡಿಯ ಅವಶ್ಯಕತೆ ಇಲ್ಲೆ. ಸಂಸಾರಿಯಾನವಂಗ್ ಧರ್ಮ, ವೇದಾಂತ, ದೇವ ಎಲ್ಲಾ ತಾಂಡ ಮನೆರೊಳ್‌ಲೇ ಉಂಡ್. ನ್ಯಾಯ ಪೋಲೆ ತಾಂಡ ಆಶ್ರಯತುಳ್ಳಯಿನ ಪೋಷಣೆ ಮಾಡುವದ್, ಮನೆಕ್ ಬಂದ ಬೆಂದುನ ತಾಂಡ ನ್ನೆಕೇ ಕ಼ಾಂಬಂಜಿ ತಕ್ಕಾರ ಮಾಡುವದ್, ಇದೆಲ್ಲಾ ದೇವಡ ಸೇವೆ, ಪ್ರಾರ್ಥನೆ ಉಳ್ಳೆನ್ನೆಕೆ. ತಾಂಡ ಪೊಣ್ಣ್‌ರ ಮೇಲೆ ಪ್ರೀತಿ ಬೆಚ್ಚಂಡ್, ಅವಡ ಮನಸ್ಸ್‌ನ ನೊಂಬಲಚಿಡತೆ ಅವಡ ಪಿಂಞ್ಞ್ ಅವಡ ಮಕ್ಕಡ ಮೇಲೆ ಪ್ರೀತಿ ಸಂಪಾದನೆ ಮಾಡುವದ್ ದೇವಡ ಆರಾಧನೆ ! ಪ್ರೇಮ ದುಂಬಿತ್ ನಡಪ ಸಂಸಾರ, ಮಣಭೂಮಿಲೆ ನೀರ್ ಕ್‌ಟ್ಟ್‌ನೆನ್ನೆಕೆ. ಆಯಾಸ ಪರಿಹಾರ ಆಪ. ಆಶ್ರಯ ಕ್‌ಟ್ಟುವ. ನೀತಿವಂತಳಾನ ಪೊಣ್ಣ್‌ರ ಪ್ರೀತಿನ ಕಂಡಂತಾ ವಡಿಯಂಗ್ ಎಲ್ಲಾ

ಸದ್ಗುಣ ದುಂಬಿ ಬಪ್ಪದೇ ಅಲ್ಲತೆ ದೇವಡ ಬಟ್ಟೆಲ್ ಮಿಂಞಕ್ಕೇ ಪೋಯೆಂಡಿಪ್ಪ.

## ನಿಷ್ಕಾಮ ಕರ್ಮ

ಪಣಿ ಕೆಯ್ಯುವ, ನೈಪ ಸುಖಕ್ಕಾಯಿತ್‌ಂದ್ ನಂಬಿಕೆ. ಕೆಲಸತ್ತ್‌ಂಜಿ ಇಚ್ಚಿಕೇ ಲಾಭ ಬೋಂಡು, ಲಾಭ ಬರಂಡು ಎಣ್ಣುವ ಆಸೆಲ್ ಕೆಲಸ ಸುರುಮಾಡುವದ್ ಪೆರ್ತ್‌ಕುರಿ ದುಃಖಕ್ ಕಾರಣ. ಗೇನ ಮಾಡ್‌ನ ಫಲ, ಲಾಭ ಕ್‌ಟ್ಟತ್ತಿಪ್ಪಕ ನಿರಾಸೆ, ದುಃಖ ಬಪ್ಪ. ನಂಗ ಮಾಡುವ ಪ್ರತಿಯೋರ್ ಕೆಲಸತೂ, ಆಸೆ - ಆಮಿಷತೂ, ಭಕ್ತಿ-ತ್ಯಾಗತೂ, ಪ್ರೀತಿಲೂ ಲಾಭತ್‌ರ ಆಸೆಬೆಚ್ಚಕ ನಂಗಕ್ ಸುಖಶಾಂತಿರ ಬದ್‌ಲ್ ದುಃಖ ಸಂತಾಪವೇ ಬಪ್ಪ. ಅವ್ವ ಮಕ್ಕಡಾತ್ ಅವ್ವ ತಾಂಡ ಮಕ್ಕಡ ಲಾಲನೆ-ಪೋಷಣೆರ ಜವಾಬ್ದಾರಿ ಪೊರ್ತಂಡ್ ನೈಪ. ಅವ್ವಂಡ ನೈಪುಲ್ ಏದ್ ರೀತಿಲೂ ಫಲಾಪೇಕ್ಷೆ ಇಪ್ಪ್‌ಲೆ. ಅನ್ನನೇ ನಂಗಡ ಭಕ್ತಿ, ತ್ಯಾಗ, ಪ್ರೀತಿ, ಪ್ರೇಮತೂ ಫಲಾಪೇಕ್ಷೆ ಇಲ್ಲತೆ ನಡಂದಕ ಅದ್‌ಲ್ ಆನಂದ ಶಾಂತಿ ಕ್‌ಟ್ಟುವ. ಇದ್‌ನೇ ಭಗವದ್ಗೀತೆಲ್ "ನಿಷ್ಕಾಮಕರ್ಮ" ಎಣ್ಣಿತ್. ಎಲ್ಲಿ ಆಸೆ, ಕಾಮಕಾಮತೆ ಉಂಡೋ ಅಲ್ಲಿ ನಿರಾಸೆ ಅತೃಪ್ತಿ ಇಪ್ಪದ್ ಸ್ವಾಭಾವಿಕ. ಕರ್ಮ ಮಾಡಂಡು, ಫಲತ್‌ನ ದೇವಕ್ ಬುಡಂಡು.

## ಬಯಕೆ ಬುಡ್‌ಗಡೆ

ಬುಡ್‌ಗಡೆ ಅಥವಾ ಸ್ವಾತಂತ್ರ್ಯತ್‌ರ ಬಯಕೆ ಉಲಗತುಳ್ಳ ಜೀವಿಯಕ್ಕೆಲ್ಲಾ ಉಳ್ಳನ್ನಕೆ ಕಾಂಬ. ಮನುಷ್ಯಂಗೂ ಈ ರೋಗ ಉಂಡ್. ಒರ್ ಕಳ್ಳ, ಕಳ್ಳತನ ಮಾಡುವದ್ ಅವಂಡ ಪಣತ್‌ರ ತೊಂದರೆಂಜಿ ಬುಡ್‌ಗಡೆಕ್ಕಾಯಿತ್. ಜಿಪುಣ ತಾನ್ ಖರ್ಚಿಮಾಡತೆ ಸಂಪಾದನೆ ಮಾಡುವೊ

ತಾಂಡ ಬಡತನ ನೀಸುವಕ್ಕಾಯಿತ್. ತತ್ವಜ್ಞಾನ ಅರಿವ ಸಂಸಾರತ್‌ಂಜಿ ಬುಡ್‌ಗಡೆಕಾಯಿತ್. ಪಾಪಕಾರ್ಯ ಮಾಡುವೊ ಪಾಪಿ ಇರಡ್, ಕಳ್ಳತನ ಮಾಡುವೊ ಕಳ್ಳನಿರಡ್ ಎಲ್ಲರೂ ಒಂದಲ್ಲ ಒರ್ ರೀತಿಲ್ ಬುಡ್‌ಗಡೆಕ್ ಪ್ರಯತ್ನ ಪಡುವ. ಚೆನ್ನಂಗಾಳ್ ಇರ್‌ಟ್ ಬಟ್ಟೆ ಪುಡಿಕು. ಚೆನ್ನಂಗಾಳ್‌ರ ಪಾಪ ಮಾಡುವ ಬಟ್ಟೆ ಇಕ್ಕು. ಏದ್ ಬಟ್ಟೆಲ್ ಕಷ್ಟಪಟ್ಟಿಕೋ ಆಂಡ ಅನುಭವ ಕ್‌ಟ್ಟುವಕ ಪುನಃ ನಲ್ಲ ಬಟ್ಟೆಕ್ ಬರತಿರ. ಚಾವುನ್ನುಂಡ್ ತಡಿರ ಬುಡ್‌ಗಡೆ ಆಪನ್ನೆಕೆ ಪ್ರತಿಯೊಂದು ಬುಡ್‌ಗಡೆ ಆಯಿತ್ ಅನಂತಡಲ್ಲಿ ಐಕ್ಯ ಆಪಕ್ ಮಿಞ್ಞಾಕ್ ನುಗ್ಗುವ.

## ತಾಂಡ ನಡತೆ ತಾಂಗ್ ಗೌರವ

ತಿತ್ತ್‌ಕ್ ಕೈಯಿಟ್ಟ್‌ಕ ಚುಡುವ. ನೀರ್‌ಲ್ ಮುಳಿಪೋಚೇಂಗಿ ಚಾವದ್ ನೇರ್. ಇದ್‌ಲ್ ಸಂದೇಹ ಇಲ್ಲೆ. ನಾಳೆ ಸೂರ್ಯ ಪೂರ್ವದಿಕ್ಕ್‌ಲ್ ಉದಿಪನೆಕ್ ಕಾಂಬಾತೂ ಸಂಶಯ ಇಲ್ಲೆ. ಇಂದೇತನೆಕೆ ನಾಳೆಯೂ ಗಾಳಿ ಇಂಜಿತೇ ಇಪ್ಪ ಎಣ್ಣುವಾಂಗ್ ಅನುಮಾನ ಇಲ್ಲೆ. ಈ ವಿಶ್ವಾಸ, ಭರವಸೆ, ನಂಬಿಕೆ ನಂಗಡಲ್ಲಿಪ್ಪಕ್ ಕಾರಣ ಅವೆಲ್ಲಾ ಎಕ್ಕಾಲೂ, ಎಂದೆಂದೂ ಚಾಚೂ ತಪ್ಪತೆ, ಬದ್‌ಲಾತೆ ನಡಂದ್ ಬಪ್ಪದ್. ಅನ್ನನೆ ನಂಗಡ ತಕ್ಕ್, ಕೊಡ್‌ತ ಭರವಸೆ, ಸೂರ್ಯ ದಯೆತ್‌ರನ್ನೆಕೆ ನಿಶ್ಚಿತವಾಯಿತ್ ಅನ್ನನೇ ಮಾಡುವೀಂದ್ ಎಣ್ಣುವ ವಿಶ್ವಾಸತ್‌ನ ನಂಗ ಸಂಪಾದನೆ ಮಾಡಂಡು. ಅಂತಯಿಂಗಡ ಬಾಯಿತಕ್ಕೇ ಕರಾರ್ ಕಾಗದ ಆಪ. ಅಂತವು ಎಲ್ಲಾಡ ವಿಶ್ವಾಸಕ್ ಪಾತ್ರಂಗಳಾಪ. ಎಲ್ಲಾಡ ಕೈಂಜೂ ಗೌರವ ಪಡಂದವ. ಭರವಸೆ ಕೊಡ್‌ತ, ಪಿಞ್ಞಾ ಅದನ ಬೆಚ್ಚವಂಡು. ಅದೇ ಪುರುಷತ್ವ.

# ನಲ್ಲರಿಕೆ ನಂಗಡ ಕೈಲುಂಡ್

ದಾರೂ ಪುಟ್ಟುವಕೇ ನಲ್ಲಗುಣತ್‌ನ್ನೆಲ್ಲ ಕೆಟ್ಟಿಯಂಡ್ ಪುಟ್ಟುಲೆ. ಪುಟ್ಟುವಕ ಎಲ್ಲಾರೂ ಒಂದೇ. ನಲ್ಲಗುಣ, ಸದ್ಗುಣ ಬಪ್ಪ ನಂಗಡ ಸ್ವಂತ ಸಾಧನೆಲ್. ಸದ್ಗುಣ ನಂಗಡಾಪಕ್ ನಂಗಕ್ ಆಪಚ್ಚಕ್ ಹಟ ಬೋಂಡು. ಸಾಧನೆ ಮಾಡಿತೇ ಮಾಡುವೀಂದ್ ನಿಶ್ಚಲತೆ ಬೋಂಡು, ಬೇಲ್ ಉತ್ತಿತ್, ಗೊಬ್ಬರ ಇಟ್ಟಿತ್ ಸಮಯ ಸೆರಿಯಾಯಿತ್ ಬಿತ್ತ್‌ಟ್ಟಿತ್ ಬೊಳತಿತ್, ಪ್ರಾಣಿ, ಪಕ್ಷಿಯಡ ಪಾಲಾತನ್ನೆಕೆ ಎಚ್ಚರ ಬೆಚ್ಚಿತ್ ಕಾಪಾಡ್‌ಚೇಂಗಿ ಬೊಳೆ ಕೊಯ್ಯೊಲು. ಅನ್ನನೆ "ಹೃದಯ" ಎಣ್ಣುವ ಬೇಲ್‌ಲ್ "ಸದ್ಗುಣ" ಎಣ್ಣುವ ಬೊಳೆನ ಬೊಳತುವಂಡು. ಮನುಷ್ಯಂಗ್ ತಾನಾಯಿತೇ ಏದ್ ಗುಣವೂ ಬರ. ನಂಗ ಭೂಮಿಲ್ ಪುಟ್ಟ್‌ನ ಪಿಂಞ ತಾಂಡ ವಾತಾವರಣ, ಸಿನೇತಿಕೆ, ಜನಡ ಪ್ರಭಾವಕ್ ಕಣಿಂಜಿತ್ ತಾಂಡ ಗುಣತ್‌ನ ಪಡಂದವ. ಮನುಷ್ಯ ನಲ್ಲ ಗುಣಕ್ಕಾಯಿತ್, ಪಟ್ಟಣಿ, ತಪಸ್ಸ್, ನೀಮ, ನಿಷ್ಠೆ ಸಾಧನೆ ಮಾಡಂಡು. ಅನ್ನನೆ ಮಾಡ್‌ನಕ ನಲ್ಲಂವನಾಯಿತ್ ಉತ್ತಮನಾಪದ್ ಎಲ್ಲಾಡ ಕೈಲುಂಡ್.

# ಎಚ್ಚರ ಇಲ್ಲೇಂಗಿ ನಾಶ

ಈ ಲೋಕವೇ ನಾಶಾಯಿತ್ ಎಣ್ಣಿತ್ ಮನುಷ್ಯ ಕಳಿಪದುಂಡ್. ಪ್ರಕೃತಿಲ್ ಪುಟ್ಟ್‌ನದೆಲ್ಲಾ ನಾಕಾಯಿತ್ ಎಣ್ಣೆಯಂಡ್ ಎಲ್ಲಾಂಡ ಮೇಲೆ ತಾಂಡದ್‌ೕಂದ್ ಮುದ್ರೆ ಒತ್ತುವಕ್ ಕಳಿಪ. ಪ್ರಾಣಿ, ಪಕ್ಷಿ, ಮರ, ಗಿಡ, ಭೂಮಿ, ನೀರ್ ಎಲ್ಲಾನೋ ತಾಂಗ್ ಬೋಂಡಿಯನ್ನೆಕೆ ಉಪಯೋಗಿಚಿಟ್ಟವ. ಮನುಷ್ಯ ಎಲ್ಲಿ ಪೋಚೇಂಗೂ ಲೂಟಿ ಮಾಡಿಯಂಡಿಪ್ಪ. ಲೋಕ ಸೃಷ್ಟಿ ನಾಕಾಯಿತ್‌ಂದ್ ನಂಬುವಂವ ತಾನೂ ಲೋಕಕ್ಕಾಯಿತ್ ಸೃಷ್ಟಿಯಾನವೇಂದ್ ಅರಿವುಲೆ. ಪ್ರಕೃತಿ ಪಿಞ್ಞ ಮನುಷ್ಯಂಗ್ ನಲ್ಲ ಸಮರಸ ಇಲ್ಲತ ಕಾರಣ

ಎಲ್ಲೆಲ್ಲಿಯೂ ನಾಶ, ಧ್ವಂಸ ನಡಪ, ಮನುಷ್ಯಂಡ ನಡತೆ ನಿಸರ್ಗಕ್ ವಿರೋಧ ಉಂಡ್ ಜಗತ್ತ್ ಮನುಷ್ಯಂಗ್ ಮಾತ್ರ ಅಲ್ಲ. ದಿನಾ ಆಯಿರ ಜನ ಪುಟ್ಟುವ ಚಾವ ಪ್ರಕೃತಿ ಮಾತ್ರ ವ್ಯತ್ಯಾಸ ಇಲ್ಲತೆ ಅನ್ನನೇ ಇಪ್ಪ, ಉಂಡ್. ಪ್ರಕೃತಿಂಜಿ ನಂಗ ಪಡಂದಾಂಗೆಲ್ಲ ಪ್ರತಿ ರೂಪವಾಯಿತ್, ನಂಗ ಪ್ರಕೃತಿಕ್ ಕೊಡ್‌ಕಂಡಿಯೆ ಕರ್ತವ್ಯ ಉಂಡ್. ಅದ್‌ನರಿಯತವು ನಾಶತ್‌ರ ಬಟ್ಟೆಕ್ ತನ್ನ ತಾನ್ ನಡಪ.

## ಪ್ರೇಮವೇ ಶಕ್ತಿ

ಪ್ರೇಮತ್‌ರ ಅನಂತ ಶಕ್ತಿ ಗೇನ ಮಾಡುವ ಕಯ್ಯತದ್. ತಾನ್ ಪ್ರೇಮಿಚಿಟ್ಟವಡ ಪ್ರೇಮಕ್ಕಾಯಿತ್ ಏದೇ ಕಷ್ಟತ್‌ನ ಸಹಿಸುವ, ತ್ಯಾಗ ಮಾಡುವ, ಅಸಾಧ್ಯತೆನ ಸಾಧನೆ ಮಾಡುವ, ಅಮೂಲ್ಯವಾನಾನ ಕೊಡ್‌ಪ, ಕಡೇಕ್ ಜೀವತ್‌ನ ಅರ್ಪಣೆ ಮಾಡುವಕೂ ತಯಾರಿಪ್ಪಯಿನ ಕಾಂಬದ್ ಅಪರೂಪ ಅಲ್ಲ. ಅಂತಾ ಪ್ರೇಮ ಒರ್ ವ್ಯಕ್ತಿಕ್ಕಾಯಿತ್ ಮಾತ್ರ. ಅವಳೇ ಅಥವಾ ಅಂವನೇ ಈ ಪ್ರೇಮತ್‌ರ ಸರ್ವಸ್ವ. ಅದೇ ಪ್ರೇಮತ್‌ನ ಉಲಗತುಳ್ಳ ಜನಡ ಮೇಲೂ ಒಕ್ಕ್‌ಚಿಡಲು. ಅಂತ ವಿಶಾಲ ಮನೋಭಾವನೆ ಈ ಎಲ್ಲಾ ಪ್ರೇಮಿಯಳುಂಡ್ ಅಸಾಧ್ಯ, ಅದ್ಭುತ ಕೆಲಸ ಆಪ. ಈ ವಿಶಾಲ ಪ್ರೇಮತ್‌ನ ಆಶ್ಚರ್ಯ ರೀತಿಲ್ ಗೇನ ಮಾಡತಂತ, ಕಂಡ್ ಅರಿಯತಂತ ಕೆಲಸ ಮಾಡ್‌ಚಿಡುವ. ಅದೇ ಪ್ರೇಮತ್‌ನ ಭಕ್ತನಾನಂವೂ ದೇವಡ ಮೇಲೆ ಬೆಚ್ಚಕ, ಅನಂತ ಶಕ್ತಿಲ್ ಒಂದಾಯಿತ್ ಅಮರನಾಪ. ತಾಂಡ ಸ್ವಂತ ಜೀವನ ಇರಡ್, ಸಮಾಜ ಕೆಲಸ ಇರಡ್ ದೇವಡಲ್ಲಿ ಭಕ್ತಿ ಇರಡ್, ಪ್ರೇಮ ಎಣ್ಣುವದ್ ಎಲ್ಲಾಂಡೋ ಸರ್ವಶಕ್ತಿ.

## ಪವಿತ್ರನಾಯಿತಿರಂಡು

ಮನಸ್ಸ್‌ಲ್ ಕೇಡ್ ಕಿಚ್ಚಿ, ಪಗೆ, ದ್ವೇಷ, ಅಸೂಯೆ, ಜಗಳತ್‌ನೆಲ್ಲಾ

ದುಂಬ್‌ಚಿಟ್ಟಂಡ್ ಬೈಟ್ ಬುದ್ದವಕ್ಕಾಗ. ಅಂತೆಲ್ಲಾ ಗೇನ ಮಾಡಿಯಂಡ್ ಬುದ್ದಂಡಕ ವರ್ಕ್ ಬಪ್ಪ್‌ಲೆ, ವಿಶ್ರಾಂತಿ ಕ್‌ಟ್ಟುಲೆ. ದಿನಾ ಕೈಯ್ಯುವ ಪಣಿಲ್, ಬೋರೆ ಬೋರೆ ಕಾರ್ಯಾಚರಣೆಲ್, ಚೆಡಿ ಅಸೂಯೆ, ಅತೃಪ್ತಿಕ್ ಸೂರಾರ್ ಕಾರಣ ಇಪ್ಪ. ಅಂದೇತ ಅತೃಪ್ತಿ, ಚೆಡಿ, ದ್ವೇಷ ಇಂತಾನ ಸೂರ್ಯ ಮುಳು ವಾಂಗಿಂಜಿ ಮಿಞ್ಞೀ ಪರಿಹಾರ ಮಾಡಿಯವಂಡು ಬೈಟ್ ಬುದ್ದವಾಂಗಿಂಜಿ ಮಿಞ್ಞ ತಾಂಡ ಮನಸ್ಸ್‌ನ ಚಾಯಿಲೆ ಬೆಚ್ಚವಂಡು. ನಂಗ ದೇವಸ್ಥಾನತ್ ಪೂಜೆಕ್ ಪೋಪಕ, ಕೈ, ಕಾಲ್, ಮೂಡ್ ಕತ್ತಿಯಂಡ್, ಜೀವನತ್‌ರ ಕಷ್ಟ, ನಷ್ಟತ್‌ನ ಮರ್‌ಂದಂಡ್, ಮನಸ್ಸ್‌ನ ಶುದ್ಧವಾಯಿತ್ ತಾಂಡ ನಿರ್ಮಲ ಮನಸ್ಸ್‌ನ ಅರ್ಪಣೆ ಮಾಡುವಕ್ ಪೋಪ. ಅನ್ನನೆ ನಂಗ ಬೈಟ್ ಬುದ್ದವಕಾಪಕ ದಿನತ್‌ಲಾನನೆಲ್ಲಾ ಮರಕಂಡು. ಸೂರ್ಯ ಮುಳುವಕ ನಂಗಳೂ ನಂಗಡ ಕಷ್ಟನಷ್ಟತ್‌ನ ಮುಳ್‌ಕಿಯವಂಡು. ಪೊಲಾಕ ಸೂರ್ಯನ ಕಾಂಬಕ ಪುದಿಯ ಉತ್ಸಾಹ ಪವಿತ್ರತೆಲ್ ಕರ್ಮ, ಕಾರ್ಯಮಾಡುವಕ್ ಸುರುಮಾಡಂಡು.

## ಕಷ್ಟಕ್ಕಿಲ್ಲತವು

ನಾಗಕಟ್ಟೆಲ್ ಪೂಜೆ ಮಾಡುವವೂ ಕೂಡ ನೇರಾನ ಪಾಂಬು ಬಂದಕ ಪೊಜ್ಜಿ ಕೊಲ್ಲುವಕ್ ನೋಟುವ. ಬಲ್ಯ ಉದಾರಿಯಾಯಿತ್ ತತ್ವ ಎಣ್ಣುವವೂ ತಾಂಡ ಅನುಕೂಲಕ್ ಧಕ್ಕೆ ಬಂದಕ ಚೆಡಿಬಪ್ಪ. ಇಞ್ಞೊಬ್ಬಂಗ್ ಬೋಧನೆ ಮಾಡಲು, ತಾನೇ ಅದ್‌ನ ಆಚರಣೆ ಮಾಡುವಕ್ ಮಡಿಪ. ಪ್ರತೀ ಒಂದಾತೂ ಮನುಷ್ಯ ತಾಂಡ ಸ್ವಂತತ್ ನಲ್ಲಾನೇ ನೋಟುವ. ದೇವಳ ಪೂಜೆ ಮಾಡುವದೂ ಅನ್ನನ್ನಾಯಿತ್. ತಾಂಗ್ ಸುಖ, ಸೌಖ್ಯ ಬೋಂಡೂಂದ್ ಪ್ರಾರ್ಥನೆ ಮಾಡುವ. ಕ್‌ಟ್ಟತ ಪೋಚೇಂಗಿ ದೇವಳ ಬೈಯ್ಯುವವನೇ ಜಾಸ್ತಿ. ಮನುಷ್ಯ ಮೂಡ್ ನೋಟಿತ್ ತೆಳಿಪ ಎದೊ ಲಾಭಕ್ಕಾಯಿತ್. ಕೈ ಎಡ್‌ತ್

ಕೊಡ್‌ಪದೂ ಏದೋ ಗುರಿಕ್ಕಾಯಿತ್. ನಡು ಬಗ್ಗಿತ್ ಸಹಾಯ ಮಾಡುವದೂ ತಾಂಡ ಸ್ವಾರ್ಥಕ್ಕಾಯಿತ್ ಇನ್ನನೆ ಎಲ್ಲಾ ತಾಂಗಾಯಿತ್, ತಾಂಡಯಿಂಗಕ್ಕಾಯಿತ್. ಅಲ್ಲೇಂಗಿ ಇಲ್ಲೆ. ಚತ್ತೆಕ್ ಬಂದ ಜನ ಬೈಟ್‌ಬೈಟಾಪಕ ಅಲ್ಲಿ ಇಕ್ಕತೆ ಪೋಪನ್ನೆಕೆ, ತಾಂಡ ಕಾರ್ಯಕಾಯಿತ್ ಬೆಂದೂರ್ತ ಮಾಡುವಂವ, ಕಷ್ಟಕಾಲತ್ ಅಲ್ಲಿ ಇಪ್ಪದೇ ಇಲ್ಲೆ. ತಾಂಡ ತೀಟೆ ತಿಂದಲ್ಲಿ ಅಲ್ಲಿ ಇಪ್ಪ್‌ಲೆ.

## ಹೃದಯ ಪವಿತ್ರ ಇರಂಡು

ಅಭಿಪ್ರಾಯ ಎಲ್ಲಾಡೋ ಒರೇ ರೀತಿ ಇಪ್ಪ್‌ಲೆ. ಇಪ್ಪಕ್ಕಾಗ. ಅಂವಂವಂಗ್ ಅವಂಡವಂಡ ಅಭಿಪ್ರಾಯ ಇರಂಡು. ಅಭಿಪ್ರಾಯ ತಪ್ಪಾಚೇಂಗಿ ತಿದ್ದಿಯವಲು. ಆಚೇಂಗಿ ಅಭಿಪ್ರಾಯಕ್ ಅಡಿಪಾಯ ಆನ ಆಂತರ್ಯ ಕೆಡುವಕ್ಕಾಗ. ವಿದ್ಯುತ್ ಬಲ್ಪ್ ಕೆಟ್ಟ್ಚಕ ಬದಲ್ ಮಾಡಲು. ವಿದ್ಯುತ್ ಉತ್ಪಾದನೆ ಮಾಡುವ ಯಂತ್ರಕೆಡತನ್ನಕೆ ನೋಟಿಯವಂಡು . ಗಿಡತ್ ಎಲಕಂಡ ಒಣಂಗಿ ಪೋಚೀಂದ್ ಬೇಜಾರ ಮಾಡುವ ಅವಶ್ಯ ಇಲ್ಲೆ. ಒಣಂಗ್‌ನ ಎಲ್‌ಕಂಡತ್ ಬದಲ್ ಇಞ್ಞೋರ್ ಎಲೆ ಚಿಗ್‌ರುವ. ಆಚೇಂಗಿ ಆ ಗಿಡತ್‌ರ ಬೇರ್ ಮಾತ್ರ ಒಣಂಗುವಕ್ಕಾಗ ಬೇರ್ ಒಣಂಗಿ ಪೋಚೇಂಗಿ ಗಿಡವೇ ನಾಶ ಆಪ. ಆನಗುಂಡ್ ಎಲ್ಲಿಯೋ ಒರ್ ಕೆಲಸ ತಪ್ಪ್‌ಚೇಂಗಿ, ಎಲ್ಲಿಯೋ ಒರ್ ತಕ್ಕ್ ಗಡಿಮೀರ್‌ಚೇಂಗಿ ಅದೋರ್ ಬಲ್ಯ ವಿಷಯ ಆಪ್‌ಲೆ. ಅದ್‌ನ ಸರಿಪಡತಿಯ ಪೋಲು ಆಚೇಂಗಿ ಹೃದಯ ಮಾತ್ರ ಪವಿತ್ರ ಆಯಿತೂ, ನಿಷ್ಕಲ್ಮಷ ಆಯಿತಿರಂಡು. ಹೃದಯ ಕೆಟ್ಟ್ಚಕ ಮನುಷ್ಯತ್ವವೇ ಕೆಟ್ಟನ್ನೆಕೆ.



## ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,
## ಮಡಿಕೇರಿ

---

**ಪ್ರಕಟಣೆ ಸಮಿತಿ**

| | |
|---|---|
| ಮೇಕೇರಿರ ಕೆ. ಕಾರ್ಯಪ್ಪ | ಅಧ್ಯಕ್ಷ |
| ಕೊರವಂಡ ಎ. ಗಣಪತಿ | ರಿಜಿಸ್ಟ್ರಾರ್ |
| ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ | |
| ದೇಯಂಡ ರುಕ್ಮಿಣಿ ಕುಶಾಲಪ್ಪ | |
| ಕಾಮೆಯಂಡ ಮುತ್ತಣ್ಣ | |
| ನೆರವಂಡ ಎಂ. ಉಮೇಶ್ | |

---

# ಚೇಂದ್ರಿಮಾಡ ಗ. ಮುತ್ತಪ್ಪ



ಚೇಂದ್ರಿಮಾಡ ಜಿ. ಮುತ್ತಪ್ಪ ಅವು ನಾಂಗಾಲ ಗ್ರಾಮ ಚೇಂದ್ರಿಮಾಡ ಗಣಪತಿ ಅಯಿಂಗಡ ಪೋಂವ. ನಾಂಗಾಲ, ಮಡಿಕೇರಿ, ಪೊನ್ನಂಪೇಟೆ, ವೀರಾಜಪೇಟೆ, ನಾಪೋಕ್ಲ್, ಮದ್ರಾಸ್‌ಲ್ ಓದಿತ್ ಕೃಷಿ ಇಂಜಿನಿಯರ್ ಆಯಿತ್ ಚಾಕರಿ ಮಾಡುವಂಜಿ ನಿವೃತ್ತಿ ಆಚಿ. 1969ಲ್ ರಷ್ಯ ಪ್ರವಾಸ ಮಾಡಿತ್ ಬಾತ್. ಹೈದರಾಬಾದ್ ಸರಕಾರ, ಕೊಡಗ್ ಸರಕಾರ, ಕರ್ನಾಟಕ ಸರಕಾರತ್ ಕರ್ತವ್ಯ ಮಾಡಿತ್. ಇಕ್ಕ ಇಯಂಗಕ್ 75 ಬಯತ್. ಆದ್ಯ ಪುಸ್ತಕ 1960ಲ್ ಅಚ್ಚಾನ "ನಲ್ಲರಿಮೆ"

ಇವು ವೈಚಾರಿಕ ಲೇಖನ ಎಳ್‌ದುವಾತೂ, ಕವನ ಎಳ್‌ದುವಾತೂ A.I.R ಕಾರ್ಯಕ್ರಮತೂ ಏರ ಪುರ್‌ಡ್ ಬೆಚ್ಚಂಡಿತ್.